
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 6 ಫೆಬ್ರವರಿ 8, 1981 ಬೆಲೆ : ರೂ. 1-00



ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಗಡ್ಡ
ಉರಿಯುತ್ತಿರುವ ಕಣ್ಗಳು
ಹಗಲು ರಾತ್ರಿಗಳನು ಸೀಳಿ
ನಿದ್ದೆಯನ್ನು ಒದ್ದರು
ಕಂಬಳಿಗಳು ಕೊಡಗಿದವು
ಎದ್ದೇಳುವ ರೊಚ್ಚಿಗೆ
ಭೂಕಂಪವಾಯಿತು
ಅವರು ಕೂಗಿದ ಹುಚ್ಚಿಗೆ

- ಸಿದ್ಧಲಿಂಗಯ್ಯ

ರೈತ-ಕಾರ್ಮಿಕರ ಜಾಥಾ ವಿಶೇಷಾಂಕ

ಮಹಾರಾಷ್ಟ್ರದ ರೈತರ ಮಹಾಯಾತ್ರೆ

ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ರೈತ ಆಂದೋಲನಗಳು ತೀವ್ರವಾದ ಸ್ವಲ್ಪ ಸಮಯದಲ್ಲೇ ಮಹಾರಾಷ್ಟ್ರದಲ್ಲಿಯೂ ಆರಂಭವಾದ ರೈತ ಚಳುವಳಿ ರಾಜ್ಯದ ಮಹತ್ವಪೂರ್ಣ ರಾಜಕೀಯ ಘಟನೆಗಳಲ್ಲಿ ಒಂದು. ನವೆಂಬರ್ ೧೦ರಂದು ನಾಸಿಕ್‌ನಲ್ಲಿ ಆರಂಭವಾದ ಈ ಚಳುವಳಿ ಈಗ ವಿದರ್ಭ, ಮರಾಠವಾಡಾ ಹಾಗೂ ಮಹಾರಾಷ್ಟ್ರದ ಇತರ ಹಲವೆಡೆ ಹಬ್ಬಿದೆ.

ನಾಸಿಕ್‌ನಲ್ಲಿ ಕಬ್ಬಿಗೆ ಪ್ರತಿಟನ್ನಿಗೆ 300ರೂ. ಹಾಗೂ ಈರುಳ್ಳಿಗೆ ಪ್ರತಿ ಕ್ವಿಂಟಾಲಿಗೆ 100ರೂ. ಕೊಡಬೇಕೆಂಬ ಬೇಡಿಕೆಗಳೊಂದಿಗೆ ಚಳುವಳಿ ಆರಂಭವಾಗಿ ತಕ್ಷಣ ತನ್ನಿಂದತಾನೇ ನೆರೆಯ ಜಿಲ್ಲೆಗಳಾದ ಧುಳೆ ಹಾಗೂ ಅಹಮದನಗರಗಳಿಗೆ ಹಬ್ಬಿತು. ಈ ಚಳುವಳಿ ಆರಂಭಿಸಿದ್ದು ಶೇತಕರಿ ಸಂಘಟನ್ (ರೈತರ ಸಂಘಟನೆ) ಎಂಬ ಒಂದು ಸ್ವತಂತ್ರ ಸಂಘಟನೆ. ಈ ಸಂಘಟನೆಯ ನಾಯಕರು ಶರದ್ ಜೋಶಿ ಎಂಬ ಒಬ್ಬ ಮಾಜಿ ಐ.ಎ.ಎಸ್. ಅಧಿಕಾರಿ. ವಿದೇಶದಲ್ಲಿ ಸಂಯುಕ್ತರಾಷ್ಟ್ರ ಸಂಘದ ಪರವಾಗಿ ಹಲವು ವರ್ಷ ದುಡಿದ ಮೇಲೆ ಮೂರು ವರ್ಷಗಳ ಹಿಂದೆ ನಿವೃತ್ತರಾದರು. ಅಂದಿನಿಂದ ಪುಣೆಯಲ್ಲಿ ನೆಲೆಸಿ ಬೇಸಾಯಮಾಡುತ್ತಿದ್ದಾರೆ. ಸಂಘಟನೆಯ ಇನ್ನೊಬ್ಬ ನಾಯಕ ಮಾಧವರಾವ್ ಬೋರಸ್ತೆ. ಇವರು ಮಹಾರಾಷ್ಟ್ರ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಸಂಘದ ಅಧ್ಯಕ್ಷರು.

"ರಾಸ್ತಾ ರೋಕೋ, ರೈಲ್ವೇ ರೋಕೋ" (ರಸ್ತೆಯನ್ನು ಅಡ್ಡಗಟ್ಟಿ, ರೈಲು ಅಡ್ಡಗಟ್ಟಿ) ಕರೆಯೊಂದಿಗೆ ಚಳುವಳಿ ಆರಂಭವಾಯಿತು. ಮುಂಬೈ-ದಿಲ್ಲಿ, ಹಾವಡಾ ರೈಲು ಮಾರ್ಗವನ್ನು, ಮುಂಬೈ-ಆಗ್ರಾ ಹೆದ್ದಾರಿಯನ್ನು ಅಲ್ಲಲ್ಲಿ ಅಡ್ಡಗಟ್ಟಲಾಯಿತು. ಪೋಲೀಸರು ಈ ತಡೆಗಳನ್ನು ತೆರವುಮಾಡಲು ಬಲಾತ್ಕಾರವಾಗಿ ಪ್ರಯತ್ನಿಸಿದರು. ಪರಿಣಾಮವಾಗಿ ಕೆಲವು ಕಡೆ ಘರ್ಷಣೆಗಳು ನಡೆದವು. ಶೇರವಾಡಿ ಎಂಬಲ್ಲಿ ಪೋಲೀಸರ ಅಮಾನುಷ ಗುಂಡಿನ ದಾಳಿಗೆ ಇಬ್ಬರು ರೈತರು ಬಲಿಯಾದರು. ನವೆಂಬರ್ 14ರಂದು ಶೇತಕರಿ ಸಂಘಟನ್‌ನ ನಾಯಕರು ಜಿಲ್ಲೆಯ ಎಲ್ಲಾ ಎಂ.ಎಲ್.ಎ. ಹಾಗೂ ಎಂ.ಪಿ.ಗಳಿಗೆ "ರಾಜೀನಾಮೆ ಕೊಡಿ ಅಥವಾ ಘೆರಾವೋ ಅನುಭವಿಸಿ" ಎಂಬ ಎಚ್ಚರಿಕೆ ಕೊಟ್ಟರು. ಅದೇ ಹೊತ್ತಿಗೆ ಚಳುವಳಿಯನ್ನು ಹಾಗೂ 'ರಸ್ತೆ ತಡೆ, ರೈಲು ತಡೆ' ಕಾರ್ಯಕ್ರಮವನ್ನು ಏಕಪಕ್ಷೀಯವಾಗಿ ತಾತ್ಕಾಲಿಕವಾಗಿ ನಿಲ್ಲಿಸುವ ಘೋಷಣೆಯನ್ನೂ ಮಾಡಿದರು. ಇದು ರೈತಚಳುವಳಿಯಲ್ಲಿ ಒಂದು ವಿವಾದದ ವಿಷಯವಾಯಿತು. ಇದಾದ ನಂತರ ಕೆಲವೇ ಸಮಯದಲ್ಲಿ ಸಂಘಟನ್‌ನ ನಾಯಕರನ್ನು ಬಂಧಿಸಲಾಯಿತು. ಜತೆಗೆ ಸಾವಿರಾರು ರೈತಚಳುವಳಿಗಾರರನ್ನು ಬಂಧಿಸಲಾಯಿತು.

ಎಡಮತ್ತು ಪ್ರಜಾಪ್ರಭುತ್ವ ಪಕ್ಷಗಳ ಮಧ್ಯಪ್ರವೇಶ

ನವೆಂಬರ್ 10ರಂದು ಚಳುವಳಿ ಆರಂಭವಾದಕೂಡಲೇ ಎಡ ಮತ್ತು ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳು ಚಳುವಳಿಗೆ ಸಕ್ರಿಯ ಬೆಂಬಲ ನೀಡಿದವು. ಇದನ್ನು ಕೆಲವು ಬೂರ್ಜ್ವಾ ಪತ್ರಿಕೆಗಳು "ತಡವಾಗಿ ಬಂದು ಕಷ್ಟಪಟ್ಟು ಮಧ್ಯದಲ್ಲಿ ತೂರಿಕೊಳ್ಳುವ ಪ್ರಯತ್ನ" ಎಂಬಿತ್ಯಾದಿಯಾಗಿ ಅಪಾರ್ಥ ಕೊಡಲು ಪ್ರಯತ್ನಿಸಿವೆ. ಹೀಗೆ ಹೇಳಿ ಇಂತಹ ಪತ್ರಿಕೆಗಳು ತಮ್ಮ ಅಜ್ಞಾನವನ್ನು ಎಲ್ಲರೆದುರಿಗೆ ಪ್ರಕಟಿಸಿದಂತಾಗಿದೆ. ಯಾಕೆಂದರೆ ಆಗಸ್ಟ್ 31ರಂದು ಮಹಾರಾಷ್ಟ್ರ ರಾಜ್ಯದ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಒಂದು ಸಮಾವೇಶ ನಡೆಸಿದ್ದವು. ರೈತರಿಗೆ ಪ್ರೋತ್ಸಾಹದಾಯಕ ಬೆಲೆಕೊಡಿಸಬೇಕೆಂಬುದು ಈ ಸಮಾವೇಶದ ಮಹತ್ವದ ಬೇಡಿಕೆಗಳಲ್ಲೊಂದು. ಈ ಬೇಡಿಕೆಯನ್ನು ಅಕ್ಟೋಬರ್ 2ರಂದು ನಡೆದ ಸಾಮೂಹಿಕ ಸತ್ಯಾಗ್ರಹದಲ್ಲಿ ಹಾಗೂ ಅಕ್ಟೋಬರ್ 15ರಂದು ನಡೆದ ಮಹಾರಾಷ್ಟ್ರ ಬಂದ್‌ನಲ್ಲಿ ಪುನರುಚ್ಚರಿಸಲಾಗಿತ್ತು. ಅಲ್ಲದೆ ನವೆಂಬರ್ 1 ಹಾಗೂ 2ರಂದು ನಡೆದ ಸಿ.ಪಿ.ಐ.(ಎಂ)ನ ರಾಜ್ಯಸಮಿತಿಯ ಸಭೆಯ ನಿರ್ಣಯದಲ್ಲೂ ಕೃಷಿ ಬೆಲೆಗಳ ವಿಚಾರದಲ್ಲಿ ಸ್ಪಷ್ಟ ಉಲ್ಲೇಖವಿತ್ತು. ಶೇತಕರಿ ಸಂಘಟನ್ 'ರಸ್ತೆ ತಡೆ'ಯ ಕರೆಕೊಡುವ ಮೊದಲೇ ಎಡ ಮತ್ತು ಪ್ರಜಾಪ್ರಭುತ್ವವಾದೀ ಪಕ್ಷಗಳು ನವೆಂಬರ್ 3ರಂದೇ ಡಿಸೆಂಬರ್ 1ರಂದು 'ರಸ್ತೆ ತಡೆ' ಕಾರ್ಯಕ್ರಮಕ್ಕೆ ಕರೆಕೊಟ್ಟಿದ್ದವೆಂಬುದನ್ನು ಈ ಪತ್ರಿಕೆಗಳು ಮರೆತುಬಿಟ್ಟಿರಬೇಕು. ಅದೇನೇ ಇರಲಿ, ರೈತಚಳುವಳಿಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದೀ ವಿರೋಧೀ ಪಕ್ಷಗಳು ಸಕ್ರಿಯವಾಗಿ ಭಾಗವಹಿಸಿ ಚಳುವಳಿಯನ್ನು ಮುಂದುವರೆಸಿದರು.

ನವೆಂಬರ್ 20ರಂದು ವಿದರ್ಭ ಕ್ಷೇತ್ರದಲ್ಲಿ ಹತ್ತಿಬೆಳೆಗಾರರ ಮಹಾಸಂಘ ಪ್ರತಿ ಕ್ವಿಂಟಾಲ್ ಹತ್ತಿಗೆ 700ರೂ. ಕೊಡಬೇಕೆಂದು 'ಚಕ್ಕಾ ಜಾಮ್' (ಚಕ್ರನಿಲ್ಲಿಸಿ) ಚಳುವಳಿ ನಡೆಸಿದರು. ಎಲ್ಲಾ ವಿರೋಧ ಪಕ್ಷಗಳು ಇದನ್ನು ಬೆಂಬಲಿಸಿದವು. ಮುಖ್ಯ ಸ್ಥಳಗಳಲ್ಲಿ ತಮ್ಮ ಎತ್ತಿನ ಗಾಡಿಗಳು, ದಿಮ್ಮಿಗಳು ಇತ್ಯಾದಿಗಳನ್ನಿಟ್ಟು ಈ ಕ್ಷೇತ್ರದ ಎಲ್ಲಾ ಹೆದ್ದಾರಿಗಳನ್ನು ರೈತರು ಮುಚ್ಚಿದರು. ಲಿಕೋಲಾದಲ್ಲಿರುವ ಕೃಷಿ ವಿದ್ಯಾಪೀಠದ ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಒಂದೆರಡು ಕಡೆ ವಿದ್ಯಾರ್ಥಿಗಳ ಮೇಲೆ ಪೋಲೀಸರು ತೀವ್ರ ಲಾಠೀ ಪ್ರಹಾರ ನಡೆಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಮರುದಿನ ರಾಜ್ಯಸಾರಿಗೆ ಬಂದ್ ಯಶಸ್ವಿಯಾಗಿ ನಡೆಯಿತು. ಕೃಷಿ ವಿದ್ಯಾಪೀಠದ ಅನಿರ್ದಿಷ್ಟ ಕಾಲದ ಬಹಿಷ್ಕಾರ ಈಗಲೂ ಮುಂದುವರಿಯುತ್ತಿದೆ. ಸುಮಾರು 5000 ಜನ ಈಗಾಗಲೇ ಬಂಧಿತರಾಗಿದ್ದಾರೆ.

ಈ ಮಧ್ಯೆ ನಾಸಿಕ್‌ನ ಚಳುವಳಿ ತೀವ್ರರೂಪದಲ್ಲಿ ಮುಂದುವರಿದು ನಾಸಿಕ್ ಹಾಗೂ ಠಾಣೆಗಳಲ್ಲಿನ ಜೈಲುಗಳು ರೈತ ಸತ್ಯಾಗ್ರಹಿಗಳಿಂದ ತುಂಬಿಹೋದವು. ಚಳುವಳಿ ಆರಂಭವಾದ ಕೆಲವೇ ದಿನಗಳಲ್ಲಿ ಮಹಾರಾಷ್ಟ್ರ ಕಿಸಾನ್‌ಸಭಾದ ಅಧ್ಯಕ್ಷೆ ಗೋದಾವರಿ ಪರುಳೇಕರ್ ಹಾಗೂ ಸಿ.ಪಿ.ಐ.ನ ಮಹಾರಾಷ್ಟ್ರ ರಾಜ್ಯ ಸಮಿತಿಯ ಕಾರ್ಯದರ್ಶಿ ಮಾಧವರಾವ್ ಗಾಯಕವಾಡ್ ಜೊತೆಯಾಗಿ ನಾಸಿಕ್ ಜಿಲ್ಲೆಯ ಪ್ರವಾಸ ನಡೆಸಿದರು. ನವೆಂಬರ್ 22ರಂದು ರೈತರಿಗೆ ಬೆಂಬಲ ಸೂಚಿಸಿ ಕಾರ್ಮಿಕ ಸಂಘಗಳ ಒಂದು ಸಂಯುಕ್ತ ಸಭೆ ನಡೆಯಿತು. ಆ ದಿನ ನಿಷೇಧಾಜ್ಞೆ ಜಾರಿಯಲ್ಲಿದ್ದರ ಅದನ್ನು ಉಲ್ಲಂಘಿಸಿ ಈ ಸಭೆ ನಡೆಯಿತು. ಅದೇ ರೀತಿ ಜಿಲ್ಲಾದ್ಯಂತ ಇಂತಹ ಸಭೆಗಳು ನಡೆದವು.

ವಿರೋಧ ಪಕ್ಷಗಳ ಕಾರ್ಯಕ್ರಮ

ನವೆಂಬರ್ 21ರಂದು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಸಮನ್ವಯ ಸಮಿತಿಯ ಸಭೆ ನಡೆಯಿತು. ಇವರಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಯು), ಪಿ.ಡಬ್ಲ್ಯು.ಪಿ., ಜನತಾ, ಲೋಕದಳ, ಸಮಾಜವಾದೀ ಮಂಚ್ ಹಾಗೂ ರಿಪಬ್ಲಿಕನ್ ಪಕ್ಷ (ಗವಾಯಿ ಗುಂಪು)ಗಳ ಅನೇಕ ನಾಯಕರು ಭಾಗವಹಿಸಿದ್ದರು. ಅಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ನವೆಂಬರ್ 25ರಿಂದ ಡಿಸೆಂಬರ್ 1ರ ವರೆಗೆ 'ಜಾಗರಣ್ ಸಪ್ತಾಹ' ನಡೆಸುವುದು ಅಂದರೆ ರಾಜ್ಯಾದ್ಯಂತ ಸಭೆಗಳು, ಮೆರವಣಿಗೆಗಳು, ಸಮಾವೇಶಗಳ ಮೂಲಕ ರೈತರ ಸಮಸ್ಯೆಗಳ ಕಡೆಗೆ ಜನರ ಗಮನ ಸೆಳೆದು ಚಳುವಳಿಗೆ ಬೆಂಬಲ ಪಡೆಯುವುದು.

2. ಡಿಸೆಂಬರ್ 1ರಂದು 'ರಾಸ್ತಾ ರೋಕೋ' (ರಸ್ತೆ ತಡೆ) ಕಾರ್ಯಕ್ರಮ.

3. ನಾಸಿಕ್ ಜಿಲ್ಲೆಯ ಮಲೇಗಾಂವ್ ಎಂಬಲ್ಲಿಂದ ಆರಂಭವಾಗಿ ನಾಗಪುರದವರೆಗೆ ರೈತರ ಜಾಥಾ ಅಥವಾ "ದೀರ್ಘಯಾತ್ರೆ". ನಾಗಪುರಕ್ಕೆ ಹೋಗಲು ಕಾರಣ ಅಲ್ಲಿ ಆ ಸಮಯದಲ್ಲಿ ಮಹಾರಾಷ್ಟ್ರ ವಿಧಾನಸಭೆಯ ಅಧಿವೇಶನ ನಡೆಯುತ್ತಿತ್ತು. ಈ ಜಾಥಾ ಡಿಸೆಂಬರ್ 7ರಂದು ಆರಂಭ.

ಈ ಕಾರ್ಯಕ್ರಮಗಳ ಮುಖ್ಯ ಬೇಡಿಕೆಗಳು ಹೀಗಿದ್ದವು:

1. ಎಲ್ಲಾ ಕೃಷಿ ಉತ್ಪಾದನೆಗಳಿಗೆ ಪ್ರೋತ್ಸಾಹದಾಯಕ ಬೆಲೆ ಕೊಡಬೇಕು. ಭತ್ತಕ್ಕೆ ರೂ. 170ರಿಂದ ರೂ. 200, ಗೋದಿಗೆ ರೂ. 200, ಜೋಳಕ್ಕೆ ರೂ. 150-175, ಸೆಜ್ಜೆಗೆ ರೂ. 175, ಹತ್ತಿಗೆ ರೂ. 700, ಈರುಳ್ಳಿ ರೂ. 100. (ಇವೆಲ್ಲಾ ಪ್ರತಿಕ್ವಿಂಟಾಲ್‌ಗೆ), ಕಬ್ಬಿಗೆ ರೂ. 300 (ಪ್ರತಿಟನ್ನಿಗೆ), ಮತ್ತು ಹಾಲಿಗೆ ಪ್ರತಿ ಲೀಟರಿಗೆ ರೂ. 3/-. ಈ ಬೇಡಿಕೆಯನ್ನು ರೈತಾಪಿವರ್ಗದ ಎಲ್ಲಾ ವಿಭಾಗಗಳು ಸ್ವಾಗತಿಸಿವೆ.

2. ಕೃಷಿಕಾರ್ಮಿಕರಿಗೆ ದಿನಕ್ಕೆ 7 ರೂ. ಕನಿಷ್ಟ ವೇತನ ಕೊಡಬೇಕು. ಇದನ್ನು ಜೀವನವೆಚ್ಚ ಸೂಚ್ಯಂಕಕ್ಕೆ ಹೊಂದಿಸಬೇಕು. ಭಾನುವಾರ ರಜಾ ದಿನವಿರಬೇಕು.

ಇದೊಂದು ಮಹತ್ವಪೂರ್ಣ ಬೇಡಿಕೆ. ಶರದ್ ಜೋಶಿಯವರ ಶೇತಕರಿ ಸಂಘಟನ್‌ಗೆ ಈ ಬೇಡಿಕೆಯನ್ನು ಮುಂದಿಡಬೇಕೆಂದು ಅನಿಸಲೇ ಇಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

3. ಚಳುವಳಿಯಲ್ಲಿ ಬಂಧಿತರಾದವರನ್ನು ಕೂಡಲೇ ಬಿಡುಗಡೆ ಮಾಡಿ ಅವರ ಮೇಲಿನ ಆಪಾದನೆಗಳನ್ನು ಹಿಂತೆಗೆದುಕೊಳ್ಳಬೇಕು.

ಈ ಚಳವಳಿಯಲ್ಲಿ ಹೆಂಗಸರು, ಯುವಜನರು, ಮಕ್ಕಳೂ ಕೂಡಾ ಭಾಗವಹಿಸಿ ಬಾಧಿತರಾಗಿದ್ದರೆಂಬುದನ್ನು ಇಲ್ಲಿ ಗಮನಿಸಬೇಕು. ಸಭೆಯಲ್ಲಿ ಚಳವಳಿಗಾರರ ಮೇಲೆ, ರೈತರ ಮೇಲೆ ನಡೆದ ಪೋಲೀಸ್ ಅತ್ಯಾಚಾರಗಳನ್ನು ತೀವ್ರವಾಗಿ ಖಂಡಿಸಲಾಯಿತು.

4. ಎಲ್ಲಾ ದಿನಬಳಕೆಯ ಸಾಮಾನುಗಳ ಬೆಲೆಯನ್ನು 1971ರ ಮಟ್ಟಕ್ಕಿಳಿಸಬೇಕು. ಸಾರ್ವತ್ರಿಕ ವಿತರಣಾ ವ್ಯವಸ್ಥೆಯ ಮೂಲಕ ಅಗತ್ಯ ಸಾಮಾನುಗಳನ್ನು ಕಮ್ಮಿ ಬೆಲೆಯಲ್ಲಿ ಪಟ್ಟಣ ಹಾಗೂ ಹಳ್ಳಿಯ ಬಡಜನರಿಗೆ ದೊರಕುವಂತೆ ಮಾಡಬೇಕು.

5. ಎಲ್ಲಾ ಮಧ್ಯಸ್ಥಿಕೆದಾರರನ್ನು, ಏಜಂಟರನ್ನು, ದಳ್ಳಾಳಿಗಳನ್ನು ಅರ್ಥವ್ಯವಸ್ಥೆಯಿಂದ ತೆಗೆದುಹಾಕಬೇಕು. ಯಾಕೆಂದರೆ ದೊಡ್ಡ ಬಂಡವಾಳಗಾರರು ಹಾಗೂ ಭೂಮಾಲಕರೊಂದಿಗೆ ಸೇರಿಕೊಂಡು ರೈತಾಪಿ ವರ್ಗ, ಕೃಷಿ ಕಾರ್ಮಿಕರು, ಪಟ್ಟಣದ ಕೈಗಾರಿಕಾ ಕಾರ್ಮಿಕರು ಹಾಗೂ ಮಧ್ಯಮ ವರ್ಗಗಳನ್ನು ಸುಲಿಗೆ ಮಾಡುವವರು ಇವರೇ.

6. ಗ್ರಾಮಾಂತರ ನಿರುದ್ಯೋಗವನ್ನು ನಿವಾರಿಸಲು 'ಉದ್ಯೋಗ ಭರವಸೆ ವ್ಯವಸ್ಥೆ'ಯನ್ನು ಸರಿಯಾಗಿ ಜಾರಿಗೆ ತರಬೇಕು. ಇದರಲ್ಲಿ ಬರಪೀಡಿತ ಪ್ರದೇಶಗಳಿಗೆ ಹೆಚ್ಚಿನ ಒತ್ತು ಕೊಡಬೇಕು.

ರೈತ-ಕಾರ್ಮಿಕರ ಐಕ್ಯತೆ

ವಿರೋಧ ಪಕ್ಷಗಳ ಕಾರ್ಯಕ್ರಮದ ಪ್ರಕಾರ ನವೆಂಬರ್ 25 ರಂದು "ಕಾರ್ಮಿಕ-ರೈತ ಐಕ್ಯತೆಯ ದಿನ" ಆಚರಿಸಲಾಯಿತು. ಎಡ ಹಾಗೂ ಪ್ರಜಾಪ್ರಭುತ್ವವಾದೀ ಸಂಘಟನೆಗಳೊಂದಿಗೆ ಸೇರಿ ಸಿ. ಐ. ಟಿ. ಯು. ಹಾಗೂ ಕಿಸಾನ್ ಸಭಾ ಈ ದಿನವನ್ನು ಸಭೆ, ಮೆರವಣಿಗೆ ಮೂಲಕ ರಾಜ್ಯಾದ್ಯಂತ ಆಚರಿಸಿದವು.

ನವೆಂಬರ್ 28ರಂದು ಭತ್ತ ಬೆಳೆಗಾರರ ಸಮ್ಮೇಳನ ಕುಲಾಬಾ ಜಿಲ್ಲೆಯಲ್ಲಿ ನಡೆದು ಅಲ್ಲಿ ಮೇಲಿನ ಬೇಡಿಕೆಗಳ ಬಗ್ಗೆ ವಿವರಿಸಲಾಯಿತು. ನವೆಂಬರ್ 27ರಂದು ಮುಂಬೈಯಲ್ಲಿ ಕಾರ್ಮಿಕ ಸಂಘಗಳ ಒಂದು ಸಂಯುಕ್ತ ಸಮಾವೇಶ ನಡೆದು ರೈತ-ಕಾರ್ಮಿಕ ಸಖ್ಯತೆ ವ್ಯಕ್ತಪಟ್ಟಿತು. ಅಲ್ಲದೆ ಈ ಸಮಾವೇಶದಲ್ಲಿ ಬಳಕೆದಾರರ ಬೆಲೆ ಸೂಚ್ಯಂಕ ಲೆಕ್ಕ ಮಾಡುವುದರಲ್ಲಿ ನಡೆದಿರುವ ಮೋಸವನ್ನು ಬಯಲಿಗೆಳೆಯಲಾಯಿತು. ನವೆಂಬರ್ 30ರಂದು ಇನ್ನೊಂದು ಭಾರೀ ಸಾರ್ವಜನಿಕ ಸಭೆ ನಡೆಯಿತು.

ಡಿಸೆಂಬರ್ 1 ರಂದು ರಾಜ್ಯಾದ್ಯಂತ "ರಸ್ತೆ ತಡೆ" ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಆದಿನ ಗೋದಾವರಿ ಪರುಳೇಕರ್, ಬಾಪುಸಾಹೇಬ್ ಕಲ್ದಾತೆ, ಭಾಯೀ ವೈದ್ಯ ಇತ್ಯಾದಿ ನಾಯಕರೂ ಸೇರಿದಂತೆ ಹತ್ತು ಸಾವಿರಕ್ಕೂ ಮೀರಿ ಕಾರ್ಯಕರ್ತರು ಬಂಧಿ

(11 ನೇ ಪುಟ ನೋಡಿ)

ಕರ್ನಾಟಕ ಪ್ರಗತಿಪರ ಜನತಂತ್ರರಂಗದ ಧ್ಯೇಯ

ಬದಲೀ ಧೋರಣೆಗಳಿಗಾಗಿ ಜನತೆಯ ಹೋರಾಟ

(ಎಂ. ಕೆ.)

ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತು ಮೂವತ್ತಮೂರು ವರ್ಷಗಳಾದುವು. ದೇಶವನ್ನು ಹಲವು ಸರ್ಕಾರಗಳು ಆಳಿದುವು. ದೇಶದಲ್ಲಿ ಒಟ್ಟು ಉತ್ಪಾದನೆ ಮತ್ತು ಸಂಪತ್ತು ಬಹಳಷ್ಟು ವೃದ್ಧಿಸಿದೆ. ಆದರೆ ವಿಪರ್ಯಾಸವೆಂದರೆ ಉತ್ಪಾದನೆ ಹೆಚ್ಚಿದರೂ, ಗರೀಬರ ಶೇಕಡಾವಾರು ಸಂಖ್ಯೆಯೂ ಹೆಚ್ಚಿದೆ. ಇದರರ್ಥ ಸಂಪತ್ತನ್ನೆಲ್ಲಾ ಕೆಲವರೇ ಕೊಳ್ಳೆ ಹೊಡೆದಿದ್ದಾರೆ. ಸ್ವಾತಂತ್ರ್ಯ ದೊರೆತ ಮೇಲೆ ನಮ್ಮ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಾ ಬಂದಿರುವುದೇ ಈ ವಿಪರ್ಯಾಸಕ್ಕೆ ಕಾರಣ. ಸಂಪತ್ತು ಹೆಚ್ಚಿದರೂ, ಇವರ ವಿತರಣೆ ಸರಿಯಾಗಿ ಆಗಿಲ್ಲ. ರೈತರನ್ನು, ದುಡಿಯುವ ವರ್ಗವನ್ನು ಮತ್ತು ಜನಸಾಮಾನ್ಯರನ್ನು ಸುಲಿಗೆ ಮಾಡಿ, ದೊಡ್ಡದೊಡ್ಡ ಬಂಡವಾಳಗಾರರನ್ನು ಇನ್ನೂ ಶ್ರೀಮಂತರಾಗಿಸುವ ಬಂಡವಾಳಶಾಹಿಪರಧೋರಣೆಯನ್ನು ನಮ್ಮನ್ನಾಳಿದ ಸರ್ಕಾರಗಳು ಅನುಸರಿಸಿಕೊಂಡು ಬಂದಿರುವ ಪರಿಣಾಮ ಈ ದುಃಸ್ಥಿತಿ.

ಮತ್ತೆ ಅಧಿಕಾರಕ್ಕೆ ಬಂದ ಶ್ರೀಮತಿ ಇಂದಿರಾಗಾಂಧಿ ಮತ್ತವರ ಪಕ್ಷದಿಂದ ಸಮಸ್ಯೆಗಳ ಪರಿಹಾರವು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಚುನಾವಣೆ ಸಮಯದಲ್ಲಿ ಜನತೆಗಿತ್ತಿರುವ ಯಾವುದೇ ಭರವಸೆಗಳು ಜಾರಿಯಾಗುವ ಲಕ್ಷಣಗಳಿಲ್ಲ. ಬದಲು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಜನತೆಯ ಹಕ್ಕುಗಳನ್ನೇ ಕಿತ್ತುಕೊಳ್ಳುವ ಕ್ರಮವನ್ನು ಕಾಂಗ್ರೆಸ್ ಪಕ್ಷವು ಅನುಸರಿಸುತ್ತಿದೆ. ಸರ್ವಾಧಿಕಾರದತ್ತ ಸಾಗುತ್ತಿರುವುದು ಸ್ಪಷ್ಟವಾಗಿದೆ. ಆಳುವ ಪಕ್ಷವು ಒಂದೆಡೆ ಸರ್ವಾಧಿಕಾರದತ್ತ ಹೋಗುತ್ತಿರುವಂತೆಯೇ ಪ್ರತ್ಯೇಕತಾ ಚಳುವಳಿ, ಜಾತಿ ಮತ್ತು ಕೋಮು ಗಲಭೆಗಳ ಮೂಲಕ ಜನತೆಯ ಐಕ್ಯತೆಯನ್ನು ಹತ್ತಿಕ್ಕುವ ಪ್ರಯತ್ನ ನಡೆದಿದೆ. ಅಸ್ಸಾಮ್ ಚಳುವಳಿಯ ರೂಪ, ಅದಕ್ಕಿರುವ ಕೋಮು ಮತ್ತು ಛಿದ್ರಕಾರಿ ಶಕ್ತಿಗಳ ಬೆಂಬಲಗಳಿಂದ ಇದು ಸ್ಪಷ್ಟ. ಇವೆಲ್ಲವುಗಳೊಂದಿಗೆ ಬೆಲೆಏರಿಕೆ, ನಿರುದ್ಯೋಗ [illegible]ಂತ ಸಮಸ್ಯೆಗಳು ಜನತೆಯನ್ನು [illegible]ವ್ರವಾಗಿ ಕಾಡಿಸುತ್ತಿದೆ. ಈ ಪರಿ[illegible]ತಿಯಲ್ಲಿ ರಾಷ್ಟ್ರದಾದ್ಯಂತ ಸರ್ವಾ[illegible]ಕಾರವನ್ನು ವಿರೋಧಿಸಿ ಪ್ರಜಾಪ್ರ[illegible]ುತ್ವ ಹಕ್ಕುಗಳಿಗಾಗಿ ಹೋರಾ[illegible]ುವ, ಕೋಮು [illegible] ಇತರ [illegible]ಛಿದ್ರಕಾರಿ ಶಕ್ತಿಗಳನ್ನು ವಿರೋಧಿ[illegible]ುವ ಮತ್ತು ಜನತೆಯನ್ನು ತೀವ್ರ[illegible]ವಾಗಿ ಬಾಧಿಸುವ ಬೆಲೆಏರಿ[illegible] ಹೆ[illegible]ತರ ಸಮಸ್ಯೆಗಳ ವಿರುದ್ಧ ಹೋ[illegible]ಡುವ ವಿಶಾಲತಳಹದಿಯ [illegible]ತೆಬೇಕಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ.ಪಿ.ಐ., ಕಾಂಗ್ರೆಸ್ (ಯು), ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಮತ್ತು ಲೋಕದಳ-ಈ ಆರು ಪಕ್ಷಗಳು ರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಪ್ರಯತ್ನಿಸಲು ಮೊದಲು ಮಾಡಿದ್ದು ಸ್ವಾಗತಾರ್ಹ. ಈ ದಿಸೆಯಲ್ಲಿ ಇನ್ನೂ ಚುರುಕಾಗಿ ಕೆಲಸ ನಡೆಯಬೇಕು.

ಈ ಹಿನ್ನೆಲೆ ಮತ್ತು ಕರ್ನಾಟಕ ರಾಜ್ಯದ ವಿಶಿಷ್ಟ ರಾಜಕೀಯ ಪರಿಸ್ಥಿತಿಯಲ್ಲಿ ನಾಲ್ಕು ಪಕ್ಷಗಳು, ಅಂದರೆ ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಯು) ಮತ್ತು ಲೋಕದಳಗಳು ಒಂದಾಗಿ ಕೂತು, ಜಂಟೀ ಹೋರಾಟ ಮಾಡಲು ತೀರ್ಮಾನಿಸಿವೆ. ಕರ್ನಾಟಕ ಪ್ರಗತಿಪರ ಜನತಂತ್ರರಂಗವನ್ನು ರೂಪಿಸಿಕೊಂಡು, ರಾಜ್ಯದ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ನಿರ್ದಿಷ್ಟ ಕಾರ್ಯಕ್ರಮ ಮತ್ತು ಬೇಡಿಕೆಗಳ ಆಧಾರದಲ್ಲಿ ಜನತೆಯ ಚಳುವಳಿ ಬೆಳೆಸುವ ತೀರ್ಮಾನ ಮಾಡಲಾಗಿದೆ. ಇದರ ಪ್ರಥಮ ಹೆಜ್ಜೆಯಾಗಿ ರೈತರ ಜಾಥಾ ಕಾರ್ಯಕ್ರಮವನ್ನು ಸಂಘಟಿಸಲಾಗಿದೆ. ರೈತ-ಕಾರ್ಮಿಕರ ಹೋರಾಟವನ್ನು ಸಂಘಟಿಸುವುದಕ್ಕಾಗಿ "ರೈತ-ಕಾರ್ಮಿಕ ಹೋರಾಟ ಸಮಿತಿ"ಯನ್ನು ರಚಿಸಲಾಗಿದೆ. ಸಧ್ಯ ಸಂಘಟಿಸಿರುವ ರೈತರ ಜಾಥಾಗಳ ಉದ್ದೇಶ: ಜನತೆಯಲ್ಲಿ ರಾಜಕೀಯ ಪ್ರಜ್ಞೆ ಮತ್ತು ತಿಳುವಳಿಕೆ ಉಂಟುಮಾಡುವುದು, ಕಾರ್ಮಿಕ ಮತ್ತು ರೈತರ ಸೌಹಾರ್ದತೆಯನ್ನು ಸಂಘಟಿಸಿ ರೈತರನ್ನೂ ಮತ್ತು ಕಾರ್ಮಿಕರನ್ನೂ ಬೇರ್ಪಡಿಸುವ ಕುತಂತ್ರವನ್ನು ಸೋಲಿಸುವುದು, ಹಳ್ಳಿಯ ಬಡವರನ್ನು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿ ಅವರ ಸಮಸ್ಯೆಗಳತ್ತ ಗಮನ ಹರಿಸುವುದು, ಸರ್ಕಾರದ ಮೋಸವನ್ನು ಜನತೆಗೆ ವಿಶದಪಡಿಸುವುದು, ಎಲ್ಲಾ ವಿಭಾಗದ ಜನತೆಯ ಐಕ್ಯತೆಯ ಮೂಲಕ ರೈತರ ಮತ್ತು ಹಳ್ಳಿಯ ಬಡವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವನ್ನು ಒತ್ತಾಯಿಸುವುದು.



ನರಗುಂದದಲ್ಲಿ ಜಾಥಾ ಪ್ರಾರಂಭದ ದೃಶ್ಯ.

ಇಷ್ಟರಿಂದಲೇ ರೈತರ, ಹಳ್ಳಿಯ ಬಡವರ ಬೇಡಿಕೆಗಳು ಈಡೇರುವುದು ಎಂದು ಭಾವಿಸುವುದು ತಪ್ಪು. ಬೇಡಿಕೆಗಳು ಈಡೇರುವ ತನಕ ಬೇರೆ ಬೇರೆ ರೂಪದಲ್ಲಿ ಹೋರಾಟವನ್ನು ಮುಂದುವರಿಸುವುದು ಅವಶ್ಯ. ರೈತ-ಕಾರ್ಮಿಕ ಹೋರಾಟ ಸಮಿತಿಯು ಚಳುವಳಿಯನ್ನು ಮುನ್ನಡೆಸಲೇಬೇಕು. ಈಗಿನ ಜಾಥಾ ಕಾರ್ಯಕ್ರಮಗಳು ಪ್ರಾರಂಭವಷ್ಟೆ. ರೈತರ ಮತ್ತು ಹಳ್ಳಿಯ ಬಡವರ ಸಮಸ್ಯೆಗಳಲ್ಲದೆ ವಿದ್ಯಾರ್ಥಿ ಯುವಜನತೆ, ಮಹಿಳೆಯರು, ಕಾರ್ಮಿಕ ವರ್ಗ ಮತ್ತಿತರ ವಿಭಾಗದ ಜನತೆಯ ಸಮಸ್ಯೆಗಳೂ ಬಹಳಷ್ಟಿವೆ. ಈ ಎಲ್ಲಾ ವಿಭಾಗದ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ನಿರ್ದಿಷ್ಟ ಬೇಡಿಕೆ ಮತ್ತು ಕಾರ್ಯಕ್ರಮಗಳ ಮೂಲಕ ನಾಲ್ಕೂ ಪಕ್ಷಗಳ ನೇತೃತ್ವದ ಜನತಂತ್ರರಂಗ ಹೋರಾಡಬೇಕು. ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ಮತ್ತು ಹೋರಾಟಗಳ ಮೂಲಕ ರಾಜಕೀಯ ಜಾಗೃತಿ ಮೂಡಿಸುವುದು ಸಾಧ್ಯ. ಇದರೊಂದಿಗೆ ರಾಜ್ಯದಲ್ಲಿ ಶ್ರಮಜೀವಿಗಳ, ಜನಸಾಮಾನ್ಯರ ಪರವಾದ ಎಡ ಪ್ರಜಾಪ್ರಭುತ್ವ ಶಕ್ತಿಯೂ ಬೆಳೆಯುವುದು ಸಾಧ್ಯವಿದೆ. ರಾಜ್ಯದಲ್ಲಿನ ಬೆಳವಣಿಗೆಯು ರಾಷ್ಟ್ರದಲ್ಲೂ ಈ ರೀತಿಯ ಬೆಳವಣಿಗೆಗೆ ದೊಡ್ಡ ಕೊಡುಗೆಯನ್ನು ಮಾಡುವುದು ಖಂಡಿತ. ಕೇವಲ ಒಬ್ಬ ವ್ಯಕ್ತಿಯ ವಿರುದ್ಧವಲ್ಲ, ಬದಲು ನಮ್ಮ ಹೋರಾಟವು ಬದಲೀ ಧೋರಣೆಗಳಿಗಾಗಿ ಇರಬೇಕು.

ರಾಜ್ಯದಲ್ಲಿ ಮಲಪ್ರಭಾ ಅಚ್ಚುಕಟ್ಟು ಪ್ರದೇಶದಿಂದ ಪ್ರಾರಂಭವಾದ ರೈತ ಚಳುವಳಿಯು ಕೋಲಾರದ ತನಕ ವ್ಯಾಪಿಸಿತ್ತು. ಶ್ರೀ ಎಚ್. ಎಸ್. ರುದ್ರಪ್ಪ ನಂತಹ ಮುಖಂಡರೆನಿಸಿದವರು ಮತ್ತು ಸರ್ಕಾರ, ರೈತಚಳುವಳಿಗೆ ದ್ರೋಹ ಬಗೆದ ಹಿನ್ನೆಲೆಯಲ್ಲಿ, ರೈತ ಚಳುವಳಿಯು ಕ್ಷೀಣಿಸುವ ಸಂದರ್ಭ ಬಂದಾಗ ನಾಲ್ಕೂ ಪಕ್ಷಗಳು ಮಧ್ಯೆ ಪ್ರವೇಶಿಸಿ, ಚಳುವಳಿಗೆ ಶಕ್ತಿ ತುಂಬುವ ಕೆಲಸ ಮಾಡಲು ಮುಂದೆ ಬಂದವು. ಚಳುವಳಿಗೆ ಹೊಸ ತಿರುವು, ಸರಿಯಾದ ಮಾರ್ಗದರ್ಶನ ನೀಡುವುದಕ್ಕಾಗಿ ಈ ಪಕ್ಷಗಳು ಮುಂದಾದವು. ಇದಕ್ಕೆ ಮೊದಲೇ ಅಂದರೆ, ಡಿಸೆಂಬರ್ 12ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ರೈತ ಸಂಘ ಮತ್ತು ಕಾರ್ಮಿಕ ಸಂಘಟನೆಗಳು ಬೆಂಗಳೂರಲ್ಲಿ ನಡೆಸಿದ ರಾಜ್ಯಮಟ್ಟದ ಬೃಹತ್ ಪ್ರದರ್ಶನವು ರೈತ ಚಳುವಳಿಗೆ ಹೊಸ ತಿರುವು ನೀಡುವುದಕ್ಕೆ ಮೊದಲಿನ ಪ್ರಯತ್ನವಾಗಿತ್ತು. ಈಗ ನಡೆಯುವ ಪ್ರಯತ್ನವನ್ನು ಯಶಸ್ವಿಯಾಗಿಸಬೇಕಾದರೆ, ಹೋರಾಟವನ್ನು ಹಳ್ಳಿಹಳ್ಳಿಗಳಿಗೆ ತೆಗೆದುಕೊಂಡು ಹೋಗುವುದು ಅವಶ್ಯ. ಹಾಗೆಯೇ, ಹೋರಾಟದ ತಳಹದಿಯನ್ನು ವಿಶಾಲಗೊಳಿಸಲು, ಸಮಾನ ಅಭಿಪ್ರಾಯವುಳ್ಳ ಇತರೆ ಶಕ್ತಿ, ಸಂಘಟನೆಗಳನ್ನು ಸೇರಿಸಿಕೊಳ್ಳಲು ಶತಪ್ರಯತ್ನ ನಡೆಸಬೇಕು.

o

ರೈತನೂ ಕಾರ್ಮಿಕನೂ ಒಂದು
ಒಬ್ಬನಿಗೊಬ್ಬನು ಬಂಧು

ಜಾಥಾದಲ್ಲಿ ಭಾಗವಹಿಸಿದ ನಾಯಕರೊಬ್ಬರ ಹೃದಯಸ್ಪರ್ಶ ಅನುಭವ

ಕೃಷ್ಣೆ ತನ್ನ ಹರಿವನ್ನು ಬೆಂಗಳೂರಿನತ್ತ ಬದಲಿಸಿದಂತಿದೆ

ತುಂಗಭದ್ರಾ, ಮಲಪ್ರಭಾ, ಘಟಪ್ರಭಾ ಮತ್ತು ಇತರ ಹಲವು ನದಿಗಳು ಒಂದೆಡೆ ಸೇರಿ ಶಕ್ತಿಶಾಲೀ ಕೃಷ್ಣಾ ನದಿಯಾಗಿ ವಿಜಯವಾಡಾದ ಆಚೆ ಸಮುದ್ರಕ್ಕೆ ಧುಮುಕುತ್ತವೆ. ಈ ಐಕ್ಯದೀ[illegible]ಲ ತುಮಕೂರಿನಿಂದ ಹಿಡಿದು [illegible]ಮೊಗ್ಗಾ, ಚಿತ್ರದುರ್ಗ, ಬಳ್ಳಾರಿ [illegible]ಂದ ಧಾರವಾಡ, ಬೆಳಗಾಂ, [illegible]ಹಾಗೂ ರಾಯಚೂರು ಜಿಲ್ಲೆಗಳನ್ನು ಆವರಿಸಿದೆ. ಈ ಜಿಲ್ಲೆಗಳಲ್ಲಿ ಆರಂಭಿಸಿ ಮುಂದುವರಿಯುತ್ತಿರುವ ರೈತ ಜಾಥಾಗಳು ಕೃಷ್ಣಾ ನದಿಯಿಂದ ಬೇರೆಯೇ ಆದ ದಾರಿ ಹಿಡಿದು ರಾಷ್ಟ್ರೀಯ ಹೆದ್ದಾರಿ ನಂ. 4 ರಲ್ಲಿ ಬೆಂಗಳೂರಿನತ್ತ ಹರಿಯುತ್ತಿವೆ. ನರಗುಂದದಲ್ಲಿ ಜನವರಿ 16, 1681 ರಂದು ಆರಂಭವಾದ ಜಾಥಾದ ಬಗ್ಗೆ ಗೂಂಡೂರಾವ್ ಗೇಲಿ ಮಾಡಿದಂತೆ ಈ ಎಲ್ಲಾ ನದಿಗಳು ತಮ್ಮ ಮೂಲದಲ್ಲಿ ಬಹಳ ಚಿಕ್ಕವಾಗಿ ಕಂಡರೂ ಅಗಾಧ ಆಂತರಿಕ ಸಾಮರ್ಥ್ಯ ಪಡೆದಿದ್ದವು. ಜಾಥಾ ಹರಿಹರದಲ್ಲಿ ತುಂಗಭದ್ರೆಯನ್ನು ದಾಟುವುದನ್ನು ನಾನು ನೋಡುವ ಸಮಯಕ್ಕೆ ಅದು ಧಾರಾಕಾರವಾಗಿ ಹರಿಯುವ ಪ್ರವಾಹವಾಗಿತ್ತು. ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳನ್ನು ಹಾದುಹೋಗುವಾಗ ನೂರು ಮೈಲುಗಳಿಗೂ ಹೆಚ್ಚು ದೂರ ನಾನು ಈ ಪ್ರವಾಹದಲ್ಲಿದ್ದೆ. ಪ್ರಾರಂಭದಲ್ಲಿ ಅದರೊಳಗೇ ಒಂದಾಗಿ, ಸ್ವಲ್ಪ ಹೊತ್ತು ಅದರ ನೇತೃತ್ವವಹಿಸುತ್ತಾ ಆ ಮೇಲೆ ಬೊಬ್ಬೆಯೆದ್ದ ಕಾಲುಗಳಿಂದ ಪ್ರವಾಹಕ್ಕೂ ಮುಂದಾಗಿ

(10ನೇ ಪುಟ ನೋಡಿ)

ಚೀನಾದ ಹುನಾನ್ ಪ್ರಾಂತ್ಯದಲ್ಲಿ 1926-27ರ ಹೊತ್ತಿಗೆ ಸುಮಾರು ಎರಡು ಕೋಟಿಗೂ ಮಿಕ್ಕಿ ರೈತರಿದ್ದರು. ಅಂದಿನ ಸಂಖ್ಯೆಯ ಶೇಕಡಾ 90ರಷ್ಟಿದ್ದ ಈ ರೈತರು ಚೀನೀ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿದ್ದ ರೈತಸಂಘಗಳಲ್ಲಿ ಅತ್ಯಲ್ಪ ಕಾಲದಲ್ಲೇ ಸಂಘಟಿತರಾಗಿ ಪಾಳೆಯಗಾರಿ ಯಜಮಾನ್ಯ ಪದ್ಧತಿಯ ಭೂಮಾಲಕರು, ಶ್ರೀಮಂತ ರೈತರು ಮತ್ತು ಅವರ ಬೆಂಬಲಿಗರ ರಾಜಕೀಯ,ಆರ್ಥಿಕ,ಆಡಳಿತ ಮತ್ತು ವಂಶಪಾರಂಪರ್ಯವಾದ ಧಾರ್ಮಿಕ ಅಧಿಕಾರಿಗಳನ್ನು ಕಿತ್ತೊಗೆಯುವಲ್ಲಿ ಹೇಗೆ ಯಶಸ್ವಿಯಾದರು ಎಂಬ ಬಗ್ಗೆ ಈ ಪ್ರಾಂತ್ಯದಲ್ಲಿ ಸಂಚರಿಸಿ ಪ್ರತ್ಯಕ್ಷ ಪರಿಶೀಲನೆ ನಡೆಸಿ ಮಾವೋ ಝೆಡಾಂಗ್ ಅವರು ನೀಡಿದ ವರದಿಯ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ಬಡತನ, ನಿರಕ್ಷರತೆ, ನಿರುದ್ಯೋಗ, ಅಂಧಶ್ರದ್ಧೆ, ಜೂಜು ಮತ್ತು ಅಫೀಮು ಸೇವನೆಯಂತಹ ಪಿಡುಗುಗಳಿಂದ ರೈತರು ತಮ್ಮನ್ನು ತಾವೇ ಬಿಡುಗಡೆ ಮಾಡಿಕೊಂಡು ಹೇಗೆ ರಾಷ್ಟ್ರೀಯ ಕ್ರಾಂತಿಯ ಮುಂದಾಳುಗಳಾದರೆಂಬುದನ್ನು ಈ ವರದಿ ಚಿತ್ರವತ್ತಾಗಿ ನಿರೂಪಿಸುತ್ತದೆ. ಮುಂದೆ ಹುನಾನ್ ಪ್ರಾಂತದ ರೈತರ ಚಳವಳವೇ ಪೇಟೆ ಪಟ್ಟಣಗಳ ಕಾರ್ಮಿಕರು, ಬುದ್ಧಿ ಜೀವಿಗಳು, ವಿದ್ಯಾರ್ಥಿ ಮತ್ತು ಯುವಜನರ ಹೋರಾಟಗಳಿಗೆ ಸ್ಫೂರ್ತಿಯಾಯಿತು ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಅಕ್ಟೋಬರ್ 1926ರಿಂದ ಜನವರಿ 1927ರ ಅವಧಿಯ ಕೇವಲ ನಾಲ್ಕು ತಿಂಗಳಲ್ಲಿ ಹುನಾನ್ ಪ್ರಾಂತ್ಯದ ರೈತರ ಬೃಹತ್ ಸಂಘಟನೆ ನಿರ್ಮಿತವಾದದ್ದು, ರಾಜ್ಯಾದ್ಯಂತ ಅವರು ನಡೆಸಿದ ಹೋರಾಟಗಳು, ಗ್ರಾಮಾಂತರ ಪ್ರದೇಶದಲ್ಲಿ ಉಂಟಾದ ಕ್ರಾಂತಿಕಾರಿ ವಾತಾವರಣ ಮುಂತಾದ ಮಹತ್ಸಾಧನೆಗಳು ಚೀನದ ಇತಿಹಾಸದಲ್ಲೇ ಅತ್ಯಪೂರ್ವ. ತಮ್ಮ ವರದಿಯಲ್ಲಿ ಮಾವೋ ಆ ಕಾಲದ ಕ್ರಾಂತಿಯ ಮುಖ್ಯ ಸಾಧನೆಗಳನ್ನೂ ಅವುಗಳ ವಿರುದ್ಧ ಮಾಡಲಾದ ಟೀಕೆಗಳಿಗೆ ಸಮರ್ಪಕವಾದ ಉತ್ತರಗಳನ್ನೂ ನೀಡಿದ್ದಾರೆ.

ಜಗಳಗಳಿಂದ ಪ್ರಾರಂಭಿಸಿ ಎಲ್ಲ ಬಗೆಯ ವಿವಾದಗಳೂ ರೈತಸಂಘಗಳ ವ್ಯಾಪ್ತಿಯಲ್ಲೇ ತೀರ್ಮಾನಗೊಳ್ಳಲಾರಂಭಿಸಿದವು. ಶತಶತಮಾನಗಳಿಂದ ತಮಗೆ ವಿಧೇಯರಾಗಿ ಸಲಾಮು ಹಾಕುತ್ತಿದ್ದ ರೈತರ ಮುಂದೆ ಭೂಮಾಲಕರೇ ಶರಣಾಗಬೇಕಾಯಿತು. ತಮ್ಮ ಮರ್ಯಾದೆ ಕಾಯ್ದುಕೊಳ್ಳಲು ಸಣ್ಣ ದೊಡ್ಡ ಭೂಮಾಲಕರು ರೈತಸಂಘಗಳ ಸದಸ್ಯತ್ವಕ್ಕಾಗಿ ಹಾತೊರೆಯಲಾರಂಭಿಸಿದರು.

ರೈತರು ತಮ್ಮ ಸಂಘಗಳನ್ನು ಕಟ್ಟಿಕೊಂಡಮೇಲೆ ಮೊತ್ತಮೊದಲು ದರು. ಪರಿಹಾರ ಕಾರ್ಯಗಳಿಗಾಗಿ, ಸಹಕಾರ ಸಂಘಗಳ ರಚನೆ ಮತ್ತು ರೈತರಿಗೆ ನೆರವು ನೀಡುವ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ದುಂದುಗಾರ ಶ್ರೀಮಂತ ಭೂಮಾಲಕರಿಂದ ಕಡ್ಡಾಯವಾಗಿ ಮಂತಿಗೆ ರೂಪದಲ್ಲಿ ಸಂಗ್ರಹಿಸಲಾಯಿತು. ದೊಡ್ಡ ಅಪರಾಧಗಳನ್ನು ಮಾಡಿದ ಭೂಮಾಲಕರು ಮತ್ತು ಗುರಿಕಾರರ ಮನೆಗಳ ಮುಂದೆ ಸಾವಿರಾರು ರೈತರು ನಾಲ್ಕಾರು ದಿನಗಳಕಾಲ ಪ್ರದರ್ಶನ ನಡೆಸುತ್ತಿದ್ದರು. ತಪ್ಪಿತಸ್ಥ ಭೂಮಾಲಕರನ್ನೂ ಶ್ರೀಮಂತರನ್ನೂ ಅವರ ತಲೆಗೆ ಕಾಗದದ ಕಿರೀಟವಿಡಿಸಿ ರಸ್ತೆಗಳಲ್ಲಿ ಮೆರವಣಿಗೆ ಮಾಡಿಸುತ್ತಿದರು. ಇನ್ನೂ ಹೆಚ್ಚಿನ ಅಪರಾಧ ಮಾಡಿದವರನ್ನು ಸೆರೆಮನೆಗೆ ಅಟ್ಟಲಾಗುತ್ತಿತ್ತು ಇಲ್ಲವೇ ಗಡೀಪಾರು ಅಥವಾ ಅದಕ್ಕೂ ಹೆಚ್ಚಿನ ಶಿಕ್ಷೆಗಳಿಗೆ ಒಳಪಡಿಸಲಾಗುತ್ತಿತ್ತು. ಇಂತಹ ಕ್ರಮಗಳಿಂದಾಗಿ ಬಹುಸಂಖ್ಯಾತ ರೈತಾಪಿ ಜನರು ಅಲ್ಪಸಂಖ್ಯಾತ ಭೂಮಾಲಕರ ಶ್ರೀಮಂತರ ಮತ್ತು ಊರ ಪುಢಾರಿಗಳ ದರ್ಪ, ದಬ್ಬಾಳಿಕೆಗಳನ್ನು ಹುಟ್ಟಡಗಿಸಿದರು.

ಆಹಾರಧಾನ್ಯಗಳ ಅಕ್ರಮಸಂಗ್ರಹಣೆ, ಕಳ್ಳಸಾಗಾಣಿಕೆ ಇತ್ಯಾದಿಗಳನ್ನು ತಡೆಗಟ್ಟಲು ರೈತಸಂಘಗಳು ಭೂಮಾಲಕರ ಮೇಲೆ, ಶ್ರೀಮಂತರು ಮತ್ತು ವ್ಯಾಪಾರಿಗಳ ಮೇಲೆ ಕಟ್ಟುನಿಟ್ಟಾದ ನಿರ್ಬಂಧ ವಿಧಿಸಿದವು. ಪರಿಣಾಮವಾಗಿ ಬೆಲೆಗಳು ಇಳಿದವು. ಗೇಣಿ, ಮುಂಗೇಣಿಗಳ ಹೆಚ್ಚಳದ ವಿರುದ್ಧವೂ ಹೋರಾಟಗಳು ನಡೆದು ಫಲಕಾರಿಯಾದವು, ಬಡ್ಡಿ ಸಾಲಗಳು ಕಣ್ಮರೆಯಾದವು.

ವನ್ನು ಸ್ಥಳೀಯ ನ್ಯಾಯಾಧೀಶರು ಮತ್ತು ಕ್ರಾಂತಿಕಾರಿ ಸಾರ್ವಜನಿಕ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಜಂಟಿ ಸಮಿತಿಯೇ ನಿರ್ಧರಿಸಲಾರಂಭಿಸಿತು. ಇಂತಹ ಸಮಿತಿಗಳ ಕಾರ್ಯನಿರ್ವಹಣೆಯು ಪ್ರಜಾಪ್ರಭುತ್ವದ ತಳಹದಿಯನ್ನು ಹೊಂದಿದ್ದು ಜನರ ಆಶೋತ್ತರಗಳಿಗೆ ಅನುಗುಣವಾಗಿತ್ತು. ಹಿಂದೆ ರೈತಸಂಘಗಳೇ ಇಲ್ಲದಿದ್ದಾಗ ಒಂದು ಪ್ರದೇಶದಲ್ಲಿ ದಿನಕ್ಕೆ ಸರಾಸರಿ 50-60 ಸಿವಿಲ್ ಅಥವಾ ಕ್ರಿಮಿನಲ್ ಮೊಕದ್ದಮೆಗಳು ನ್ಯಾಯಾಲಯಕ್ಕೆ ಬರುತ್ತಿದ್ದರೆ ಈಗ ಐದು ಆರು ಕೂಡಾ ಬರುತ್ತಿರಲಿಲ್ಲ. ನ್ಯಾಯಾಧೀಶರಿಗೂ ಅಮೀನರಿಗೂ ಕೆಲಸವಿಲ್ಲದಂತಾಗಿ ಅವರ ಕಿಸೆ ಬರಿದಾಯಿತು! ಸೈನಿಕರು, ನ್ಯಾಯಾಧೀಶರು ಮತ್ತು ಅಮೀನರು ರೈತರನ್ನು ಗದರಿಸುವುದು, ಸುಲಿಯುವುದು ಸಂಪೂರ್ಣ ನಿಂತುಹೋಯಿತು; ಮತ್ತು ಅವರೇ ರೈತಸಂಘಗಳಿಗೆ ಭಯಪಡುವಂತಾಯಿತು.

ದೇವಸ್ಥಾನಗಳ ಹಾಗೂ ಹಿರಿಯ ವಂಶಜರ ವಂಶಪಾರಂಪರ್ಯ ಅಧಿಕಾರವನ್ನು ಹಳ್ಳಿಪಟ್ಟಣಗಳ ದೇವತೆಗಳ ಮೇಲಿನ ಧಾರ್ಮಿಕ ಸಂಸ್ಥೆಗಳ ಅಧಿಕಾರವನ್ನೂ ಮತ್ತು ಹೆಂಗಸರ ಮೇಲೆ ಗಂಡಸರಿಗಿದ್ದ ಅಧಿಕಾರವನ್ನೂ ಕಿತ್ತುಹಾಕಲಾಯಿತು. ಹಳೆಯ ದೇವ ವಳಿಯ ಗುರಿಯಾಗಿತ್ತು. ರಾಜಕೀಯ ಆರ್ಥಿಕ ವಿಷಯಗಳನ್ನು ಅಲಕ್ಷಿಸಿ ಧಾರ್ಮಿಕ ಮತ್ತಿತರ ವಿಚಾರಗಳನ್ನೇ ಮುಂದಾಗಿತ್ತೆಗೆದುಕೊಂಡರೆ ಭೂಮಾಲಕರೂ ಅವರ ಬೆಂಬಲಿಗರೂ ಸುಲಭವಾಗಿ ಪ್ರತಿಕ್ರಾಂತಿಯನ್ನು ಹರಡಬಹುದೆಂಬುದು ರೈತರಿಗೆ ತಿಳಿದಿತ್ತು.

ಈ ಅಲ್ಪಾವಧಿಯಲ್ಲಿ ರೈತಸಂಘಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿದ್ದ ರಾಜಕೀಯ ಪ್ರಚಾರ, ಶಿಕ್ಷಣ ಅಭೂತಪೂರ್ವವಾಗಿತ್ತು. ರಾಜಕೀಯ ಘೋಷಣೆಗಳು ಜನಪ್ರಿಯವಾದವು. ಕೆಲವು ರೈತರು ಹಾ. ಸನ್‌ಯಾತ್-ಸೆನರ ಮರಣಶಾಸನವನ್ನು ಓದಿ "ಸ್ವಾತಂತ್ರ್ಯ, ಸಮಾನತೆ ಮತ್ತು ಜನರ ಮೂರುತತ್ವಗಳು (ರಷ್ಯಾದೊಡನೆ ಮೈತ್ರಿ, ಕಮ್ಯುನಿಸ್ಟರೊಂದಿಗೆ ಸಹಕಾರ, ರೈತ, ಮಜೂರರಿಗೆ ನೆರವು) ಮುಂತಾದ ರಾಜಕೀಯ ಶಬ್ದಗಳನ್ನು ಒಂದೊಂದಾಗಿ ಹೆಕ್ಕಿ ಅರ್ಥಮಾಡಿಕೊಳ್ಳಲಾರಂಭಿಸಿದರು. ಜೂಜು, ಜುಗಾರಿ, ಅಫೀಮುಸೇವನೆ ಇತ್ಯಾದಿ ದುಶ್ಚಟಗಳನ್ನು ನಿಷೇಧಿಸಲಾಯಿತು. ಅನವಶ್ಯಕ ಅದ್ದೂರಿಯ ಸಮಾರಂಭಗಳು, ಭಾರೀ ಭೋಜನಕೂಟ, ಜಾದುಗಾರಿಕೆ, ದೇವರ ಹೆಸರಲ್ಲಿ ತಿರುಗಿ ತಿನ್ನುವುದು ಮುಂತಾದವುಗಳನ್ನೂ

ಚೀನಾದ ಹುನಾನ್ ಪ್ರಾಂತದ ರೈತ ಚಳುವಳಿ

ರೈತರ ಹೋರಾಟದಲ್ಲಿ ಅವರ ಸಂಘಟನೆಯೇ ಒಂದು ಮಹತ್ತಾದ ಸಾಧನೆ. 1926ರ ಜನವರಿಯಿಂದ ಜೂನ್ ತಿಂಗಳವರೆಗೆ ಗುಪ್ತವಾಗಿಯೂ ಮುಂದೆ ಸೆಪ್ಟೆಂಬರದ ವರೆಗೆ ಪ್ರತ್ಯಕ್ಷವಾಗಿಯೂ ರೈತರು ಸಂಘಟಿತರಾಗತೊಡಗಿದರು. ಆಗಿನ ಸದಸ್ಯತ್ವ ಮೂರು, ನಾಲ್ಕು ಲಕ್ಷಕ್ಕೆ ಮೀರಿರಲಿಲ್ಲ. ಅದರ ನೇರ ಧುರೀಣತ್ವದಲ್ಲಿ ಸುಮಾರು ಹತ್ತು ಲಕ್ಷ ಜನರಿದ್ದರು. ಅಲ್ಲಿಯ ತನಕ ಯಾವುದೇ ಹೇಳಿಕೊಳ್ಳುವಂತಹ ಹೋರಾಟವನ್ನು ರೈತಸಂಘಟನೆ ನಡೆಸಿರಲಿಲ್ಲ. ಆದರೆ ಮುಂದಿನ ನಾಲ್ಕು ತಿಂಗಳಲ್ಲೇ ರೈತಸಂಘಗಳ ಸದಸ್ಯತ್ವವು ಇಪ್ಪತ್ತು ಲಕ್ಷಕ್ಕೂ ಹೆಚ್ಚಿ ಅವುಗಳ ಪ್ರಭಾವದಲ್ಲಿ ನೂರು ಲಕ್ಷಕ್ಕೂ ಮಿಕ್ಕಿದ ಜನರಿದ್ದರು. ರೈತರ ಪ್ರತಿಕ್ರಿಯೆ ಬಿರುಗಾಳಿಯಂತಿತ್ತು. ಚಳವಳದ ಮಹಾನ್ ಶಕ್ತಿಯ ಮುಂದೆ ತಲೆಬಾಗಿದವರು ಉಳಿದುಕೊಂಡರು. ತಲೆ ಎತ್ತಿದವರು ಉರುಳಬೇಕಾಯಿತು. 'ಎಲ್ಲಾ ಅಧಿಕಾರ ರೈತಸಂಘಗಳಿಗೆ' ಎಂಬ ಘೋಷಣೆ ಕಾರ್ಯರೂಪಕ್ಕೆ ಬಂತು. ಸಾವಿರಾರು ವರ್ಷಗಳಿಂದ ಭೂಮಾಲಕರು ಅನುಭವಿಸಿಕೊಂಡು ಬಂದಿದ್ದ ಹಕ್ಕು, ಅಧಿಕಾರಗಳು ನುಚ್ಚುನೂರಾದವು. ರೈತಸಂಘಗಳೇ ಹಾದಿನ ಎಲ್ಲ ವಿದ್ಯಮಾನಗಳನ್ನು ನೋಡಿಕೊಳ್ಳುವ ಏಕಮಾತ್ರ ಶಕ್ತಿಯಾದವು. ಗಂಡಹೆಂಡಿರ ಸಣ್ಣಪುಟ್ಟ

ಅವರು ಭೂಮಾಲಕರ, ಮುಖ್ಯವಾಗಿ ಸ್ಥಳೀಯ ನಿರಂಕುಶ ಪ್ರಭುಗಳ ಮತ್ತು ಶ್ರೀಮಂತರ ಬಾಲಬಡುಕರ ರಾಜಕೀಯ ಅಧಿಕಾರಗಳನ್ನು ಕಬಳಿಸಿ ಅವರ ವರ್ಚಸ್ಸನ್ನು ನಿರ್ಮೂಲಗೊಳಿಸಲು ಹೋರಾಡಿದರು. ಆರ್ಥಿಕ ಹೋರಾಟಗಳಲ್ಲಿ ರೈತರುಗಳಿಸಿದ್ದ ಯಶಸ್ಸನ್ನು ಕಾಯ್ದುಕೊಳ್ಳಲೂ ಅದನ್ನು ವಿಸ್ತರಿಸಲೂ ಈ ರಾಜಕೀಯ ಹೋರಾಟದಲ್ಲಿ ಜಯಗಳಿಸುವುದು ತೀರಾ ಅಗತ್ಯವಾಗಿತ್ತು. ಈ ಹೋರಾಟದಲ್ಲಿ ತೊಡಗಿಸಿದ್ದ ವಿವಿಧ ವಿಧಾನಗಳೂ ತುಂಬಾ ಪರಿಣಾಮಕಾರಿಯಾಗಿವೆ. ರೈತಸಂಘಗಳು ಸ್ಥಳೀಯ ಸಾರ್ವಜನಿಕ ಹಣಕಾಸಿನ ವ್ಯವಹಾರಗಳ ಲೆಕ್ಕಪತ್ರಗಳ ಪರಿಶೀಲನೆ ನಡೆಸಿ ಭೂಮಾಲಕರು, ದಲ್ಲಾಳಿಗಳು ಮತ್ತು ಶೋಷಕವರ್ಗಗಳು ಭ್ರಷ್ಟ ಅಧಿಕಾರಿಗಳ ಜೊತೆಗೂಡಿ ನಡೆಸಿದ ಅನೇಕ ಅಕ್ರಮ ವ್ಯವಹಾರಗಳನ್ನು ಬಯಲಿಗೆಳೆದವು. ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನತೆಗಳಿಗೂ, ಹಿಂದೆ ರೈತರ ಮೇಲೆ ನಡೆಸಲಾಗಿದ್ದ ಅತ್ಯಾಚಾರ, ಅತಿರೇಕಗಳಿಗೂ ರೈತಸಂಘದ ವಿರುದ್ಧ ನಡೆಸಲಾಗುತ್ತಿದ್ದ ಪಿತೂರಿಗಳಿಗೂ, ಅಫೀಮುಸೇವನೆ ಮತ್ತು ಜುಗಾರಿಗಳನ್ನು ಬಿಟ್ಟುಬಿಡದಿರುವುದಕ್ಕೂ ಭೂಮಾಲಕರು, ಗುರಿಕಾರರು ಮತ್ತು ಶ್ರೀಮಂತರ ಬಾಲಬಡುಕರ ಮೇಲೆ ರೈತಸಂಘಗಳು ಭಾರಿ ಜುಲ್ಮಾನೆ ವಿಧಿಸಿ

ಜಿಲ್ಲೆ ಮತ್ತು ಪಟ್ಟಣಗಳ ಆಡಳಿತಾಧಿಕಾರ ಇದುವರೆಗೆ ಭೂಮಾಲಕರ ಮತ್ತು ಶ್ರೀಮಂತರ ಕಪಿಮುಷ್ಟಿಯೊಳಗಿತ್ತು. ರೈತರ ಹೋರಾಟವು ಹೆಚ್ಚುತ್ತಿದ್ದಂತೆ ಗ್ರಾಮಾಂತರ ಪ್ರದೇಶದ ಆಡಳಿತದಲ್ಲಿ ಭೂಮಾಲಕರನ್ನು ಮತ್ತು ಅವರ ಬೆಂಬಲಿಗರನ್ನು ಸಂಪೂರ್ಣವಾಗಿ ಕಿತ್ತುಹಾಕಲಾಯಿತು. ಆಡಳಿತದ ಎಲ್ಲ ವಿಷಯಗಳೂ ರೈತಸಂಘಗಳ ನಿರ್ಣಯಗಳಿಗನುಗುಣವಾಗಿ ನಡೆಯುವಂತಾಯಿತು. ಭೂಮಾಲಕರ ಸಶಸ್ತ್ರ ಸೇನೆಗಳನ್ನು ಕಿತ್ತು ಹಾಕಿ ರೈತರ ಸೇನೆಗಳನ್ನು ರಚಿಸಲಾಯಿತು. ರೈತರ ಸೇನೆಯು ಹುನಾನ್ ಪ್ರಾಂತಾದ್ಯಂತ ಭರದಿಂದ ಬೆಳೆಯಲಾರಂಭಿಸಿತು. ರೈತ ಸಂಘಗಳು ಭೂಮಾಲಕರ ರಾಜಕೀಯ, ಆರ್ಥಿಕ, ಆಡಳಿತ ಅಧಿಕಾರಿಗಳನ್ನು ಸಂಪೂರ್ಣವಾಗಿ ಕಿತ್ತೊಗೆಯುತ್ತಿದ್ದಂತೆ ನ್ಯಾಯಾಧೀಶರು ಮತ್ತು ಇತರ ಅಧಿಕಾರಿಗಳು ರೈತಸಂಘಗಳ ಪರವಾಗಿಯೇ ಇರಬೇಕಾಯಿತು. ಎಲ್ಲ ಪ್ರಾದೇಶಿಕ ಹಿತಾಸಕ್ತಿಗಳ ವಿಷಯ

ಸ್ಥಾನಗಳಲ್ಲಿ ಮೊದಲಿನಂತೆ ಹೊಡೆಯುವುದೂ, ನೀರಿನಲ್ಲಿ ಮುಳುಗಿಸುವುದೂ, ಜೀವಂತ ಸುಡುವುದೂ ಮರಣದಂಡನೆ ವಿಧಿಸುವುದೂ ಈಗ ಸಾಧ್ಯವಿರಲಿಲ್ಲ. ಹಿಂದೆ ದೇವಸ್ಥಾನಗಳಲ್ಲಿ ಹೆಂಗಸರಿಗೂ ಬಡವರಿಗೂ ಸಾರ್ವತ್ರಿಕ ಉತ್ಸವ ಮತ್ತು ಭೋಜನ ಕೂಟಗಳಲ್ಲಿ ಪ್ರವೇಶವಿದ್ದಿರಲಿಲ್ಲ. ಆದರೆ ರೈತಚಳುವಳಿ ಬಲವಾದಂತೆ ಮಹಿಳೆಯರೂ ಬಡಜನರೂ ಇಂತಹ ಉತ್ಸವಗಳಲ್ಲೂ ಭೋಜನಕೂಟಗಳಲ್ಲೂ ಬಹುಸಂಖ್ಯೆಯಲ್ಲಿ ಬಲಾತ್ಕಾರವಾಗಿ ಪ್ರವೇಶಿಸಲಾರಂಭಿಸಿದರು. ರೈತಚಳುವಳಿಯ ಮುಂದೆ ಧರ್ಮಾಧಿಕಾರಿಗಳಿಗೆ ಚಕಾರವೆತ್ತುವ ಧೈರ್ಯವಿಲ್ಲ! ಹೆಂಗಸರೂ 'ಮಹಿಳಾಸಂಘ' ಕಟ್ಟಿಕೊಂಡು ತಾವೂ ತಲೆಯೆತ್ತಿ ಬಾಳುವ ಅವಕಾಶವನ್ನು ಕಂಡುಕೊಳ್ಳಲಾರಂಭಿಸಿದರು. ಪ್ಲೇಗು,ಸಿಡುಬು, ಮುಂತಾದ ಕಾಯಿಲೆಗಳ ನಿವಾರಣೆಗಾಗಿ ದೆವ್ವಗಳನ್ನೂ ಪಿಶಾಚಿಗಳನ್ನೂ ಆರಾಧಿಸುವುದನ್ನು ನಿಷೇಧಿಸಲಾಯಿತು. ಮೂಢನಂಬಿಕೆಗಳ ವಿರುದ್ಧ, ಕಂದಾಚಾರಗಳ ವಿರುದ್ಧ ಹೋರಾಟ ನಡೆಸಲಾಯಿತು. ಅನೇಕ ದೇವಸ್ಥಾನಗಳಲ್ಲಿ ಶಾಲೆಗಳು ತೆರೆಯಲ್ಪಟ್ಟವು. ಭೂಮಾಲಕರ ರಾಜಕೀಯ ಅಧಿಕಾರವನ್ನು ಕಿತ್ತೊಗೆದು ಆಮೇಲೆ ಕ್ರಮವಾಗಿ ವಂಶಪಾರಂಪರ್ಯ, ಧಾ[illegible] ಮತ್ತು ಪುರುಷಪ್ರಧಾನ ಅಧಿ[illegible]ಳನ್ನು ಕಿತ್ತೊಗೆಯುವುದು

ನಿಷೇಧಿಸಲಾಯಿತು. ದರೋಡೆಗಾರಿಕೆ, ಜೂಜು, ಅಫೀಮುಸೇವನೆಗಳನ್ನು ನಿರ್ನಾಮಮಾಡಿದ ಕೀರ್ತಿ ರೈತಸಂಘಗಳದ್ದೆಂದು ಅವುಗಳ ವೈರಿಗಳೂ ಒಪ್ಪುವಂತಾಯಿತು. ಈ ಒಂದು ವಿಷಯದಲ್ಲಿ ಭೂಮಾಲಕರೂ ರೈತಸಂಘಗಳನ್ನು ಮನಸ್ಸಿನಲ್ಲೇ ಮೆಚ್ಚುತ್ತಿದ್ದರು."

ಹಲವಾರು ತೀರ್ವೆಗಳನ್ನೂ ಕರಕಂದಾಯಗಳನ್ನೂ ಕಡಿಮೆಮಾಡಲಾಯಿತು. ರೈತಸಂಘಗಳ ಚಳುವಳಿಯಿಂದಾಗಿ ವಿದೇಶೀ ಪದ್ಧತಿಯ ಶಿಕ್ಷಣ ಕ್ರಮವನ್ನು ಕೈಬಿಟ್ಟು ಚೀನೀ ಪದ್ಧತಿಯ ಶಾಲೆಗಳನ್ನೇ ತೆರೆಯಲಾಯಿತು. ರೈತರು ಮೆಚ್ಚಿಕೊಳ್ಳುತ್ತಿದ್ದ ಇಂತಹ ಹತ್ತಾರು ಸಾವಿರ ಶಾಲೆಗಳು ತೆರೆಯಲ್ಪಟ್ಟು ಸಾಕ್ಷರತೆ ಹೆಚ್ಚಿ ರೈತರ ಸಾಂಸ್ಕೃತಿಕ ಮಟ್ಟ [illegible] ಉನ್ನತಿಯುಂಟಾಯಿತು.

ಸಹಕಾರ ಚಳುವಳಿಯನ್ನು [illegible] ಪಡಿಸಲಾಯಿತು. [illegible] ಗ್ರಾಮಾಂತರ ಪ್ರದೇಶಗಳ[illegible] ರಸ್ತೆಗಳು ನಿರ್ಮಾ[illegible]ವಾದವು. ಇದಕ್ಕಾಗಿ ಉಂಟಾದ ವೆಚ್ಚ[illegible] ಶ್ರೀಮಂತರೂ, ಭೂಮಾ[illegible] ಭರಿಸುವಂತೆ ಮಾಡಲಾ[illegible]ಯಿತು. ಇದೇ ರೀತಿಯಲ್ಲಿ ಜಲಾ[illegible]ಗಳೂ ನಿರ್ಮಾಣವಾದವು ಇಲ್ಲವೇ

(ಕೊನೇ ಪುಟ ನೋಡಿ)

ಆಪರೇಶನ್ ಬರ್ಗಾ

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಅಧಿಕಾರವಹಿಸಿಕೊಂಡ ಮೇಲೆ ಸೆಪ್ಟೆಂಬರ್ 1978ರಲ್ಲಿ 'ಆಪರೇಶನ್ ಬರ್ಗಾ' (ಅಥವಾ ಬರ್ಗಾ ಕಾರ್ಯಾಚರಣೆ) ಎಂಬ ಹೆಸರಾದ ಕಾರ್ಯಕ್ರಮವನ್ನು ಆರಂಭಿಸಿತು. ಬರ್ಗಾ ಎಂದರೆ ಬಂಗಾಳ ಕ್ಷೇತ್ರದಲ್ಲಿ ಪ್ರಚಲಿತವಿರುವ ಜಮೀನು ಸಂಬಂಧಗಳ ಒಂದು ಪದ್ಧತಿ. ಈ ವ್ಯವಸ್ಥೆಯಲ್ಲಿ ಜಮೀನು ಬೇಸಾಯ ಮಾಡುವಾತ ಬೇರೊಬ್ಬರ ಜಮೀನನ್ನು ಅವರಿಗೆ ಉತ್ಪನ್ನದ ಒಂದು ನಿರ್ದಿಷ್ಟ ಭಾಗವನ್ನು ಸಲ್ಲಿಸುತ್ತೇನೆಂಬ ಕರಾರಿನ ಮೇಲೆ ಉಳುಮೆ ಮಾಡುತ್ತಾನೆ. ಈ ರೀತಿಯ ಉಳುಮೆದಾರನನ್ನು ಬರ್ಗಾದಾರ್ ಎನ್ನುತ್ತಾರೆ. ಪಶ್ಚಿಮ ಬಂಗಾಳದ ಭೂಸುಧಾರಣೆಯ ಕಾನೂನಿಗನುಗುಣವಾಗಿ ಈ ರೀತಿಯ ಬರ್ಗಾದಾರರ ಹೆಸರುಗಳನ್ನು ಒಂದು ನಿರ್ದಿಷ್ಟ ಕಾಲಾವಧಿಯೊಳಗೆ ದಾಖಲುಮಾಡಿಕೊಳ್ಳುವ ತುರ್ತುಕಾರ್ಯಕ್ರಮವಾಗಿ 'ಆಪರೇಶನ್ ಬರ್ಗಾ' ಆರಂಭವಾಯಿತು. ಈ ರೀತಿ ದಾಖಲಾತಿಯ ಕೆಲಸವನ್ನು ಅವರ ಹಿಂದಿನ Settlement Operation ಎಂಬ ಕಾರ್ಯಕ್ರಮದಲ್ಲೂ ಕೈಗೊಳ್ಳಲಾಗಿತ್ತು. ಆದರೆ ಈ ಸಲ ಮತ್ತೆ ಕಾರ್ಯಾಚರಣೆಯನ್ನು ಪ್ರತ್ಯೇಕವಾಗಿ ಕೈಗೊಳ್ಳಲು ಕೆಲವು ಪ್ರಬಲ ಕಾರಣಗಳಿದ್ದವು.

ಬರ್ಗಾ ಹೆಸರು ದಾಖಲು ಮಾಡಿಕೊಳ್ಳುವಲ್ಲಿ ಮುಖ್ಯವಾಗಿ ಮೂರು ಅಡಚಣೆಗಳಿದ್ದವು. ಮೊದಲನೆಯದಾಗಿ ಈ ರೀತಿ ದಾಖಲು ಮಾಡಿಕೊಂಡರೆ ತಮ್ಮನ್ನು ಒಕ್ಕಲೆಬ್ಬಿಸುವವರ ವಿರುದ್ಧ ತಮಗೆ ಕಾನೂನಿನ ರಕ್ಷಣೆ ದೊರೆಯುವುದೆಂದು ಬಹಳಷ್ಟು ಬರ್ಗಾದಾರರಿಗೆ ಗೊತ್ತಿರಲಿಲ್ಲ. ಅಲ್ಲದೆ ಒಂದು ವೇಳೆ ಹೆಸರು ದಾಖಲು ಮಾಡಿಕೊಂಡರೆ ಅವರು ಭೂಮಾಲೀಕರ ಕೋಪಕ್ಕೆ ಗುರಿಯಾಗಬೇಕಾಗುತ್ತಿತ್ತು. ಎರಡನೆಯದಾಗಿ, ಭೂಮಾಲಕರು ಬರ್ಗಾದಾರರನ್ನು ಹಲವು ರೀತಿಗಳಲ್ಲಿ ಶೋಷಿಸುತ್ತಾರೆ. ಪಶ್ಚಿಮ ಬಂಗಾಳದ ಭೂಸುಧಾರಣಾ ಕಾನೂನಿನ ಪ್ರಕಾರ ಭೂಮಾಲೀಕ ನೇಗಿಲು, ಗೊಬ್ಬರ, ಬೀಜ ಕೊಟ್ಟಲ್ಲಿ 50:50ರ ಪ್ರಮಾಣದಲ್ಲಿ, ಹಾಗೆ ಪೂರೈಸದಲ್ಲಿ ಬರ್ಗಾದಾರ್ ಮತ್ತು ಭೂಮಾಲಕ 75:25ರ ಪ್ರಮಾಣದಲ್ಲಿ ಜಮೀನಿನ ಉತ್ಪನ್ನವನ್ನು ಹಂಚಿಕೊಳ್ಳಬೇಕು. ಆದರೆ ವಾಸ್ತವಿಕವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಬರ್ಗಾದಾರನಿಗೆ ತನ್ನ ಪಾಲಿನ ಉತ್ಪನ್ನ ಸಿಗುತ್ತಿರಲಿಲ್ಲ. ಬರ್ಗಾದಾರನ ಹೆಸರು ದಾಖಲಾಗಿರದ ಪಕ್ಷದಲ್ಲಿ ಭೂಮಾಲಕನಿಗೆ ತನ್ನ ಶೋಷಣೆಯನ್ನು ಮುಂದುವರಿಸುವುದು ಸುಲಭದ ಕೆಲಸ. ಹೆಸರು ದಾಖಲಾಗಿದ್ದರೆ ಅವನು ಬರ್ಗಾದಾರನಿಗೆ ಅವನ ಕಾನೂನುಬದ್ಧ ಪಾಲನ್ನು ಕೊಡಲೇಬೇಕಾಗುತ್ತದೆ. ಆದ್ದರಿಂದ ಬರ್ಗಾದಾರ ತನ್ನ ಹೆಸರನ್ನು ದಾಖಲುಮಾಡಿಕೊಳ್ಳದಂತೆ ಭೂಮಾಲೀಕ ಹಾಗೂ [illegible] ಗೂಂಡಾಗಳು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾರೆ. ಬೆದರಿಕೆ ಹಾಕುವುದು, ಹೊಡೆಸುವುದು, ಮನೆಗೆ ಬೆಂಕಿಯಿಡುವುದು ಇತ್ಯಾದಿಗಳೂ ನಡೆಯುತ್ತವೆ. ಆದ್ದರಿಂದ ರೈತಚಳುವಳಿ ಬಲಯುತವಾಗಿರದ ಕ್ಷೇತ್ರಗಳಲ್ಲಿ ಬರ್ಗಾ ದಾಖಲೆಮಾಡಿಸಿಕೊಳ್ಳುವುದು ಅತೀ ಕಷ್ಟಸಾಧ್ಯವಾದ ಕೆಲಸ. ಮೂರನೇಯದಾಗಿ, ಭೂಮಾಲೀಕರು ಸಾಮಾನ್ಯವಾಗಿ ಲೇವಾದೇವಿಗಾರರೂ ಆಗಿರುತ್ತಾರೆ. ಬರ್ಗಾದಾರ ಸಾಮಾನ್ಯವಾಗಿ ತನ್ನ ತುರ್ತಿನ ಅವಶ್ಯಕತೆಗಳನ್ನು ನಡೆಯುವುದಕ್ಕಾಗಿ ಲೇವಾದೇವಿಗಾರನಾದ ಭೂಮಾಲೀಕನ ಮೇಲೆ ಅವಲಂಬಿಸಿರುತ್ತಾನೆ. ಬೇರೆಡೆ ಸುಲಭವಾಗಿ ಸಾಲ ದೊರೆಯುವುದು ಸಾಧ್ಯವಿಲ್ಲವಾದ್ದರಿಂದ ತನ್ನ ಹೆಸರನ್ನು ದಾಖಲೆ ಮಾಡಿಸಿಕೊಂಡು ಭೂಮಾಲೀಕನ ನಿಷ್ಠುರಕಟ್ಟಿಕೊಳ್ಳಲು ಬರ್ಗಾದಾರ್ ಹಿಂಜರಿಯುತ್ತಾನೆ.

ಇವೆಲ್ಲಾವನ್ನು ಗಮನದಲ್ಲಿಟ್ಟುಕೊಂಡು ಬರ್ಗಾದಾರರಿಗೆ ತಮ್ಮ ಹಕ್ಕುಗಳ ಬಗ್ಗೆ, ಹೆಸರನ್ನು ದಾಖಲು ಮಾಡಿಕೊಂಡರೆ ತಮಗಾಗುವ ಪ್ರಯೋಜನಗಳ ಬಗ್ಗೆ, ತಿಳುವಳಿಕೆ ನೀಡುವುದು ತಮ್ಮ ಕೆಲಸವಲ್ಲವೆಂದು ದಾಖಲಾತಿ ಅಧಿಕಾರಿಗಳು ಅದನ್ನು ಸಂಪೂರ್ಣ ಕಡೆಗಣಿಸಿದ್ದರು. ಅಲ್ಲದೆ ದಾಖಲಾತಿ ಕೆಲಸಕ್ಕೆ ಹಳ್ಳಿಗಳಿಗೆ ಹೋದಾಗ ಅವರ ಕ್ಯಾಂಪ್ ಸಾಮಾನ್ಯವಾಗಿ ಶ್ರೀಮಂತರ ಅಥವಾ ಭೂಮಾಲೀಕರ ಮನೆಗಳಲ್ಲೇ ಇರುತ್ತಿತ್ತು. ಇದರಿಂದಾಗಿ ಭೂಮಾಲೀಕರಿಗೆ ಮತ್ತು ಅವರ ಗೂಂಡಾಗಳಿಗೆ ಬರ್ಗಾದಾರರು ತಮ್ಮ ಹೆಸರು ದಾಖಲುಮಾಡಿಕೊಳ್ಳಲು ಈ ಕ್ಯಾಂಪ್‌ಗಳನ್ನು ಪ್ರವೇಶಿಸದಂತೆ ನೋಡಿಕೊಳ್ಳುವುದು ಸುಲಭದ ಕೆಲಸವಾಗುತ್ತಿತ್ತು. ಇವೆಲ್ಲಾ ಕಾರಣಗಳಿಂದ ಬರ್ಗಾದಾರರ ಹೆಸರುಗಳನ್ನು ದಾಖಲುಮಾಡಿಕೊಳ್ಳುವ ಕೆಲಸ ಸಾಕಷ್ಟು ಪ್ರಗತಿಸಾಧಿಸಲೇ ಇಲ್ಲ.

ಆದರೆ 1977ರಲ್ಲಿ ಎಡರಂಗದ ಸರ್ಕಾರ ಅಧಿಕಾರವಹಿಸಿಕೊಂಡೊಡನೇ ಹೊಸ ಗಾಳಿ ಬೀಸಲಾರಂಭಿಸಿತು. ಅದು ಬರ್ಗಾದಾರರ ಹೆಸರುಗಳನ್ನು ದಾಖಲುಮಾಡಿಕೊಳ್ಳುವ ಕೆಲಸವನ್ನು ಶೀಘ್ರವಾಗಿ ಮುಗಿಸಬೇಕೆಂದು ನಿರ್ಧರಿಸಿತು. ಇದಕ್ಕಾಗಿ ಹಳ್ಳಿಯ ಬಡವರ ಬಗ್ಗೆ ದಾಖಲಾತಿ ಅಧಿಕಾರಿಗಳ ನಿಲುವನ್ನು ಪುನರ್‌ರೂಪಿಸುವುದು ಅಗತ್ಯವಾಗಿತ್ತು. ಯಾಕೆಂದರೆ ಬರ್ಗಾದಾರರು ಬಹುಸಂಖ್ಯೆಯಲ್ಲಿ ತಮ್ಮ ಹೆಸರುಗಳನ್ನು ದಾಖಲುಮಾಡಿಕೊಳ್ಳುವಂತೆ ನೋಡಿಕೊಳ್ಳುವಲ್ಲಿ ಇವರ ಪಾತ್ರ ಬಹುದೊಡ್ಡದು. ಅಲ್ಲದೆ ಬರ್ಗಾದಾರರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡಿ ಅವರು ನಿಸ್ಸಂಕೋಚವಾಗಿ ತಮ್ಮ ವಿಚಾರಗಳನ್ನು ಸರ್ಕಾರೀ ಅಧಿಕಾರಿಗಳೆದುರು ವ್ಯಕ್ತಮಾಡಲು ಯುಕ್ತವಾದ ವಾತಾವರಣವನ್ನು ನಿರ್ಮಿಸಿದರೆ ಮಾತ್ರ ಇದು ಸಾಧ್ಯ.

ಈ ಉದ್ದೇಶದಿಂದ ಭೂಸುಧಾರಣಾ ಇಲಾಖೆಯು ಜಿಲ್ಲೆಗಳಲ್ಲಿ ಪುನರ್‌ರೂಪಣಾ ಶಿಬಿರಗಳನ್ನೇರ್ಪಡಿಸಿತು. ಈ ಶಿಬಿರಗಳಲ್ಲಿ ಬರ್ಗಾದಾರರು, ಭೂಹೀನ ಕೃಷಿಕೂಲಿಕಾರರು ಹಾಗೂ ಸರಕಾರದಿಂದ ಸಣ್ಣ ಹಿಡುವಳಿಗಳನ್ನು ಪಡೆದವರು ಇತ್ಯಾದಿ 30-40 ಬಡವರು ಮತ್ತು ಸುಮಾರು 15 ಭೂಸುಧಾರಣಾ ಇಲಾಖೆಯ ಕಿರಿಯ ಅಧಿಕಾರಿಗಳು, ಹಳ್ಳಿಗಳ ಕಾನುಂಗೋಗಳು (ಹಳ್ಳಿಯ ರೆವಿನ್ಯೂ ಇನ್ಸ್‌ಪೆಕ್ಟರು), ಕೃಷಿ ವಿಸ್ತರಣಾಧಿಕಾರಿಗಳು, ಇತ್ಯಾದಿ ಅಧಿಕಾರಿಗಳು ಯಾವ ಭೇದಭಾವವೂ ಇಲ್ಲದೆ 3 ದಿನ ಜೊತೆಗಿದ್ದು ತಮ್ಮ ಅಭಿಪ್ರಾಯ ವಿನಿಮಯ ನಡೆಸಿದರು. ಇಂತಹ ಒಂದು ಶಿಬಿರದಲ್ಲಿ ಭಾಗವಹಿಸಿದ ಕೆಲವು ಸರ್ಕಾರಿಯೇತರ ವ್ಯಕ್ತಿಗಳು ಹಿಂದುಳಿದ ವರ್ಗಗಳಿಗೆ ಸೇರಿದ ಭಾಗ ಬೆಳೆಗಾರರು, ಕೃಷಿ ಕಾರ್ಮಿಕರು ಇತ್ಯಾದಿಯವರು ಹೆಚ್ಚಿರುವ ಕಡೆಗಳಲ್ಲಿ ವಿಶೇಷ ಶಿಬಿರಗಳನ್ನು ಏರ್ಪಡಿಸಿ ಅವರು ಭೂಮಾಲೀಕರ ಭಯವಿಲ್ಲದೆ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಲು ವ್ಯವಸ್ಥೆ ಮಾಡಬೇಕೆಂಬ ಸಲಹೆಯಿತ್ತರು. ಇದನ್ನು ಸರ್ಕಾರ ಸ್ವೀಕರಿಸಿ ಕೂಡಲೇ ಈ ದಿಕ್ಕಿನಲ್ಲಿ ಕಾರ್ಯಾರಂಭಿಸಿತು. ಪಾಟ್ನಬೈರತ್‌ಪುರ ಎಂಬಲ್ಲಿ ಕರಪತ್ರಗಳ ಮೂಲಕ, ಡಂಗುರ ಸಾರಿಸುವ ಮೂಲಕ ಮತ್ತು ವೈಯಕ್ತಿಕ ಪರಿಚಯಗಳ ಮೂಲಕ ವಿಶೇಷ ಶಿಬಿರದ ಬಗ್ಗೆ ವ್ಯಾಪಕ ಪ್ರಚಾರ ನಡೆಸಲಾಯಿತು. ಇದರಿಂದಾಗಿ ಸುಮಾರು 200 ಜನ ತಮ್ಮ ಹೆಸರನ್ನು ದಾಖಲು ಮಾಡಿಸಿದ್ದರು. ಇವರಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಬುಡಕಟ್ಟಿಗೆ ಸೇರಿದವರು. ಇದಾದ ನಂತರ ಸಂಬಂಧಪಟ್ಟ ಭೂಮಾಲಕರಿಗೂ ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶ ಕೊಡಲಾಯಿತು. ಇಂತಹ ಸುಮಾರು 35 objection ಗಳನ್ನು ಪರಿಶೀಲಿಸಿದ ನಂತರ ಅಂತಿಮವಾಗಿ ಈ ಕ್ಷೇತ್ರದಲ್ಲಿ 191 ಬರ್ಗಾದಾರರ ಹೆಸರನ್ನು ದಾಖಲು ಮಾಡಿಕೊಳ್ಳಲಾಯಿತು.

ಈ ವಿಶೇಷ ಶಿಬಿರದ ಯಶಸ್ಸು ಪ್ರೋತ್ಸಾಹದಾಯಕವಾಗಿತ್ತು. ಇದಾದ ನಂತರ ಭೂದಾಖಲೆ ಹಾಗೂ ಸರ್ವೆ ಇಲಾಖೆಯ ಮುಖ್ಯ ಕಚೇರಿಯಲ್ಲಿ ಒಂದು ತರಬೇತಿ ಶಿಬಿರ ನಡೆದು ಬರ್ಗಾ ದಾಖಲಾತಿಯನ್ನು ಶೀಘ್ರವಾಗಿ ಮುಗಿಸಲು ಸಹಾಯಕವಾಗುವ ಕಾರ್ಯವಿಧಾನಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು. ಬರ್ಗಾದಾರರು ಹೆಚ್ಚಾಗಿ ವಾಸಿಸುವ ಕ್ಷೇತ್ರಗಳನ್ನು ಎಚ್ಚರಿಕೆಯಿಂದ ಗುರುತಿಸಿ ಇಂತಹ ಪ್ರತಿಯೊಂದು ಕ್ಷೇತ್ರದಲ್ಲಿ 3-4 ದಿನಗಳ ಶಿಬಿರಗಳನ್ನೇರ್ಪಡಿಸಿ ಕಾನುಂಗೋಗಳು, ಕಿರಿಯ ಭೂಸುಧಾರಣಾ ಅಧಿಕಾರಿಗಳು, ಅಮೀನರು (ಅಂದರೆ ಗ್ರಾಮ ಸರ್ವೇಯರ್‌ಗಳು) ಮತ್ತು ಕೆಲವು ಗುಮಾಸ್ತರ ಮಂಗಡಗಳು ವಿಶೇಷ ರೆವಿನ್ಯೂ ಆಫೀಸರ್ ಅಥವಾ ಸಬ್ ಡಿವಿಜನಲ್ ಭೂಸುಧಾರಣಾ ಅಧಿಕಾರಿಯ ನೇತೃತ್ವದಲ್ಲಿ ತಮತಮಗೆ ವಹಿಸಿದ ಕ್ಷೇತ್ರಗಳಲ್ಲಿ ಗುಂಪು ಸಭೆ, ಡಂಗುರ ಸಾರಿಸುವುದು, ವೈಯಕ್ತಿಕ ಪರಿಚಯ ಹಾಗೂ ಸರ್ಕಾರದ ವಾರ್ತಾ ಮತ್ತು ಸಂಸ್ಕೃತಿ ಇಲಾಖೆಯ ಮೊಬೈಲ್ ಯುನಿಟುಗಳ ಸಹಾಯದಿಂದ ವ್ಯಾಪಕ ಪ್ರಚಾರ ನಡೆಸುತ್ತಿದ್ದವು. ಸಂಜೆಗೆ ಎಲ್ಲರಿಗೂ ಅನುಕೂಲವಾಗುವ ಸ್ಥಳದಲ್ಲಿ ಬರ್ಗಾ ದಾಖಲಾತಿಯಿಂದ ಪ್ರಯೋಜನ ಪಡೆಯಲಿರುವವರ ಸಭೆಯೊಂದಿಗೆ ಈ ಪ್ರಚಾರ ಕಾರ್ಯ ಅಂತ್ಯವಾಗುತ್ತಿತ್ತು. ಈ ಸಭೆಗಳಲ್ಲಿ ಬರ್ಗಾದಾರರ ಹಕ್ಕುಗಳ ಬಗ್ಗೆ, ಬರ್ಗಾ ದಾಖಲೆಯಿಂದ ದೊರೆಯುವ ಕಾನೂನಿನ ಹಾಗೂ ಆರ್ಥಿಕ ಲಾಭಗಳ ಬಗ್ಗೆ ವಿವರಿಸಲಾಗುತ್ತಿತ್ತು.


ಈ ರೀತಿಯ ಕಾರ್ಯಾಚರಣೆಯಿಂದ 11 ತಿಂಗಳ ಅವಧಿಯಲ್ಲೇ 7,32,955 ಬರ್ಗಾದಾರರು ತಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡರು. 1980 ರ ಅಕ್ಟೋಬರ್ ಕೊನೆಯ ಹೊತ್ತಿಗೆ ಈ ಸಂಖ್ಯೆ 10 ಲಕ್ಷಕ್ಕೆ ಏರಿತು. ಈ ಹಿಂದಿನ Settlement Operationನಲ್ಲಿ ದಾಖಲು ಮಾಡಿಕೊಂಡವರ ಒಟ್ಟು ಸಂಖ್ಯೆ 2,41,672 ಎಂದು ಗಮನಿಸಿದರೆ "ಆಪರೇಶನ್ ಬರ್ಗಾ"ದ ಯಶಸ್ಸಿನ ಪರಿಣಾಮ ತಿಳಿಯಬಹುದು. ಹೀಗಿದ್ದರೂ ಇನ್ನೂ ಸುಮಾರು 50%ಕ್ಕಿಂತಲೂ ಹೆಚ್ಚು ಬರ್ಗಾದಾರರು ದಾಖಲಾತಿ ಆಗದೇ ಉಳಿಯಬಹುದೆಂದು ಅಂದಾಜು ಮಾಡಲಾಗಿದೆ. ಜೋತೇದಾರರು ಅಥವಾ ಭೂಮಾಲೀಕರು ಈ ಕಾರ್ಯಾಚರಣೆಯ ವಿರುದ್ಧ ಅಡಚಣೆ ಒಡ್ಡುತ್ತಿರುವುದೇ ಇದಕ್ಕೆ ಕಾರಣ. ಅವರು ಕಲ್ಕತ್ತಾ ಶ್ರೇಷ್ಠ ನ್ಯಾಯಾಲಯದ ಮೂಲಕ ಈ ಕಾರ್ಯಾಚರಣೆಯ ವಿರುದ್ಧ ಒಂದಷ್ಟು ಇಂಜಂಕ್ಷನ್‌ಗಳ ಮೂಲಕ ಮಾತ್ರವಲ್ಲ ಬರ್ಗಾದಾರರು ಮತ್ತು ದಾಖಲಾತಿ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸುವುದರ ಮೂಲಕವೂ ಈ ಕಾರ್ಯಾಚರಣೆಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಕನಿಷ್ಟ 17 ಸ್ಥಳಗಳಲ್ಲಿ ಭೂಮಾಲೀಕರು ಅಥವಾ ಅವರ ಗೂಂಡಾಗಳು ದಾಖಲಾತಿ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದರೆಂದು ವರದಿಯಾಗಿದೆ. ಅಲ್ಲದೆ ಸಾಮಾಜಿಕ, ಆರ್ಥಿಕ ಬಹಿಷ್ಕಾರಗಳ ಮೂಲಕ ಸುಳ್ಳು ಕ್ರಿಮಿನಲ್ ದಾವೆಗಳ ಮೂಲಕ ಬರ್ಗಾದಾರರಿಗೆ ಉಪಟಳ ಕೊಡುತ್ತಿದ್ದಾರೆ. 80ಕ್ಕೂ ಹೆಚ್ಚು ಜನರ ಕೊಲೆಯಾಗಿದೆ. ಇವರಲ್ಲಿ ಹೆಚ್ಚಿನವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಅಥವಾ ಬೆಂಬಲಿಗರು. 'ಆಪರೇಶನ್ ಬರ್ಗಾ'ದ ಮೂಲಕ ಹಳ್ಳಿಗಳಲ್ಲಿ ವರ್ಗಹೋರಾಟ ತೀವ್ರವಾಗಿ ಭೂಮಾಲೀಕರ ಸ್ಥೈರ್ಯ ಉಡುಗಿ ಹೋಗುತ್ತಿದೆಯೆಂಬುದನ್ನು ಇದು ಸೂಚಿಸುತ್ತದೆ.

ಇಷ್ಟೊಂದು ವ್ಯಾಪಕ ಪ್ರಮಾಣದಲ್ಲಿ ನಡೆಯುವ ಕಾರ್ಯಾಚರಣೆಯಲ್ಲಿ, ಅದರಲ್ಲೂ ವಿಶೇಷವಾಗಿ ಲಕ್ಷಾಂತರ ಜನರ ಹಿತಾಸಕ್ತಿ ಅಡಗಿರುವಾಗ ಕೆಲವು ಲೋಪದೋಷಗಳಾಗುವುದು ಸ್ವಾಭಾವಿಕ. ಇದನ್ನು ತಪ್ಪಿಸಲೂ ಕೂಡಾ ಸೂಕ್ತಕ್ರಮಗಳನ್ನು ಕೈಗೊಳ್ಳಲಾಯಿತು. 'ಆಪರೇಶನ್ ಬರ್ಗಾ' ಕಾರ್ಯಾಚರಣೆಯ ಹಿಂದೇನೇ ಇನ್ನೂ ನಾಲ್ಕು ಹಂತಗಳಲ್ಲಿ ಕೆಲಸ ನಡೆಸಲಾಯಿತು. ಖಾನಾಪುರಿ ಬುಜ್ಞಾರಾತ್ (ಪ್ರತ್ಯಕ್ಷ ಪರಿಶೀಲನೆ), ದೃಢೀಕರಣ, ದಾಖಲೆಗಳ ಕರಡು ಪ್ರಕಟಣೆ ಹಾಗೂ ಅಂತಿಮವಾಗಿ ದಾಖಲೆಗಳ ಪ್ರಕಟಣೆ ಇವೇ ಆ ನಾಲ್ಕು ಹಂತಗಳು. 'ಆಪರೇಶನ್ ಬರ್ಗಾ' ಸಮಯದಲ್ಲಾದ ಲೋಪದೋಷಗಳನ್ನು ತೋರಿಸಿಕೊಟ್ಟಲ್ಲಿ ಈ ನಾಲ್ಕು ಹಂತಗಳ ಕಾರ್ಯಕ್ರಮದಲ್ಲಿ ಅದನ್ನು ಸರಿಪಡಿಸಲು ಎಲ್ಲಾ ಅವಕಾಶಗಳಿದ್ದವು.

'ಆಪರೇಶನ್ ಬರ್ಗಾ' ಶೋಷಣೆಗೊಳಗಾದವರ ಆರ್ಥಿಕ ಸ್ಥಿತಿಯನ್ನು ಬದಲಿಸಿಲ್ಲ ಎಂದು ಕೆಲವರು ಟೀಕೆ ಮಾಡುತ್ತಾರೆ. ಹೀಗೆ ಟೀಕೆಮಾಡುವವರು ಈ ಕಾರ್ಯಾಚರಣೆಯನ್ನು ನಿರ್ದಿಷ್ಟ ಅವಧಿಯೊಳಗೆ ಬರ್ಗಾ ದಾಖಲಾತಿಯ ಮೂಲ ಉದ್ದೇಶದಿಂದ ಆರಂಭಿಸಲಾಗಿತ್ತೇ ಹೊರತು ಬರ್ಗಾದಾರರ ಆರ್ಥಿಕ ಸ್ಥಿತಿಯಲ್ಲಿ ನಿರ್ದಿಷ್ಟ ಸುಧಾರಣೆ ತರುವ ಕಾರ್ಯಕ್ರಮವಾಗಿ ಅಲ್ಲ ಎಂಬುದನ್ನು ಮರೆಮಾಚುತ್ತಾರೆ. ಬರ್ಗಾ ದಾಖಲಾತಿಯ ಬಗ್ಗೆ ಎಡರಂಗ ಸರ್ಕಾರ ಅಷ್ಟೊಂದು ಮಹತ್ವಕೊಟ್ಟು ತರಾತುರಿಯಿಂದ ಕೆಲಸ ಆರಂಭಿಸಲು ಎರಡು ಕಾರಣಗಳಿದ್ದವು. 1. ಒಮ್ಮೆ ದಾಖಲಾತಿ ಸರ್ಟಿಫಿಕೇಟ್ ಪಡೆದನೆಂದರೆ ಭೂಮಾಲೀಕನಿಗೆ ಅಂತಹ ಬರ್ಗಾದಾರನನ್ನು ಒಕ್ಕಲೆಬ್ಬಿಸುವುದು ದಾಖಲಾತಿ ಪಡೆಯದ ಬರ್ಗಾದಾರನನ್ನು ಒಕ್ಕಲೆಬ್ಬಿಸುವುದಕ್ಕಿಂತ ಕಷ್ಟದ ಕೆಲಸವಾಗುತ್ತದೆ. 2) ಹಣಕಾಸಿನ ಸಂಸ್ಥೆಗಳ ಮೂಲಕ ಸಹಾಯ ಪಡೆಯಲು ಬರ್ಗಾ ಸರ್ಟಿಫಿಕೇಟ್ ಬರ್ಗಾದಾರನಿಗೆ ಅರ್ಹತೆ ದೊರಕಿಸಿಕೊಡುತ್ತದೆ. ಲೇವಾದೇವಿಗಾರರ ಹಿಡಿತದಿಂದ ಪಾರುಮಾಡಿ ಬರ್ಗಾದಾರನ ಆರ್ಥಿಕ ಸ್ಥಿತಿ ಸುಧಾರಿಸಲು ಎಡರಂಗ ಸರ್ಕಾರ ಬರ್ಗಾ ಕಾರ್ಯಾಚರಣೆಯೊಂದಿಗೇ ಪ್ರತ್ಯೇಕವಾಗಿ ಆರ್ಥಿಕ ಸಹಾಯ ಒದಗಿಸುವ ಯೋಜನೆಗಳನ್ನು ಕೈಗೊಂಡಿದೆ. ಆದರೆ ಇದರಿಂದ ಲೇವಾದೇವಿಗಾರರ ಹಿಡಿತವನ್ನು ಅಲ್ಪಾವಧಿಯಲೇ ಸಂಪೂರ್ಣವಾಗಿ ನಿರ್ನಾಮ ಮಾಡುವುದು ಸಾಧ್ಯವಿಲ್ಲ. ಆದರೆ 'ಆಪರೇಶನ್ ಬರ್ಗಾ' ಮತ್ತು ಅದನ್ನಾಧರಿಸಿದ ಆರ್ಥಿಕ ಸಹಾಯ ಯೋಜನೆಯಿಂದಾಗಿ ಬರ್ಗಾದಾರರ ಸಂಘಟಿತ ಚಳವಳಿ ಶಕ್ತಿಯುತವಾಗಿ ಬೆಳೆಯಲು ಅವಕಾಶ ದೊರೆತಿದೆ.

•

ಇತಿಹಾಸದ ಪುಟಗಳಿಂದ





ಸ್ಮರಣೀಯ ರೈತ ಹೋರಾಟಗಳು

ಭಾರತೀಯ ರೈತ ರಾಜಕೀಯವಾಗಿ ಜಡವಾಗಿರುವವನು, ಅಜ್ಞಾನಿ, ಅನ್ಯಾಯಗಳನ್ನು ತೆಪ್ಪಗೆ ಸಹಿಸಿಕೊಂಡಿರುವವನು ಎಂಬಿತ್ಯಾದಿ ಭಾವನೆಗಳು ಮೊದಲಿನಿಂದಲೂ ಇವೆ. ಆದರೆ ಭಾರತದ ಇತಿಹಾಸವನ್ನು ಕೂಲಂಕುಷವಾಗಿ ವಿಶ್ಲೇಷಿಸಿದರೆ ಇದು ತಪ್ಪೆಂದು ತಿಳಿಯುತ್ತದೆ. ರೈತ ಅನ್ಯಾಯಗಳ ವಿರುದ್ಧ ದಂಗೆ ಎದ್ದಿದ್ದಾನೆ. ಹೋರಾಟ ನಡೆಸಿದ್ದಾನೆ. ಇದು ಇತಿಹಾಸಕಾರನ ಕಣ್ಣಿಗೆ ಬೀಳದಿದ್ದರೆ ಅದು ಅವನ ತಪ್ಪಲ್ಲ. ಬ್ರಿಟಿಷ್ ಭಾರತದಲ್ಲಿ ಇಂತಹ ಹಲವು ದೊಡ್ಡ ಹೋರಾಟಗಳು ನಡೆದಿವೆ. ಇವುಗಳಲ್ಲಿ ಎಂದಿಗೂ ನೆನಪಿಡಬೇಕಾದ್ದು ನಾಲ್ಕು ಹೋರಾಟಗಳು : ಕೇರಳದ ಕಯ್ಯೂರಿನ ಹೋರಾಟ, ಬಂಗಾಳದ ತೇಭಾಗಾ ಚಳುವಳಿ, ಮಹಾರಾಷ್ಟ್ರದ ವಾರಲೀಯರ ಹೋರಾಟ, ಆಂಧ್ರದ ತೆಲಂಗಾಣಾರೈತರ ಸಶಸ್ತ್ರ ಹೋರಾಟ. ಇವೆಲ್ಲವು ರೈತರ ತುರ್ತುಬೇಡಿಕೆಗಳಿಂದ ಆರಂಭವಾದರೂ ಮುಂದೆ ವ್ಯಾಪಕವಾಗಿ ವ್ಯವಸ್ಥೆಯನ್ನು ಪ್ರಶ್ನಿಸುವ ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಅಮೋಘ ಅಧ್ಯಾಯಗಳಾದವು. ಪ್ರಮುಖ ರಾಜಕೀಯ ಘಟನೆಗಳಾದವು. ಇದು ರೈತ ಚಳುವಳಿಯಲ್ಲಿ ರಾಜಕೀಯ ಬೇಡ ಎನ್ನುವವರಿಗೆ ಉತ್ತಮ ಉತ್ತರವಾಗಬಲ್ಲದು. ಈ ಎಲ್ಲಾ ಚಳುವಳಿಗಳೂ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲೇ ನಡೆದವು ಎಂಬುದು ಆಕಸ್ಮಿಕವೇನಲ್ಲ. ಬೇರೆ ಯಾವ ಪಕ್ಷಗಳಿಗೂ ರೈತ ಎಚ್ಚತ್ತುಕೊಳ್ಳುವುದು, ರಾಜಕೀಯದಲ್ಲಿ ಭಾಗವಹಿಸುವುದು ಬೇಕಿರಲಿಲ್ಲ, ಅಂದೂ ಇಂದೂ ಸಹ. ಇದು ಈ ನಾಲ್ಕು ಹೋರಾಟಗಳಿಗೆ ಕಾಂಗ್ರೆಸ್‌ನ ಪ್ರತಿಕ್ರಿಯೆಯಿಂದ ಸ್ಪಷ್ಟವಿದೆ. ಈ ನಾಲ್ಕು ಅಮೋಘ ಹೋರಾಟಗಳು ಇಂದಿನ ರೈತ ಹೋರಾಟಗಳಿಗೆ ಸ್ಫೂರ್ತಿ ತುಂಬಬಲ್ಲುವು. ದಾರಿದೀಪವಾಗಬಲ್ಲುವು.

೧. ಕಯ್ಯೂರು

ಹೋರಾಟ ನಡೆಯುವ ಮೊದಲು ಯಾರೂ ಹೆಸರೇ ಕೇಳಿರದಿದ್ದ ಕುಗ್ರಾಮ ಕಯ್ಯೂರು. ಇದು ಕಾಸರಗೋಡು ತಾಲೂಕಿನಲ್ಲಿದೆ. ಇಲ್ಲಿಯೂ ಬ್ರಿಟಿಷರು ಕಂದಾಯ ವಸೂಲಿಗೆ ಅನುಕೂಲವಾಗಲೆಂದು ನೇಮಿಸಿದ ಜಮೀನುದಾರ ವರ್ಗದ ದರಬಾರು. ಅವರಿಗೆ ಇಲ್ಲಿ ಜನ್ಮಿಗಳು ಎಂದು ಹೆಸರು. ಈ ಜನ್ಮಿಗಳು ಸುಲಿಗೆಗೆ ಕುಖ್ಯಾತರು. ಜನ್ಮಿಗಳು ಹೆಚ್ಚಿನವರು ನಾಯರ್ ಮತ್ತು ಬ್ರಾಹ್ಮಣರಾಗಿದ್ದರೆ ರೈತರಲ್ಲಿ ಕೃಷಿಕೂಲಿಗಾರರಲ್ಲಿ ಹೆಚ್ಚಿನವರು ಕೆಳಜಾತಿಯವರು ಮತ್ತು ಅಸ್ಪೃಶ್ಯರು. ಗೇಣಿಪದ್ಧತಿ ಜಾರಿಯಲ್ಲಿದ್ದ ಈ ಪ್ರದೇಶದಲ್ಲಿ ಒಕ್ಕಲೆಬ್ಬಿಸುವುದು ತೀರಾ ಸಾಮಾನ್ಯ ಸಂಗತಿ. ಅಲ್ಲದೆ ಹಬ್ಬಹರಿದಿನಗಳಲ್ಲಿ ಒಡೆಯನಿಗೆ ವಿಶೇಷ ಕಾಣಿಕೆಗಳನ್ನು ಅರ್ಪಿಸಬೇಕು ಮತ್ತು ಕೆಲವು ಅನ್ಯಾಯದ ಕಡ್ಡಾಯದ ಕಾಣಿಕೆಗಳನ್ನರ್ಪಿಸಬೇಕು.

1930ರ ದಶಕ ಭಾರತದ ದೇಶಪ್ರೇಮಿಗಳು, ದುಡಿಯುವ ಜನತೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲ. ಕೇರಳದಲ್ಲಿ ರೈತರು, ಕೃಷಿ ಕಾರ್ಮಿಕರು ಸಂಘಟಿತರಾಗುತ್ತಿದ್ದರು. 1934ರಲ್ಲಿ ಆರಂಭವಾದ ಕರ್ಷಕ ಸಂಘ (ರೈತಸಂಘ)ದ ಶಾಖೆಗಳೂ, ಕಾಂಗ್ರೆಸ್ ಸಮಿತಿಗಳೂ ಎಲ್ಲಾ ಹಳ್ಳಿಗಳಲ್ಲೂ ಹಬ್ಬಿ ರೈತರಲ್ಲಿ ರಾಜಕೀಯ ಪ್ರಜ್ಞೆ, ವರ್ಗಜಾಗೃತಿ ಹಾಗೂ ದೇಶಪ್ರೇಮ ಜತೆಜತೆಯಾಗಿ ಬೆಳೆಯುತ್ತಿತ್ತು. ಇದೇ ಸಮಯದಲ್ಲಿ ಅಂದರೆ 1937ರಲ್ಲಿ ಕಯ್ಯೂರಿನಲ್ಲಿ ರೈತಸಂಘ ಸ್ಥಾಪನೆಯಾಗಿ ರೈತರ ಸ್ವಯಂಸೇವಕ ಪಡೆ ಸಿದ್ಧವಾಯಿತು. ನಂತರ 1938ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿಗೆ ಹೋದ ರೈತರ ಜಾಥಾದಲ್ಲಿ ಕಯ್ಯೂರಿನ ಎಂಟು ಜನ ಪ್ರತಿನಿಧಿಗಳಿದ್ದರು.

ಕಮ್ಯುನಿಸ್ಟ್ ಪಕ್ಷ ನಿಷಿದ್ಧವಾಗಿದ್ದು ಕಮ್ಯುನಿಸ್ಟರು ಕಾಂಗ್ರೆಸ್, ಕಾಂಗ್ರೆಸ್ ಸಮಾಜವಾದಿ ಪಕ್ಷ ಹಾಗೂ ಕಾರ್ಮಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾಲ ಅದು. 1940ರ ಜನವರಿ 26ರಂದು ಕಮ್ಯುನಿಸ್ಟ್ ಪಕ್ಷದ ಕೇರಳ ಶಾಖೆ ಭೂಗತವಾಗಿದ್ದುಕೊಂಡೇ ಪೋಸ್ಟರುಗಳ ಮೂಲಕ ತನ್ನ ಅಸ್ತಿತ್ವವನ್ನು ಸಾರಿ ಸಾಮ್ರಾಜ್ಯಶಾಹೀ ವಿರೋಧೀ ಸಮರವನ್ನು, ವರ್ಗಸಂಘರ್ಷವನ್ನು ಮೊನಚುಗೊಳಿಸಿತ್ತು. 1940ರ ಸೆಪ್ಟೆಂಬರ್ 15ರಂದು ಕೇರಳದಾದ್ಯಂತ ನಡೆದ "ದಬ್ಬಾಳಿಕೆ ವಿರೋಧಿ ದಿನಾಚರಣೆ" ಶ್ರಮಜೀವಿಗಳ ನೇತೃತ್ವದ ಸ್ವಾತಂತ್ರ್ಯ ಹೋರಾಟವನ್ನು ಮೇಲಿನ ಮಜಲಿಗೆ ಕೊಂಡೊಯ್ದಿತ್ತು.


ಕಯ್ಯೂರಿನಲ್ಲಿ ಸಂಘಟನೆ

ಈ ಹಿನ್ನೆಲೆಯಲ್ಲಿ ಕಯ್ಯೂರು ರೈತ ಸಂಘದ ಸತ್ವಪರೀಕ್ಷೆಯ ಕಾಲ ಇದಾಗಿತ್ತು. 1941ರ ಆದಿಭಾಗದಲ್ಲಿ ನೀಲೇಶ್ವರ ಗ್ರಾಮದ ಜಮೀನ್ದಾರ ತನ್ನೊಬ್ಬ ರೈತ ತಂಡಲತ್ ಅಂಬಾಡಿ ಎಂಬಾತನಿಗೆ ಅವನ ಹಿಂದಿನ ವರ್ಷದ ದುಡಿಮೆಯ ಫಲವನ್ನು ಕುಯಿಲು ಮಾಡದೆ ಬರಿಗೈಯಲ್ಲೇ ಜಮೀನು ಬಿಡಬೇಕೆಂದು ಹೇಳುವ ನ್ಯಾಯಾಸ್ಥಾನದ ಆಜ್ಞೆ ತಂದ. ಆದರೆ ರೈತ ಸಂಘ ಇದನ್ನು ಪ್ರತಿಭಟಿಸಿ ಅಂಬಾಡಿಯ ಪರವಾಗಿ ಕುಯಿಲು ನಡೆಸಿತು. ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಯಿತು. ಆದರೆ ಮಂಗಳೂರಿನ ಜಿಲ್ಲಾ ಕೋರ್ಟಿನವರೆಗೆ ಹೋಗಿ ಆಪಾದಿತರು ಖುಲಾಸೆಯಾದರು.

ಆ ಕೂಡಲೇ ವಿಜಯದ ಮೆರವಣಿಗೆ ನಡೆಸಬೇಕೆಂದು ರೈತಸಂಘ ತೀರ್ಮಾನಿಸಿತು. ಸಮವಸ್ತ್ರಧಾರಿ ಯುವಕರನ್ನೊಳಗೊಂಡ ಮೆರವಣಿಗೆ ನದಿಯ ದಂಡೆಯಿಂದ ಗುಡ್ಡದ ಬುಡದ ತನಕ 'ಸಾಮ್ರಾಜ್ಯಶಾಹಿ ನಾಶವಾಗಲಿ', 'ಜನ್ಮಿತ್ವ ನಾಶವಾಗಲಿ', 'ಸೈನ್ಯ ಸೇರಬೇಡಿ', 'ಯುದ್ಧ ನಿಧಿಗೆ ಚಂದಾ ನೀಡಬೇಡಿ' ಇತ್ಯಾದಿ ಘೋಷಣೆ ಕೂಗುತ್ತಾ ಸಾಗಿತು.

ಅದೇ ದಿನ ಮೆರವಣಿಗೆಯಲ್ಲಿದ್ದ ಏಳು ಪ್ರಮುಖ ನಾಯಕರನ್ನು ಭಾರತ ರಕ್ಷಣಾ ಶಾಸನದನ್ವಯ ಬಂಧಿಸಲು ವಾರೆಂಟ್ ಹೊರಟಿತು. ಇದರ ಸುಳಿವು ಸಿಕ್ಕಿ ಅವರು ಒಂದು ಚಹದಂಗಡಿಯಲ್ಲಿ ತಲೆಮರೆಸಿಕೊಂಡರು. ಇದನ್ನು ಪತ್ತೆ ಮಾಡಿದ ಪೋಲೀಸ್ ಪಡೆಯೊಂದು ಅಲ್ಲಿಗೆ ಬಂದು ಲಾಠಿ ಪ್ರಹಾರ ನಡೆಸಿತು. ಆದರೆ ಕತ್ತಲು ವ್ಯಾಪಿಸಿದ್ದರಿಂದ ಇಬ್ಬರು ಮಾತ್ರ ಬಂಧಿತರಾದರು.

ಈ ರಾತ್ರಿಯ ದೌರ್ಜನ್ಯವನ್ನು ಪ್ರತಿಭಟಿಸಿ ಮರುದಿನ ಸುತ್ತಮುತ್ತಲಿನ ಗ್ರಾಮಗಳ ರೈತರೆಲ್ಲ ಸೇರಿ ಮೆರವಣಿಗೆ ನಡೆಸಿದರು. ಮೆರವಣಿಗೆ



ಹಿಂದಿರುಗುವಾಗ ಹಿಂದಿನ ದಿನದ ಪೋಲೀಸ್ ಪಡೆಯಲ್ಲಿದ್ದ ಪೋಲೀಸ್ ಕಾನ್‌ಸ್ಟೇಬಲ್ ಸುಬ್ರಾಯ ಎದುರಾದ. ಅವನನ್ನು ಕಂಡು ರೊಚ್ಚಿಗೆದ್ದ ರೈತರು ಅವನನ್ನು ಬಾವುಟ ಹಿಡಿದು ತಮ್ಮ ಜತೆ ಬರುವಂತೆ ಒತ್ತಾಯ ಮಾಡಿದರು. ಸ್ವಲ್ಪದೂರ ನಿರುಪಾಯನಾಗಿ ನಡೆದ ಸುಬ್ರಾಯ ಇದ್ದಕ್ಕಿದ್ದಂತೆ ಬಾವುಟ ಎಸೆದು ಅದರ ಕೋಲುಮುರಿದು ಅದರಿಂದಲೇ ಹಿಂದೆ ಬರುತ್ತಿದ್ದವರಿಗೆ ಹೊಡೆದು ನದಿಯತ್ತ ಧಾವಿಸಿದ. ಹಿಂಬಾಲಿಸುತ್ತಿದ್ದವರಿಂದ ತಪ್ಪಿಸಿಕೊಳ್ಳಲು ನದಿಗೆ ಹಾರಿದ. ಜನ ಅವನತ್ತ ಕಲ್ಲು ತೂರಲಾರಂಭಿಸಿದರು. ಸುಬ್ರಾಯ ಮುಳುಗಿದವ ಮತ್ತೆ ಏಳಲಿಲ್ಲ.

ಪೋಲೀಸ್ ಪಿಶಾಚನೃತ್ಯ

ಕ್ರೌರ್ಯಕ್ಕೆ ಕುಖ್ಯಾತವಾದ ಮಲಬಾರ್ ಪೋಲೀಸ್‌ರ ಶಿಬಿರಗಳು ಕಯ್ಯೂರು ಮತ್ತು ಸುತ್ತಮುತ್ತಲಿನ ಏಳು ಗ್ರಾಮಗಳಲ್ಲಿ ಕಾಣಿಸಿಕೊಂಡವು. ಪೋಲೀಸ್ ದಮನಕಾಂಡ ಆರಂಭವಾಯಿತು. ಇದನ್ನರಿತ ರೈತರು, ರೈತಸಂಘದ ಕಾರ್ಯಕರ್ತರು ಕಾಡುಮೇಡುಗಳಲ್ಲಿ ತಲೆಮರೆಸಿಕೊಂಡರು. ಪೋಲೀಸರಿಂದ ಕೈಗೆ ಸಿಕ್ಕಿದ ಬಡಪಾಯಿಗಳನ್ನು ಹೊಡೆಯುವುದು, ಸ್ತ್ರೀಯರ ಮಾನಭಂಗ, ಸಾಮಗ್ರಿಗಳ ಲೂಟಿ, ಭೂಗತರಿಗಾಗಿ ಶೋಧ ಈ ಪಿಶಾಚನೃತ್ಯ ವಾರಗಟ್ಟಲೆ ನಡೆಯಿತು. ರೈತಚಳುವಳಿಗೆ ಸಂಬಂಧವಿಲ್ಲದವರನ್ನೂ ಬಂಧಿಸಲಾಯಿತು. ಬಿಡುಗಡೆಯಾಗಬೇಕಾದರೆ 'ಕಾಣಿಕೆ' ಸಲ್ಲಿಸಬೇಕಾಗಿತ್ತು. ತಾವು 'ಗಾಂಧೀ ಸಂಘ'ದವರು ಎಂದು ಹೇಳಿಕೊಳ್ಳುತ್ತಿದ್ದ ಕೆಲವು 'ದೇಶಪ್ರೇಮಿ'ಗಳು "ಶಾಂತಿಪಾಲಕ"ರಿಗೆ ಸಹಾಯಮಾಡುತ್ತಿದ್ದರು.

ಆದರೆ ಈ ಅಮಾನವೀಯತೆಯ ಮಾರಣ ಹೋಮವನ್ನು 'ಮಾತೃಭೂಮಿ', 'ರಾಷ್ಟ್ರಬಂಧು' ಮುಂತಾದ ಪತ್ರಿಕೆಗಳವರು ಹಲವು ಗಣ್ಯ ವ್ಯಕ್ತಿಗಳು ಬಯಲಿಗೆಳೆದು ಪ್ರತಿಭಟಿಸಿದರು. ಇದರಿಂದ ಅತ್ಯಾಚಾರ ಸ್ವಲ್ಪ ಕಡಿಮೆಯಾಯಿತಾದರೂ ಭೂಗತರ ಬೇಟೆ ಮುಂದುವರೆಯಿತು. ಹಲವರು ಸೆರೆಸಿಕ್ಕರು. ಇ. ಕೆ. ನಯನಾರ್ (ಕೇರಳದ ಈಗಿನ ಮುಖ್ಯಮಂತ್ರಿ) ಸೇರಿದಂತೆ 61 ಜನ ಕೊಲೆ ಆರೋಪಿಗಳ ಪಟ್ಟಿ ಸಿದ್ಧವಾಯಿತು. ನಯನಾರ್ ಭೂಗತರಾಗಿದ್ದು ಸೆರೆಸಿಗದ್ದರಿಂದ ನಂತರ ಅವರ ಹೆಸರನ್ನು ಕೈಬಿಡಲಾಯಿತು. 60 ಜನರ ಮೇಲೆ ಕೊಲೆ, ದೊಂಬಿ, ಮಾರಕ ಆಯುಧಗಳನ್ನು ಹೊಂದಿದ್ದು, ಸರ್ಕಾರಿ ಉದ್ಯೋಗಿಗಳ ಮೇಲೆ ಹಲ್ಲೆ, ಯುದ್ಧ ವಿರೋಧಿ ಕಾರ್ಯಾಚರಣೆ, ಕಮ್ಯುನಿಸ್ಟ್ ಚಟುವಟಿಕೆ, ಕ್ರಾಂತಿಗೀತೆ, ಘೋಷಣೆಗಳನ್ನು ಕೂಗಿದ್ದು ಇತ್ಯಾದಿ ಆರೋಪವಿತ್ತು. ಆರೋಪಿಗಳ ಪರವಾಗಿ ಮದ್ರಾಸಿನ ಪಿ. ಕೆ. ಪಿಳ್ಳೈ ಮತ್ತು ಮಂಗಳೂರಿನ ಪ್ರಗತಿಪರ ರಂಗನಾಥರಾವ್ ತಲ್ಚೇರಿಕರ್ ಯಾವ ಪ್ರತಿಫಲವನ್ನೂ ಸ್ವೀಕರಿಸದೆ ವಾದಿಸಿದರು. ಪೋಲೀಸರು ಬೆದರಿಕೆ, ಆಮಿಷತೋರಿಸಿ 74 ಸಾಕ್ಷಿಗಳನ್ನು ತಂದರು. ಕೊನೆಗೆ ನ್ಯಾಯಾಧೀಶರು "ಈ ಗುಂಪಿನಲ್ಲಿ ಮರಣಾಂತಿಕ ಪೆಟ್ಟುಕೊಟ್ಟ ವ್ಯಕ್ತಿ ಯಾರು ಎಂದು ಬೊಟ್ಟುಮಾಡಿ ತೋರಿಸುವುದು ಆಗದೇ ಇರಬಹುದು. ಪ್ರಾಯಶಃ ಇವರಲ್ಲಿ ಯಾರೂ ಅದನ್ನು ಮಾಡದಿರಬಹುದು. ಆದರೂ ಮಡತಿಲ್ ಅಪ್ಪು, ಪೊಡವರ ಕುಂಞಂಬು ನಾಯರ್, ಕೊಯಿತಟ್ಟಿಲ್ ಚಿರುಕುಂಡನ್, ಚೂರಿಕಾಡನ್ ಕೃಷ್ಣನ್ ನಾಯರ್, ಪಳ್ಳಿಕಲ್ ಅಬೂಬಕರ್ ಇವರನ್ನು ಗಲ್ಲಿಗೇರಿಸುವುದು ನ್ಯಾಯಸಮ್ಮತ" ಎಂದು ತೀರ್ಪಿತ್ತರು. 38 ಜನರ ಖುಲಾಸೆಯಾಗಿ ಉಳಿದವರಿಗೆ ಬೇರೆಬೇರೆ ಅವಧಿಗಳ ಶಿಕ್ಷೆಯಾಯಿತು. ಚೂರಿಕ್ಕಾಡನ್ ಕೃಷ್ಣನ್‌ನಾಯರ್ ಅಪ್ರಾಪ್ತವಯಸ್ಕನಾದ್ದರಿಂದ ಅವನನ್ನು ಬಾಲಾಪರಾಧಿಗಳ ಶಾಲೆಗೆ ಸೇರಿಸಲಾಯಿತು.

ನಾಲ್ವರು ಹುತಾತ್ಮರಾದರು

ಅಪೀಲು ಮದ್ರಾಸ್ ಹೈಕೋರ್ಟ್‌ನಿಂದ ಪ್ರಿವಿ ಕೌನ್ಸಿಲ್ ವರೆಗೂ ಹೋಯಿತು. ನಾಲ್ವರಿಗೆ ಮರಣ ದಂಡನೆ ಖಾಯಂ ಆಯಿತು. 1942 ಜುಲೈನಲ್ಲಿ ಕಮ್ಯುನಿಸ್ಟ್ ಪಕ್ಷ ಕಾನೂನುಬದ್ಧವಾದ ಮೇಲೆ ಕಯ್ಯೂರು ವೀರರ ಪ್ರಾಣ ಉಳಿಸುವ ಚಳುವಳಿ ಆರಂಭವಾಯಿತು. ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷ ಕೂಡಾ ಎಲ್ಲಾ ಪ್ರಯತ್ನಗಳನ್ನು ಮಾಡಿತು. ಆದರೂ ಉಪಯೋಗವಾಗಲಿಲ್ಲ.

ಮಾರ್ಚ್ 29ರಂದು ಬೆಳಿಗ್ಗೆ ನಾಲ್ವರೂ ವೀರರು 'ಇಂಕ್ವಿಲಾಬ್ ಜಿಂದಾಬಾದ್', 'ಕಮ್ಯುನಿಸ್ಟ್ ಪಾರ್ಟಿ ಜಿಂದಾಬಾದ್', 'ಸಾಮ್ರಾಜ್ಯಶಾಹಿ ನಾಶವಾಗಲಿ', 'ಜನ್ಮಿತ್ವ ನಾಶವಾಗಲಿ' ಎಂದು ಕೂಗುತ್ತಾ ಗಲ್ಲಿಗೇರಿದರು.

೨. ತೇಭಾಗಾ

ಬಂಗಾಳದ ತೇಭಾಗ ಚಳುವಳಿ ಭಾರತದ ರೈತ ಚಳುವಳಿಗಳಲ್ಲಿ ಇನ್ನೊಂದು ಪ್ರಮುಖ ಚಳುವಳಿ. ಇದು ಸಹ ನಡೆದದ್ದು ಸಾಮ್ರಾಜ್ಯಶಾಹಿಯ ವಿರುದ್ಧ ಭಾರತದ ದುಡಿಯುವ ಜನತೆಯ ಸಂಗ್ರಾಮದ ಕೊನೆಯ ಘಟ್ಟಗಳಲ್ಲಿ. (1946-1948)

ಬೇರೆಡೆಯಂತೆ ಬಂಗಾಳದಲ್ಲಿಯೂ ಜಮೀನ್ದಾರಿ ಪದ್ಧತಿ ರೈತರ ಮೇಲೆ ಬ್ರಿಟಿಷರು ಹೊರಿಸಿದ ಪದ್ಧತಿ. ಇದು ಮಾತ್ರವಲ್ಲದೆ ತಮ್ಮ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಮಾಲುಗಳಿಗೆ, ವಾಣಿಜ್ಯ ಬೆಳೆಗಳಿಗಾಗಿ ಆಹಾರ ಬೆಳೆಗಳ ಜಮೀನನ್ನು ಕಡಿಮೆಮಾಡಿದರು. ಇದರಿಂದ ಹಲವಾರು ರೈತರು ಜಮೀನು ಕಳೆದುಕೊಂಡರು. ಬಂಗಾಳದ ಕೃಷಿ ಸಂಬಂಧಗಳು ಬೆಳೆಪಾಲು (Share Cropping) ಪದ್ಧತಿಯವು. ಈ ಪದ್ಧತಿಯ ಪ್ರಕಾರ ರೈತನಿಗೆ ಜಮೀನುದಾರ ಭೂಮಿಯನ್ನು ಕೊಡುತ್ತಾನೆ. ರೈತ ಬೀಜ, ಗೊಬ್ಬರ, ನೊಗ, ಎತ್ತುಗಳು ಎಲ್ಲದರ ಖರ್ಚು ಮತ್ತು ಶ್ರಮವಹಿಸಿಕೊಳ್ಳಬೇಕು. ಬಂದ ಉತ್ಪನ್ನದಲ್ಲಿ ಅರ್ಧಭಾಗ ಜಮೀನುದಾರನಿಗೆ ಕೊಡಬೇಕು. ಈ ವ್ಯವಸ್ಥೆ ಒಂದು ವರ್ಷಕ್ಕೆ

ಉಲ್ಬಣಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಉಂಟೆ ?

ಇಂದು ರೈತ ಎಚ್ಚೆತ್ತಿದ್ದಾನೆ; ಹೋರಾಟದ ಹಾದಿ ಹಿಡಿದಿದ್ದಾನೆ. 'ಶಾಂತಿಪ್ರಿಯ ರೈತ, ಅಹಿಂಸಾತ್ಮಕ ವಾದಿ' ರೈತ ಸರಕಾರವನ್ನು ಆಳುತ್ತಾ ಬಂದ ಕಾಂಗ್ರೆಸ್ಸಿಗೆನೇ ಓಟು ಕೊಡುತ್ತಾ ಬಂದ ರೈತ ಇಂದು ಶಾಂತಿ ಕದಡಿಸುವ ರೈತನಾಗಿದ್ದಾನೆ; ಹಿಂಸಾವಾದಿ ರೈತನಾಗಿದ್ದಾನೆ; ತಾನೇ ಮತವನ್ನಿತ್ತು ಗದ್ದುಗೆಗೇರಿಸಿದ ಕಾಂಗ್ರೆಸ್ ಸರಕಾರಗಳ ವಿರುದ್ಧವೇ ದಂಗೆ ಎದ್ದು ನಿಂತಿದ್ದಾನೆ.

"ನನ್ನ ಬೇಡಿಕೆಗಳಿಗೆ ಪರಿಹಾರ ಕೊಡಿರಿ.... ಇಲ್ಲವಾದರೆ ಸರಕಾರಿ ಕಚೇರಿ ನಡೆಯದು, ರೈಲುಗಳು ಓಡದು ಬಸ್ಸುಗಳು ಚಲಿಸದು!" ಎನ್ನುತ್ತಾ, ಕತ್ತಿ, ಕೊಡಲಿ, ನೇಗಿಲು, ಟ್ರ್ಯಾಕ್ಟರುಗಳನ್ನು ಹಿಡಿದು ಬೀದಿಗಿಳಿದಿದ್ದಾನೆ.... ರೋಡ್ ಬಂದ್ ಕಾರ್ಯಕ್ರಮದಲ್ಲಿ ನಿರತವಾಗಿದ್ದಾನೆ.... ದೀರ್ಘ ಪಯಣ ಮಾಡುತ್ತಿದ್ದಾನೆ.... ವಿಧಾನಸೌಧಗಳನ್ನು ಮುತ್ತಿಗೆ ಹಾಕುತ್ತಿದ್ದಾನೆ.... ನಾಳೆ ಲೋಕಸಭೆಗೂ ಹೋಗಲೆಣಿಕೆ ಹಾಕುತ್ತಿದ್ದಾನೆ.......

ಒಮ್ಮಿಂದೊಮ್ಮೆಲೇ ಯಾಕೆ ಹೀಗೆ ದೇಶದ ಬೆನ್ನಲುಬಿನಂತಿದ್ದ ರೈತ ಸಿಡಿದಿದ್ದಾನೆ ?

ರೈತನು ಎದ್ದುದು ಏಕಾಏಕಿಯಾದರೂ ಹೀಗೆ ಏಳುವುದಕ್ಕೆ ಕಾರಣ ಮಾತ್ರ ಏಕಾಏಕಿಯಾಗಿ ಬಂದುದಲ್ಲ.

ಕಳೆದ 33 ವರ್ಷಗಳಿಂದಲೂ ಸ್ವತಂತ್ರ ಭಾರತದ ಕಾಂಗ್ರೆಸ್ ಸರಕಾರಗಳ ನೆಹರೂ, ಲಾಲ್‌ಬಹಾದೂರ್ ಶಾಸ್ತ್ರಿ, ಇಂದಿರಾಗಾಂಧಿ, ಮೊರಾರ್ಜಿ ದೇಸಾಯಿ, ಇಂದಿರಾಗಾಂಧಿ ಇವರ ಪ್ರಧಾನಿತ್ವದಲ್ಲಿ ಅನುಸರಿಸುತ್ತ ಬಂದ ಆರ್ಥಿಕ-ಸಾಮಾಜಿಕ ಧೋರಣೆಗಳೇ ರೈತರ 'ದಂಗೆ'ಗೆ ಕಾರಣವಾಗಿದೆ.

ಈ ಆರ್ಥಿಕ-ಸಾಮಾಜಿಕ ಧೋರಣೆಗಳು ಕೇವಲ ಟಾಟಾ, ಬಿರ್ಲಾ, ಮಫತ್‌ಲಾಲ್ ಮೊದಲಾದ 75 ಗುತ್ತೇದಾರಿ ಬಂಡವಾಳ ಶಾಹಿ ಕುಟುಂಬಗಳಿಗೆ ಅನುಕೂಲವಾದ ಧೋರಣೆ ಎಂಬುದನ್ನು ಅರಿತು ಶೋಷಣೆಗೊಳಗಾಗುತ್ತ ಬಂದ ಫ್ಯಾಕ್ಟರಿ ಕಾರ್ಮಿಕರು ಮೊಟ್ಟಮೊದಲು ರೊಚ್ಚಿಗೆದ್ದರು, ಕೂಲಿ ಹೆಚ್ಚಳ. ಬೋನಸ್ಸು, ತುಟ್ಟಿಭತ್ತೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಧೀರ ಮುಷ್ಕರ ಹೋರಾಟಗಳನ್ನು ನಡೆಸಿದರು... ರೂಪಾಯಿಯ ಬೆಲೆ ಕಡಿಮೆಯಾಗುತ್ತಾ ಹೋದಂತೆ, ಬೆಲೆಗಳು ಲಂಗುಲಗಾಮಿಲ್ಲದೆ ಏರುತ್ತಾ ಹೋದಂತೆ ಮೊದಮೊದಲು ಫ್ಯಾಕ್ಟರಿ ಕಾರ್ಮಿಕರ ಮುಷ್ಕರ ಹೋರಾಟಗಳನ್ನು ಸಭೆಮೆರವಣಿಗೆಗಳನ್ನು, ಕೆಂಪು ಬಾವುಟಗಳನ್ನು, ಇಂಕ್ವಿಲಾಬ್ ಹೀಯಾಳಿಸುತ್ತಿದ್ದ ಮಧ್ಯಮ ನೌಕರರು ಆಮೇಲೆ ಅದೇ ಮುಷ್ಕರದ ಹಾದಿ ಹಿಡಿದರು... ಸಂಘಟನೆ ಮತ್ತು ಹೋರಾಟವು ಅವರ ಮಂತ್ರವಾಯಿತು. ಕೆಂಪು ಧ್ವಜವು ಅವರ ಆಶೆ ಆಕಾಂಕ್ಷೆಗಳ ಸಂಕೇತವಾಯಿತು.

ವರ್ಷಗಳು ಉರುಳಿದವು. ಐದು ಪಂಚವಾರ್ಷಿಕ ಯೋಜನೆಗಳು ಮುಗಿದು ಆರನೇ ಪಂಚವಾರ್ಷಿಕ ಯೋಜನೆ ಆರಂಭವಾಯಿತು. ಏಳು ಮಹಾಚುನಾವಣೆಗಳು ನಡೆದವು. ಭರವಸೆಗಳ ಮೇಲೆ ಭರವಸೆಗಳ ಸುರಿಮಳೆ ಸುರಿಯಿತು. ಬಡಪಾಯಿ ರೈತ ಗದ್ದೆ ಬಿಟ್ಟು ಹೊರಬರಲಿಲ್ಲ. ಆಳುವ ಪಕ್ಷಗಳ, ಆಳುವ ವರ್ಗಗಳ ಮುಂದಾಳುಗಳನ್ನೇ ತಮ್ಮ ಮುಂದಾಳುಗಳೆಂದು ಪರಿಗಣಿಸಿ, ಮತವನ್ನೀಯುತ್ತಾ ಬಂದ... ಒಂದಲ್ಲ ಒಂದು ದಿನ ತಮ್ಮ ಜೀವನ ಸುಧಾರಣೆಯಾಗುತ್ತದೆ ಎಂದು ಆಸೆಪಡುತ್ತಾ ಬಂದ....

ಬೆಲೆಗಳು ವಿಪರೀತ ಏರುತ್ತಾ ಬಂದವು. ರೂಪಾಯಿ ಬೆಲೆ ಇಳಿಯುತ್ತಾ ಬಂತು. ನಿರುದ್ಯೋಗಿಗಳ ಸಂಖ್ಯೆ 4 ಕೋಟಿ ದಾಟಿತು. ಬಡತನ ರೇಖೆಯ ಕೆಳಗಡೆ ಜೀವನ ಸಾಗಿಸುವ ಜನರ ಸಂಖ್ಯೆ 40 ಕೋಟಿಗಿಂತಲೂ ಜಾಸ್ತಿಯಾಗುತ್ತಾ ಬಂತು.

ಬೆಲೆ ಏರಿಕೆಯ ವಿರುದ್ಧ ನಾಗರಿಕರ ಹೋರಾಟವು ಸಾರ್ವತ್ರಿಕವಾಗಿ ಬೆಳೆದು ಬಂತು. ಜನ ಸರಕಾರದ ಭರವಸೆಗಳನ್ನು ನಂಬಿ ಕುಳಿತುಕೊಳ್ಳುವ ಬದಲು ಬೀದಿಗಿಳಿಯಲು ಉಪಕ್ರಮಿಸಿದರು.

ಆದರೂ, ರೈತ ಮಾತ್ರ ಬೀದಿಗಿಳಿಯಲಿಲ್ಲ.

ರೈತ ಮಾತ್ರ 'ಆಶೆ' ಯನ್ನು ಕಳೆದುಕೊಳ್ಳಲಿಲ್ಲ.

ಆದರೆ, ಕೊನೆಗೆ, ಇದೀಗ ಭಾರತದಾದ್ಯಂತ ರೈತನೂ ಹೋರಾಟ ಮಾಡುತ್ತಿದ್ದಾನೆ...

ಯಾವ ಧೋರಣೆಗಳ ವಿರುದ್ಧ ಕಾರ್ಮಿಕರು, ನಾಗರಿಕರು ಎಲ್ಲರೂ ಹೋರಾಟ ಮಾಡುತ್ತಿದ್ದು ಬಂದಿದ್ದರೋ ಅದೇ ಧೋರಣೆಗಳ ವಿರುದ್ಧ ರೈತನು ಇಂದು ಹೋರಾಟಕ್ಕಿಳಿದಿದ್ದಾನೆ.

ಈಗ ರೈತನಿಗೆ ಎಚ್ಚರಿಕೆ ಮೂಡುತ್ತಾ ಬರುತ್ತಿದೆ.... "ನಾನು ರೈತನಾಗಿ ಉಳಿಯಬೇಕಾದರೆ....

ನಾನು ರೈತನಾಗಿ ದೇಶದ ಜನಕ್ಕೆ ಆಹಾರಧಾನ್ಯಗಳನ್ನು. ದೇಶದ ಕೈಗಾರಿಕೆಗೆ ಕಚ್ಚಾಮಾಲು ಒದಗಿಸಬೇಕಾದರೆ....

ನನ್ನ ಅಸ್ತಿತ್ವಕ್ಕಾಗಿ ನಾನು ಹೋರಾಟದ ಕಣಕ್ಕೆ ಇಳಿಯಬೇಕಾಗಿದೆ" ಎಂಬ ಕಟು ಸತ್ಯವನ್ನು ರೈತನು ಮೆಲ್ಲನೆ ಕಂಡುಕೊಳ್ಳುತ್ತಿದ್ದಾನೆ.

'ಬೆಲೆ ಏರಿಕೆಯು'ಯ ಮೂಲಕ ರೈತನೂ, ಕಾರ್ಮಿಕನೂ, ನಾಗರಿಕನೂ ಗುತ್ತೇದಾರಿ ಬಂಡವಾಳಶಾಹಿಗಳ, ಗುತ್ತೇದಾರಿ ವ್ಯಾಪಾರಸ್ಥರ ಶೋಷಣೆ ಗುರಿಯಾಗುತ್ತಿದ್ದಾನೆ....

ರೈತನು ಬೆಳೆಸಿದ ಬೆಳೆಗಳಿಗೆ ರೈತನಿಗೆ 'ನ್ಯಾಯ ಬೆಲೆ ಪಡೆಯಲು ಹೋರಾಟ ಮಾಡುತ್ತಿದ್ದಾನೆ.... ಸರಕಾರ ದಬ್ಬಾಳಿಕೆ ಮಾಡುತ್ತಿದ್ದರೂ ಅವನ ಹೋರಾಟ ನಿಲ್ಲುತ್ತಿಲ್ಲ.... ಜೈಲುಗಳು ರೈತರ ಬಂಧನದಿಂದ ತುಂಬಿಹೋದರೂ ಹೋರಾಟ ಮುಂದುವರಿಯುತ್ತಿದೆ... ಹೆಚ್ಚುತ್ತಿದೆ... ವಿಸ್ತೃತವಾಗುತ್ತಿದೆ.

ಕೊನೆಯೆಲ್ಲಿ ? ಕಾಂಗ್ರೆಸ್ ಸರಕಾರಗಳು 'ಗುತ್ತೇದಾರಿ ಬಂಡವಾಳಶಾಹಿ ಪರವಾದ ಧೋರಣೆಗಳನ್ನು ಕೈಬಿಟ್ಟಾಗ... ರೈತರಿಗೆ ಅನುಕೂಲವಾದ ಧೋರಣೆಗಳನ್ನು ಅನುಸರಿಸಿದಾಗ....

ಅಂದರೆ, 33 ವರ್ಷಗಳ ಕಾಲ ಆಳುವ ವರ್ಗಗಳು ಅನುಸರಿಸುತ್ತಾ ಬಂದಿರುವ ಆರ್ಥಿಕ ಧೋರಣೆಗಳನ್ನು ಬದಲಿಸಿದರೆ ಮಾತ್ರ...

ಕಾರ್ಮಿಕ ನೌಕರರ ಹೋರಾಟ ಮತ್ತು ರೈತರ ಹೋರಾಟಗಳೆಂಬ ಇವೂರು ಹೋರಾಟಗಳ ಪ್ರವಾಹಗಳು ಒಂದಾಗಿ ಹರಿದರೆ ಮಾತ್ರ ಇದು ಸಾಧ್ಯ.

-ಪಿ. ರಾಮಚಂದ್ರರಾವ್

ರೈತ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ.

THE PHILOSOPHERS INTERPRETED THE WORLD DIFERENTLY - BUT POINT IS TO CHANGE IT
—KARLMARX.

ರೈತ-ಸಂಘಟನೆಗೆ ಬುನಾದಿ ಹಾಕಿ

ಅಗಲಿದ ಎರಡು ಮಹಾ ಚೇತನಗಳು


ಕರ್ನಾಟಕದ ರೈತರು ತಮ್ಮ ಮೇಲಾಗುತ್ತಿರುವ ಶೋಷಣೆಗೆ ರೋಸಿ ರೊಚ್ಚಿಗೆದ್ದು ಬಂಡಾಯದ ಹಾದಿಯಲ್ಲಿ ಮುನ್ನಡೆಯುತ್ತಿರುವ ಈ ಚಾರಿತ್ರಿಕ ಕಾಲಘಟ್ಟದಲ್ಲಿ, ದೇಶಾದ್ಯಂತ ರೋಷತಪ್ತ ರೈತ ಬಾಂಧವರು ಪ್ರತಿಭಟನೆಯ ಕಹಳೆಯೂದುತ್ತಿರುವ ಈ ಮಹತ್ವಪೂರ್ಣ ಕಾಲದಲ್ಲಿ ರೈತಾಪಿ ಜನತೆ ಅಗತ್ಯವಾಗಿ ಸ್ಮರಿಸಬೇಕಾದ ಹಲವು ವ್ಯಕ್ತಿಗಳಲ್ಲಿ ದಿವಂಗತ ಕಾಮ್ರೇಡ್ ಎ. ಕೆ. ಗೋಪಾಲನ್ ಅವರ ಹೆಸರು ಮೊದಲನೆಯದು; ದುಡಿಯುವ ಜನರಿಗಾಗಿ, ದಲಿತ ಜನತೆಗಾಗಿ ತನ್ನ ಜೀವಮಾನವನ್ನೇ ಮುಡಿಪಾಗಿರಿಸಿ ಅವರೊಂದಿಗೆ ಒಬ್ಬನಾಗಿ ಬಾಳಿ, ಅವರ ಸುಖ, ದುಃಖ ಮತ್ತು ಆಸೆ. ನಿರಾಸೆಗಳನ್ನು ತಾನೂ ಅನುಭವಿಸಿ ಹಾಗೂ ರೈತಾಪಿ ಜನರಿಗಾಗಿ ತನ್ನ ಜೀವಮಾನವಿಡೀ ದಬ್ಬಾಳಿಕೆಗಳನ್ನೆದುರಿಸಿ ಪೋಲೀಸರ ಲಾಠಿ ಪೆಟ್ಟಿಗೆ ಎದೆಯೊಡ್ಡಿ ಹೋರಾಡಿದ ಅವಿಸ್ಮರಣೀಯ ವ್ಯಕ್ತಿ ಎ. ಕೆ. ಗೋಪಾಲನ್.

ಆಯಿಲ್ಲಿಯತ್ ಕುಟ್ಯೇರಿ ಗೋಪಾಲನ್ (ಜನನ–ಅಕ್ಟೋಬರ್ 1, 1904) ತಲಚೇರಿಯ ಮಿಶನ್ ಹೈಸ್ಕೂಲು ಮತ್ತು ಬ್ರೆನ್ನನ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಉಪಾಧ್ಯಾಯ ವೃತ್ತಿ ಪ್ರಾರಂಭಿಸಿದರು. ಎ.ಕೆ.ಜಿ. ಎಂದೇ ಎಲ್ಲರಿಂದ ಆತ್ಮೀಯವಾಗಿ ಕರೆಯಲ್ಪಡುತಿದ್ದ ಗೋಪಾಲನ್ ತನ್ನ ಎಳೆ ವಯಸಿನಲ್ಲೇ ಮನೆ ಬಿಟ್ಟು ಗುರುವಾಯೂರು ದೇವಸ್ಥಾನ ಪ್ರವೇಶದ ಚಳುವಳಿಯಲ್ಲಿ ಭಾಗವಹಿಸಿದರು. ಅಲ್ಲಿಂದ ಮೇಲೆ 1920ರ ದಶಕದಿಂದೀಚೆಗೆ ದೇಶದಲ್ಲಿ ನಡೆದ ಪ್ರತಿಯೊಂದು ರಾಜಕೀಯ, ಸಾಮಾಜಿಕ ಹೋರಾಟದಲ್ಲೂ ಎ. ಕೆ. ಜಿ. ಪ್ರಮುಖ ಪಾತ್ರ ವಹಿಸಿದ್ದರು. ಗಾಂಧೀಜಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸಿದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ರಾಷ್ಟ್ರೀಯ ಹೋರಾಟದರಂಗದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಎ.ಕೆ.ಜಿ. ಕೆಲವೇ ವರ್ಷಗಳ ಹಿಂದೆ ಕೇರಳದಲ್ಲಿ ನಡೆದ ಭೂಗ್ರಹಣ ಚಳುವಳಿ ಮತ್ತು ಪ್ರಜಾಸತ್ತೆಯ ಉಳಿವಿಗಾಗಿ ತುರ್ತುಪರಿಸ್ಥಿತಿಯ ವಿರುದ್ಧ ನಡೆದ ರಾಜಕೀಯ ಹೋರಾಟದವರೆಗೆ ಪ್ರತಿಯೊಂದು ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು; ಕಲ್ಲಿಕೋಟೆಯ ಚಿಕ್ಕ ಗೇಣಿ ಒಕ್ಕಲುಗಳಿರಲಿ, ಆಲಪ್ಪೆಯ ಮುರ್ತೆದಾರರಿರಲಿ ಅಥವಾ ಕುಟ್ಟನಾಡಿನ ಕೃಷಿ ಕಾರ್ಮಿಕರಿರಲಿ ಅವರೆಲ್ಲ ತಾವು ಇಂದು ಅಲ್ಪ ಸ್ವಲ್ಪವಾದರೂ ಸುಸ್ಥಿತಿಯಲ್ಲಿರುವುದಕ್ಕೆ ಇಪ್ಪತ್ತು, ಮೂವತ್ತು ವರ್ಷಗಳ ಹಿಂದೆ ನಡೆಸಿದ್ದ ಹೋರಾಟಗಳೇ ಕಾರಣ ಮತ್ತು ಈ ಎಲ್ಲ ಹೋರಾಟಗಳಲ್ಲೂ ಪ್ರಮುಖ ಪಾತ್ರ ವಹಿಸಿದವರು ಎ. ಕೆ. ಗೋಪಾಲನ್.

ಎ. ಕೆ. ಜಿ. ಸಂಘಟಿಸಿದ ಪಾದಯಾತ್ರೆಗಳೆಷ್ಟೋ? ಜಾಥಾಗಳೆಷ್ಟೋ! ಅವರು ಕೈಗೊಂಡ ಸತ್ಯಾಗ್ರಹಗಳಿಗೆ. ಉಪವಾಸಗಳಿಗೆ ಲೆಕ್ಕವಿಲ್ಲ ಮಲಬಾರಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಅವರು ಮಾಡಿದ ಸಭೆಗಳು, ಭಾಷಣಗಳು ಸಂಖ್ಯಾತೀತ. ತನ್ನ ಜೀವನದ ಬಹುಪಾಲು ವರ್ಷಗಳನ್ನು ಎ. ಕೆ. ಜಿ. ಜೇಲಿನಲ್ಲೇ ಕಳೆದಿದ್ದಾರೆ. ಹಲವು ಬಾರಿ ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಿದ್ದಾರೆ; ಮತ್ತೆ ಬಂಧಿಸಲ್ಪಟ್ಟಿದ್ದಾರೆ. ತೋಟ ಕಾರ್ಮಿಕರು, ಕೈಮಗ್ಗದ ಕೆಲಸಗಾರರು ಅಥವಾ ಇನ್ನು ಯಾರೇ ಇರಲಿ ಅವರೆಲ್ಲ ಇಂದು ಅನುಭವಿಸುತ್ತಿರುವ ಕೆಲವಾದರೂ ಸವಲತ್ತುಗಳಿಗೆ ಎ. ಕೆ. ಜಿ. ಅವರ ಅಪಾರ ತ್ಯಾಗ ಮತ್ತು ಅವರ ನೇತೃತ್ವದಲ್ಲಿ ನಡೆಸಲಾದ ಚಾರಿತ್ರಿಕ ಹೋರಾಟಗಳೇ ಕಾರಣವೆನ್ನುವುದನ್ನು ಅವರೆಲ್ಲ ತಿಳಿದಿದ್ದಾರೆ. ಎ.ಕೆ.ಜಿ. ನವೀನ ಭಾರತದ ಇತಿಹಾಸಕ್ಕೆ ಹೊಸ ಆಯಾಮವೊಂದನ್ನೇ ನೀಡಿದ್ದಾರೆ.

ಎ. ಕೆ. ಜಿ.ಯವರ ಎಲ್ಲಾ ಚಟುವಟಿಕೆಗಳ ಹಿಂದೆ ಮೂಲಭೂತವಾದ ಸಿದ್ಧಾಂತವೊಂದಿತ್ತು. ಇತರರಿಗಾಗಿ ದುಡಿಯುವುದು ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯವೆನ್ನುವುದೇ ಆ ಸಿದ್ಧಾಂತ. ಈ ಸಿದ್ಧಾಂತವನ್ನು ನೆಚ್ಚಿಕೊಂಡವರು ತನಗಾಗಿ ಏನನ್ನೂ ಗಳಿಸಿಕೊಳ್ಳಲು ಸಾಧ್ಯವಿಲ್ಲ. ಹೆಚ್ಚೆಂದರೆ ಇನ್ನಷ್ಟು ನೋವು, ಸಂಕಷ್ಟಗಳನ್ನು ಆತ ಅನುಭವಿಸಬೇಕಾಗಬಹುದು. ಹೀಗೆ ಹೋರಾಡಿ ಸಂಕಷ್ಟಗಳನ್ನೆದುರಿಸಬೇಕೆಂದು ಯಾವ ಕಟ್ಟಳೆಯೂ ವಿಧಿಸಿಲ್ಲ. ಇದು ಕೇವಲ ಆತ್ಮಸಾಕ್ಷಿಯ ಪ್ರಶ್ನೆ. ಎ.ಕೆ.ಜಿ. ಇತರರಿಗಾಗಿ ದುಡಿಯುವ ಮೂಲಕ ಮಾರ್ಕ್ಸ್‌ವಾದ ಲೆನಿನ್‌ವಾದವೆಂದರೆ ಕೇವಲ ಪುಸ್ತಕದ ಮಾತಲ್ಲ, ಅದು ಆರಾಮ ಕುರ್ಚಿಯ ಸಿದ್ಧಾಂತವಲ್ಲ; ಬದಲು ಕ್ರಾಂತಿಕಾರಿಯ ಜೀವನದ ಅವಿಭಾಜ್ಯ ಅಂಗವೆಂಬುದನ್ನು ತೋರಿಸಿಕೊಟ್ಟರು.

ಎ. ಕೆ. ಜಿ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿ 1929 ರಿಂದ 1934ರ ವರೆಗೆ ಅದರ ಸಕ್ರಿಯ ಕಾರ್ಯಕರ್ತರಾಗಿದ್ದರು. ನಂತರ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸೇರಿ ಕೇರಳದಲ್ಲಿ ಕಾಂಗ್ರೆಸ್ ಪ್ರಭಾವ ಹೆಚ್ಚಲು ಅಪಾರ ಶ್ರಮವಹಿಸಿದರು. ಆದರೆ ಕಾಂಗ್ರೆಸ್ ನೀತಿಯಿಂದ ಬೇಗನೇ ನಿರಾಸೆ ಹೊಂದಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿ ಅದನ್ನು ಕಟ್ಟಿ ಬೆಳೆಸಿದರು ಅವರೊಬ್ಬ ದೊಡ್ಡ ಮಾರ್ಕ್ಸ್‌ವಾದಿ ಸೈದ್ಧಾಂತಿಕರೇನೂ ಅಲ್ಲ. ಆದರೂ ಮಾರ್ಕ್ಸ್‌ವಾದದ ಮೂಲ ಸತ್ವ ಅವರ ಜೀವನ ಕ್ರಮದಲ್ಲೇ ಹಾಸು ಹೊಕ್ಕಾಗಿತ್ತು. ಮುಂದೆ ಕಮ್ಯುನಿಸ್ ಪಕ್ಷ ಇಬ್ಭಾಗವಾದಾಗ ಎ.ಕೆ.ಜಿ. ಮಾರ್ಕ್ಸ್‌ವಾದಿ ಕಮ್ಯುನಿಸ್ ಪಕ್ಷದ ಶ್ರೇಷ್ಠ ಮುಂದಾಳುಗಳಲ್ಲೊಬ್ಬರಾಗಿ ಪಕ್ಷಕ್ಕೆ ಯೋಗ್ಯ ಮಾರ್ಗದರ್ಶನ ನೀಡಿದರು, ತನ್ನ ಜೀವಮಾನದ ಅಂತ್ಯದವರೆಗೂ ಅವರು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಸದಸ್ಯರಾಗಿದ್ದರು. 1952 ರಿಂದ 1977ರವರೆಗೂ ಅವರು ಲೋಕಸಭಾ ಸದಸ್ಯರಾಗಿ ಪ್ರತಿಯೊಂದು ಚುನಾವಣೆಯಲ್ಲೂ ಆರಿಸಿ ಬರುತಿದ್ದರು. ಅವರೊಬ್ಬ ಒಳ್ಳೆಯ ಸಾಂಸದಿಕ ಮತ್ತು ಸಂಸತ್ತಿನೊಳಗೂ ಶ್ರೇಷ್ಠ ಹೋರಾಟಗಾರರೆಂಬ ಖ್ಯಾತಿ ಗಳಿಸಿದ್ದರು. ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷರಾಗಿ ಅವರು ತನ್ನ ಕೊನೆಯ ಕ್ಷಣದವರೆಗೂ ಕಾರ್ಯವೆಸಗುತಿದ್ದರು.



ಎ. ಕೆ. ಗೋಪಾಲನ್

ನಮ್ಮ ದೇಶದ ಕೆಲವು ರಾಜ್ಯಗಳಲ್ಲಾದರೂ ಅಲ್ಪಸ್ವಲ್ಪ ಭೂ ಸುಧಾರಣೆಯ ಕಾನೂನು ಅನುಷ್ಠಾನಕ್ಕೆ ಬಂದಿದ್ದರೆ ಅದಕ್ಕೆ ಅಖಿಲ ಭಾರತ ಕಿಸಾನ್ ಸಭೆಯ ನೇತೃತ್ವದಲ್ಲಿ ರೈತಾಪಿ ಜನತೆ ನಡೆಸಿದ ಬಲವಾದ ಹೋರಾಟಗಳೇ ಕಾರಣ. ಕೇರಳ ಮತ್ತು ಪ, ಬಂಗಾಳ ರಾಜ್ಯಗಳೇ ಇದಕ್ಕೆ ಉದಾಹರಣೆ. ಈ ಸಾಮುದಾಯಿಕ ಮತ್ತು ರೈತ ಹೋರಾಟಗಳಿಗೆ ಪ್ರೇರೇಪಣೆ ನೀಡಿ ಅವುಗಳನ್ನು ಸಂಘಟಿಸುದುದರಲ್ಲಿ ಎ.ಕೆ.ಜಿ. ವಹಿಸಿದ ಪಾತ್ರ ಅಮೋಘವಾದದ್ದು. ದೇಶದ ಭೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸುಶಕ್ತವಾದ ಸಾಮುದಾಯಿಕ ಹೋರಾಟಗಳೇ ಏಕ ಮಾತ್ರ ಮಾರ್ಗವೆಂಬುದನ್ನು ಎ.ಕೆ.ಜಿ. ಮತ್ತು ಅವರ ಸಂಗಾತಿಗಳು ಕಂಡುಕೊಂಡಿದ್ದರು. ಈ ತಿಳುವಳಿಕೆ ದೇಶದ ಇನ್ನಿತರ ರಾಜ್ಯಗಳಲ್ಲೂ ಪಸರಿಸುತ್ತಿದೆ. ಇದಕ್ಕೆ ಎ.ಕೆ.ಜಿ. ಅವರು ಅಧ್ಯಕ್ಷರಾಗಿದ್ದ ಅಖಿಲ ಭಾರತ ಕಿಸಾನ್ ಸಭೆಯೇ ಮುಖ್ಯ ಕಾರಣವೆನ್ನುವುದನ್ನು ಯಾರೂ ಅಲ್ಲಗಳೆಯಲಾರರು, ರೈತಾಪಿ ಜನತೆ ಮತ್ತು ಭೂಹೀನ ಕೃಷಿ ಕಾರ್ಮಿಕರ ಹೋರಾಟಗಳಿಗೆ ಎ.ಕೆ.ಜಿ. ನೇತೃತ್ವ ನೀಡಿದುದರ ಪರಿಣಾಮವಾಗಿ ರೈತಾಪಿ ಜನತೆಯ ಒಂದು ಗಣನೀಯ ವಿಭಾಗ ಉತ್ತಮ ರಾಜಕೀಯ ಪ್ರಜ್ಞೆಯನ್ನು ಗಳಿಸಿಕೊಳ್ಳಲು ಶಕ್ತವಾಗಿದೆ. ಈ ಪ್ರಜ್ಞೆ ಬಲಗೊಳ್ಳುತ್ತಿದೆಯೆನ್ನುವುದಕ್ಕೆ ಇಂದು ಕರ್ನಾಟಕದಲ್ಲಿ, ಮಹಾರಾಷ್ಟ್ರದಲ್ಲಿ ಎದ್ದುನಿಂತಿರುವ ರೈತರೇ ಸಾಕ್ಷಿ. ●

ಹರೇಕೃಷ್ಣ ಕೋನಾರ್

ಹರೇಕೃಷ್ಣ ಕೋನಾರ್ ಬರ್ದ್ವಾನ್ ಜಿಲ್ಲೆಯ ಕಮರಗರಿಯಾ ಹಳ್ಳಿಯಲ್ಲಿ ಶರಶ್ಚಂದ್ರ ಕೋನಾರ್ ಮತ್ತು ಸತ್ಯಬಾಲಾದೇವಿ ದಂಪತಿಗಳ ಮಗನಾಗಿ 1915ರ ಅಗಸ್ಟ 5ರಂದು ಜನಿಸಿದರು. ಅಸಹಕಾರ ಆಂದೋಲನದಲ್ಲಿ ಭಾಗ ವಹಿಸಿದುದಕ್ಕಾಗಿ 1930ರಲ್ಲಿ ಅಂದರೆ ಅವರು ಒಂಭತ್ತನೇ ತರಗತಿಯ ವಿದ್ಯಾರ್ಥಿಯಾಗಿದ್ದಾಗಲೇ ಮೊದಲ ಬಾರಿಗೆ ಬಂಧಿತರಾಗಿ ಆರು ತಿಂಗಳ ಕಾಲ ಕಾರಾಗೃಹವಾಸ ಅನುಭವಿಸಬೇಕಾಯಿತು. ಆ ಬಳಿಕ ಅವರು ಇದೀಗ ಸಿ, ಪಿ. ಐ. (ಎಂ.) ನಲ್ಲಿರುವ ಸರೋಜ್ ಮುಖರ್ಜಿ ಮತ್ತು ಬಿನೊಯ್ ಚೌಧುರಿಯವರ ಜೊತೆಗೂಡಿ ಕ್ರಾಂತಿಕಾರಿ ಭಯೋತ್ಪಾದಕರ ಚಳುವಳಿಯನ್ನು ಸೇರಿಕೊಂಡರು. 1932ರಲ್ಲಿ ಬೇಗೂತ್ ದರೋಡೆ ಪ್ರಕರಣದಲ್ಲಿ ಆಪಾದಿತರಾಗಿ ಆರು ವರ್ಷಗಳ ಕಾರಾಗೃಹ ಶಿಕ್ಷೆ ಪಡೆದು 1933ರಲ್ಲಿ ಅಂಡಮಾನ್‌ಗೆ ವರ್ಗಾಯಿಸಲ್ಪಟ್ಟರು.

ಸರೆಮನೆಯಲ್ಲಿರುವಾಗ ಕೋನಾರ್ ಅವರಿಗೆ ಸತೀಶ್ ಪಕ್ರಾಶಿ, ನಾರಾಯಣರಾಯ್ ಮತ್ತು ಇತರರ ನಿಕಟ ಸಂಪರ್ಕ ದೊರೆತಿತು. ಅವರು ಮಾರ್ಕ್ಸ್‌ವಾದ – ಲೆನಿನ್‌ವಾದವನ್ನು ಅಭ್ಯಾಸ ಮಾಡಲಾರಂಭಿಸಿದರು. ಇದರ ಸಹಜ ಫಲಸ್ವರೂಪವಾಗಿ ಕೋನಾರ್ ಕಮ್ಯುನಿಸ್ಟರ ಒಕ್ಕೂಟವನ್ನು ಸೇರಿದರು.


1938ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದ ಬಳಿಕ ಅವರು ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಸೇರಿ ಪಕ್ಷದ ಕಾರ್ಯಗಳಲ್ಲಿ, ಮುಖ್ಯವಾಗಿ ಬರ್ದ್ವಾನ್ ಜಿಲ್ಲೆಯ ರೈತ ಚಳುವಳಿಯಲ್ಲಿ ತನ್ನನ್ನು ತೊಡಗಿಸಿಕೊಂಡರು. ಈ ಜಿಲ್ಲೆಯಲ್ಲಿ 1939ರಲ್ಲಿ ನಡೆದ ಕಾಲುವೆ ಚಳುವಳಿಯಲ್ಲೂ ಅವರು ಭಾಗವಹಿಸಿದರು. ತನ್ನ ರಾಜಕೀಯ ಚಟುವಟಿಕೆಗಳಿಂದಾಗಿ ಅವರು 1940ರಲ್ಲಿ ಬರ್ದ್ವಾನ್ ಮತ್ತು ಅಸನ್ಸೋಲ್ ಪ್ರದೇಶಗಳಿಂದ ಗಡೀಪಾರು ಮಾಡಲ್ಪಟ್ಟರು.

'ಅಜಯ್' ಅಣೆಕಟ್ಟಿನ ದುರಸ್ತಿಗಾಗಿ ನಡೆದ ಚಳುವಳಿಯ ಎರಡನೇ ಹಂತವನ್ನು ನಿರ್ದೇಶಿಸಿ ಅದಕ್ಕೆ ನೇತೃತ್ವ ನೀಡಿದ ಮುಖಂಡರಲ್ಲಿ ಕಾ. ಕೋನಾರ್ ಒಬ್ಬರು. 1948ರ ವರೆಗೂ ಅವರು ಬರ್ದ್ವಾನ್ ಜಿಲ್ಲೆಯ ಕಿಸಾನ್‌ಸಭಾ ಮತ್ತು ಕಮ್ಯುನಿಸ್ಟ್ ಪಕ್ಷದ ಮುಖ್ಯ ನೇತಾರರಲ್ಲಿ ಒಬ್ಬರಾಗಿದ್ದರು. ಕಮ್ಯುನಿಸ್ಟ್ ಪಕ್ಷವು ನಿಷೇಧಕ್ಕೊಳಗಾದ ಸಮಯದಲ್ಲಿ 1948ರ ಮಾರ್ಚ್ 26ರಂದು ಕೋನಾರ್ ಅವರನ್ನು ಬಂಧಿಸಿ ಮೂರು ತಿಂಗಳ ಬಳಿಕ ಬಿಡುಗಡೆ ಮಾಡಲಾಯಿತು. ಆನಂತರ 1952ರ ವರೆಗೂ ಅವರು ಭೂಗತರಾಗಿದ್ದುಕೊಂಡೇ ಪಕ್ಷದ ಚಟುವಟಿಕೆಗಳನ್ನು ನಡೆಸಬೇಕಾಯಿತು.

ಪ. ಬಂಗಾಳ ರಾಜ್ಯ ಕಿಸಾನ್ ಸಭೆಯ ಕಾರ್ಯದರ್ಶಿಯಾಗಿ ಅವರು 1954ರಲ್ಲಿ ಆಯ್ಕೆಗೊಂಡು 1957ರಲ್ಲಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾಗಿಯೂ ಕೇಂದ್ರ ಕಿಸಾನ್ ಕೌನ್ಸಿಲಿನ ಸದಸ್ಯರಾಗಿಯೂ ಆರಿಸಲ್ಪಟ್ಟರು. 1958ರಲ್ಲಿ ನಡೆದ ಪಕ್ಷದ ಅಮೃತಸರ್ ಕಾಂಗ್ರೆಸ್‌ನಲ್ಲಿ ಅವರನ್ನು ರಾಷ್ಟ್ರೀಯ ಕೌನ್ಸಿಲಿನ ಸದಸ್ಯರಾಗಿಯೂ ಅದರ ಕಾರ್ಯಕಾರಿಣಿಯ ಸದಸ್ಯರನ್ನಾಗಿಯೂ ಚುನಾಯಿಸಲಾಯಿತು. 1960ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಯಾಗಿ ವಿಯೆತ್ನಾಂ ಕಾರ್ಮಿಕರ ಪಕ್ಷದ ಕಾಂಗ್ರೆಸ್‌ನಲ್ಲಿ ಕಾ. ಹರೇಕೃಷ್ಣ ಕೋನಾರ್ ಭಾಗವಹಿಸಿದುದಲ್ಲದೆ ಚೀನಾದೇಶವನ್ನೂ ಸಂದರ್ಶಿಸಿದರು.

ಪ. ಬಂಗಾಳ ವಿಧಾನ ಸಭಾ ಸದಸ್ಯರಾಗಿ ಅವರು 1957ರಲ್ಲಿ ಮೇಮಾರಿ–ಕಲ್ನಾ ಕ್ಷೇತ್ರದಿಂದಲೂ 1962ರಲ್ಲಿ ಕಲ್ನಾ ಕ್ಷೇತ್ರದಿಂದಲೂ ಆರಿಸಿಬಂದರು. 1967ರಲ್ಲಿ ಇದೇ ಕ್ಷೇತ್ರದಿಂದ ಆರಿಸಿಬಂದ ಅವರು ಸಂಯುಕ್ತರಂಗ ಮಂತ್ರಿಮಂಡಲದಲ್ಲಿ ಭೂಮಿ ಹಾಗೂ ಭೂ ಕಂದಾಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಸಂಯುಕ್ತರಂಗ ಮಂತ್ರಿಮಂಡಲ ಅಧಿಕಾರಕ್ಕೆ ಬಂದುದರಿಂದಾಗಿ ಬೇನಾಮಿ ಭೂಮಿಯನ್ನು ಮಿಗತೆ ಭೂಮಿಯನ್ನೂ ವಶಪಡಿಸಿಕೊಳ್ಳಲು ರೈತರು ನಡೆಸುತ್ತಿದ್ದ ಚಳುವಳಿಗೆ ತುಂಬಾ ಉತ್ತೇಜನ ದೊರೆಯಿತು. ಇದರಲ್ಲಿ ಕಾ. ಹರೇಕೃಷ್ಣ ಕೋನಾರ್ ಅವರ ಕೊಡುಗೆ ಗಣನೀಯವಾದದ್ದು. ನಕ್ಸಲೀಯರೆಂಬ ಹೆಸರಿನಲ್ಲಿ ಅವಾಂತರ ನಡೆಸುತ್ತಿದ್ದವರ ವಿರುದ್ಧವೂ ಪಕ್ಷವು ನಡೆಸುತ್ತಿದ್ದ ಹೋರಾಟದಲ್ಲಿ ಇದೇ ವೇಳೆಗೆ ಕೋನಾರ್ ಭಾಗವಹಿಸಿದರು. 1969ರಲ್ಲಿ ಕಲ್ನಾಕ್ಷೇತ್ರದಿಂದಲೇ ಅಸೆಂಬ್ಲಿಗೆ ಗೆದ್ದುಬಂದ ಅವರು ಮರಳಿ ಭೂಮಿ ಮತ್ತು ಭೂ ಕಂದಾಯ ಸಚಿವರಾಗಿ ಕಾರ್ಯವಹಿಸಿದರು. 1970ರಲ್ಲಿ ಸಂಯುಕ್ತರಂಗ ಸರಕಾರ ಪತನಗೊಂಡ ಬಳಿಕ 1971ರಲ್ಲಿ ಅವರು ಪುನಃ ವಿಧಾನ ಸಭೆಗೆ ಆರಿಸಲ್ಪಟ್ಟರು.

ನವಂಬರ 1962ರಲ್ಲಿ ಭಾರತ–ಚೀನಾ ಗಡಿ ಘರ್ಷಣೆ ಸಂಭವಿಸಿದ ವೇಳೆ ಕೋನಾರ್ ಅವರನ್ನು ಭಾರತ ರಕ್ಷಣಾ ಕಾಯ್ದೆಯನ್ವಯ ಬಂಧಿಸಿ ಒಂದು ವರ್ಷ ಸೆರೆಮನೆಯಲ್ಲಿಡಲಾಯಿತು. 1964ರಲ್ಲೂ ಅವರನ್ನು ಇದೇ ಕಾಯಿದೆಯಲ್ಲಿ ಬಂಧಿಸಲಾಯಿತು. ಪಕ್ಷವನ್ನು ಪರಿಷ್ಕರಣವಾದದ ಅಪಾಯದಿಂದ ಸಂರಕ್ಷಿಸಲು ನಡೆಸಲಾದ ಹೋರಾಟದಲ್ಲಿ ಅವರು 1964ರಿಂದ ಪ್ರಮುಖ ಪಾತ್ರ ವಹಿಸಿದರು. ಅವರು ಸೆರೆಮನೆಯಲ್ಲಿರುವಾಗಲೇ ಕಲ್ಕತ್ತಾದಲ್ಲಿ ನಡೆದ ಪಕ್ಷದ ಏಳನೇ ಕಾಂಗ್ರೆಸ್ ಅವರನ್ನು ಕೇಂದ್ರ ಸಮಿತಿಗೆ ಆಯ್ಕೆಮಾಡಿತು. ಸುಮಾರು ಒಂದೂವರೆ ವರ್ಷದ ಬಳಿಕವಷ್ಟೇ ಜೇಲಿನಿಂದ ಅವರ ಬಿಡುಗಡೆಯಾಯಿತು,



ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೊಚ್ಚಿ ಕಾಂಗ್ರೆಸ್ (1968) ಮತ್ತು ಮಧುರೈ ಕಾಂಗ್ರೆಸ್ (1972) ನಲ್ಲೂ ಅವರನ್ನು ಕೇಂದ್ರ ಸಮಿತಿಗೆ ಆರಿಸಲಾಯಿತು. ಜನವರಿ 1969ರಲ್ಲಿ ಅವರು ಭೂಗತರಾಗಿದ್ದಾಗ ಮಧುರೆಯಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭೆಯ ಸಮ್ಮೇಳನದಲ್ಲಿ ಅವರನ್ನು ಕಿಸಾನ್ ಸಭೆಯ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. ಅಲ್ಲಿಂದ ಅವರು ಮೃತ್ಯುವಶವಾಗುವವರೆಗೆ ಅಂದರೆ 1974ರ ಏಪ್ರಿಲ್‌ನಲ್ಲಿ ನಡೆದ ಸಿಕಾರ್ (ರಾಜಸ್ಥಾನ) ಸಮ್ಮೇಳನದವರೆಗೆ ಪ್ರತಿಯೊಂದು ಸಮ್ಮೇಳನದಲ್ಲೂ ಅವರು ಅಖಿಲ ಭಾರತ ಕಿಸಾನ್ ಸಭೆಯ ಪ್ರಧಾನ

IVನೇ ಪುಟನೋಡಿ

ರಾಜಕೀಯ ಆಯಾಮ ಒಲ್ಲದ ರೈತ ಮುಖಂಡರು

ದೇಶದಾದ್ಯಂತ ರೈತ ಚಳುವಳಿಯ ಜ್ವಾಲಾಮುಖಿ ಹಬ್ಬುತ್ತಿರುವ ಹಾಗೆ ಅದನ್ನು ಮುರಿಯಲು ಆಳುವವರ್ಗಗಳ ಪಿತೂರಿಯೂ ಹೆಚ್ಚುತ್ತಿದೆ. ರೈತ ಚಳುವಳಿಯ ರಾಜಕೀಯದ ಬಗ್ಗೆ ಎರಡು ಬಗೆಯ ಕೂಗುಗಳು ಕೇಳಿಬರುತ್ತಿವೆ. ಮೊದಲನೆಯದು ಸರ್ಕಾರದ್ದು ಎರಡನೆಯದು ರೈತ ಮುಖಂಡರದೇ.

ಯಾವುದೇ ಸಂಘಟನೆ ಆಗಲಿ, ಯಾವುದೇ ಚಳುವಳಿ ನಡೆಯಲಿ ಇದು ತನಗೆ ಆಗದವರು ಮಾಡುವ ಕೆಲಸ ಎಂದು ಆಳುವ ಸರ್ಕಾರ ಭಾವಿಸುತ್ತದೆ. ಎಲ್ಲದರಲ್ಲೂ ಕೆಟ್ಟ ರಾಜಕೀಯ ಉದ್ದೇಶವನ್ನು ಹುಡುಕುತ್ತದೆ. ರೈತ ಚಳುವಳಿಯ ಬಗ್ಗೆಯೂ ಇದೇ ಪ್ರತಿಕ್ರಿಯೆ ಬಂದಿದೆ. ರೈತಚಳುವಳಿ ನಡೆಯುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳೆಲ್ಲ ಈ ಮಾ ಮೂ ಲು ಹೇಳಿಕೆಗಳನ್ನು ಕೊಟ್ಟಿದ್ದಾರೆ. ರೈತರ ಬೇಡಿಕೆಗಳಿಗೆ ರಾಜ್ಯ ಸರ್ಕಾರಗಳು ಗೋಲಿಬಾರ್‌ನ ಉತ್ತರ ಕೊಟ್ಟಿವೆ. ಇದು ವಿರೋಧ ಪಕ್ಷಗಳ ಪಿತೂರಿ ಎಂದು ಅವರು ಭಾವಿಸುತ್ತಾರೆ. ಏನೇ ಹೇಳಿದರೂ ಸಮಿತಿ ರಚಿಸುವ ಮಟ್ಟಿಗಾದರೂ ಸರ್ಕಾರ ರೈತರ ಬೇಡಿಕೆಗೆ ಮಣಿಯಬೇಕಾಗುತ್ತದೆ. ಕೇಂದ್ರ ಉದ್ಯಮಗಳ ಕಾರ್ಮಿಕ ಮುಷ್ಕರದ ಬಗ್ಗೆಯೂ "ರಾಜಕಾರಣ ಇದರ ಹಿಂದೆ ಇದೆ" ಎಂದು ನಮ್ಮ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ಕೇಂದ್ರ ಮಂತ್ರಿ, ರಾವ್ ಬೀರೇಂದ್ರ ಸಿಂಗ್ ರೈತ ಚಳುವಳಿಗಳೆಲ್ಲ ರಾಜಕೀಯ ದುರುದ್ದೇಶದಿಂದ ಕೂಡಿವೆ ಎಂದು ಇತ್ತೀಚಿಗೆ ಹೇಳಿಕೆಕೊಟ್ಟಿದ್ದಾರೆ. ಮಹಾರಾಷ್ಟ್ರದ ರೈತ ಚಳುವಳಿ, ಮರಾಠರನ್ನು ಒಡೆಯುವ ಯತ್ನ ಎಂದು ಶಾಲಿನಿಪಾಟೀಲ್ ಕೂಗಾಡಿದ್ದರು. ಅವರು ಭದ್ರತಾ ಮಸೂದೆಯನ್ನು ಉಪಯೋಗಿಸುವುದಾಗಿಯೂ ಬೆದರಿಸಿದ್ದರು.

ರಾಜಕೀಯ ಪಕ್ಷಗಳಿಂದ ನಾವು ದೂರ ಇರುತ್ತೇವೆ. ನಮಗೆ ಯಾವ ರಾಜಕಾರಣವೂ ಬೇಡ, ರಾಜಕೀಯ ತತ್ವವೂ ಬೇಡ ಎನ್ನುವುದು ರೈತಚಳುವಳಿಯ ಕೆಲವು ಮುಖಂಡರ ಕೂಗು.

ಕಾರಣಗಳು ಏನೇ ಇರಲಿ, ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ರೈತ ಚಳುವಳಿಗಳು ಆರಂಭವಾದದ್ದು ರಾಜಕೀಯ ಪಕ್ಷಗಳ ಪ್ರಯತ್ನದಿಂದ ಅಲ್ಲ. ಅಂಥದೊಂದು ಚಳುವಳಿಯ ಕಿಡಿ ನಂದದಂತೆ ನೋಡಿಕೊಳ್ಳುವುದರ ಜೊತೆಗೆ, ಕೆಲವು ಪಕ್ಷಗಳು ಲಾಭ ಪಡೆಯಲು ಚಳುವಳಿಗೆ ಸೇರಿದರೆ, ತತ್ವನಿಷ್ಠೆಯುಳ್ಳ ಪಕ್ಷಗಳು ಅದನ್ನು ಸರಿಯಾದ ದಾರಿಗೆ ಕೊಂಡೊಯ್ಯಲು ಪ್ರಯತ್ನಿಸುತ್ತಿವೆ.

ತಮಿಳುನಾಡಿನ ನಾರಾಯಣಸ್ವಾಮಿ ನಾಯ್ಡು ಅವರ ಸಂಘಟನೆ ರಾಜಕೀಯ ತತ್ವದಿಂದ ಪ್ರೇರಿತವಾದದ್ದಲ್ಲ. ಅವರದು ಜಮೀನ್ದಾರಿ ರೈತರ ಸಂಘಟನೆ. ಯಾವುದೇ ದಾರಿ ಕಾಣದೆ ತೊಳಲಾಡುತ್ತಿದ್ದ ರೈತರಿಗೆ, ನಾಯ್ಡು ನೇತೃತ್ವದ ಸಂಘಟನೆ ಆಕರ್ಷಕವಾಗಿ ಕಂಡದ್ದು ಸಹಜ. ಆದರೆ ಈಗ ಈ ಸಂಘಟನೆಗೆ ಸೇರಿದವರು ಹಳ್ಳಿಗಳಲ್ಲಿ ಗೂಂಡಾಗಿರಿ ನಡೆಸುತ್ತಿದ್ದಾರೆ. ನಾಯ್ಡು ಅವರ ಕುಖ್ಯಾತವಾದ ಕೆಲಸ ಎಂದರೆ ಹರಿಜನರಿಗೆ ವಸತಿಗೆ ನಿವೇಶನ ಹಂಚುವುದನ್ನು ವಿರೋಧಿಸಿದ್ದು. ಅಷ್ಟೇ ಅಲ್ಲ ಕಾರ್ಮಿಕರನ್ನು ವಿರೋಧಿಸಬೇಕು ಎಂದು ಅವರು ರೈತರನ್ನು ಪ್ರಚೋದಿಸುತ್ತಿದ್ದಾರೆ. ಹರಿಜನರ ಮೇಲೆ ಅವರ ಸಂಘಟನೆಯವರು ಹಲ್ಲೆ ನಡೆಸುತ್ತಿದ್ದಾರೆ. ಇವರ ಕೃತ್ಯಗಳನ್ನು ತಮಿಳುನಾಡಿನ ವಿಧಾನಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಾಸಕ ಆರ್. ಉಮಾನಾಥ್ ಉಗ್ರವಾಗಿ ಖಂಡಿಸಿದ್ದರು. ಸಿಐಟಿಯು ಹರಿಜನರಿಗೆ ನಿವೇಶನ ದೊರೆಯಲೇಬೇಕೆಂದು ಒತ್ತಾಯಿಸಿ ತಿರುಚಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಮಹಾಪ್ರದರ್ಶನ ನಡೆಸಿತು. ನಾಯ್ಡು ಅವರ ನಿಜವಾದ ಉದ್ದೇಶಗಳು ಈಗ ಬಯಲಾಗಿವೆ.

ಮಹಾರಾಷ್ಟ್ರದ ಶರದ್‌ಜೋಷಿ ಮಾಜೀ ಐ ಎ ಎಸ್ ಅಧಿಕಾರಿ. ಈರುಳ್ಳಿ ಬೆಲೆ ಚಳುವಳಿಯಿಂದ ಜೋಷಿ ನಾಸಿಕದ ರೈತರ ಮುಖಂಡರೆನಿಸಿದ್ದಾರೆ. ರೈಲು ಸಂಚಾರಕ್ಕೆ ತಡೆಒಡ್ಡುವುದು ಮುಂತಾದ ಕ್ರಮಗಳಿಂದ ಶೀಘ್ರಪ್ರಚಾರಕ್ಕೆ ಬಂದ ಶರದ್ ಜೋಷಿ ಸಂಘಟನೆ, ಸಾಕಷ್ಟು ರೈತರನ್ನು ಆಕರ್ಷಿಸಿರುವುದು ನಿಜ. ಇವರು ಚಳುವಳಿ ಆರಂಭಿಸಿದ ಮೇಲೆ ಅನೇಕ ರಾಜಕೀಯ ಪಕ್ಷಗಳು ಅದರಲ್ಲಿ ಕೈಹಾಕಿವೆ. ಆದರೆ "ನನ್ನೊಬ್ಬನ ಮಾತಿಗೇ ಕಿವಿಗೊಡಿ. ಬೇರೆಯವರ ಮಾತು ಕೇಳಬೇಡಿ" ಎಂದು ಜೋಷಿ ಭಾಷಣದಲ್ಲಿ ಕಿರುಚಿ ಹೇಳಿದರೂ, ಚಳುವಳಿ ಈಗ ಪೂರ್ತಿ ಅವರ ಕೈಲಿಲ್ಲ. ಅಮೆರಿಕದಿಂದ ಬಂದಮೇಲೆ ಫಾರಂ ಮಾಡಿ ಕೈಸುಟ್ಟುಕೊಂಡ ಈ ಮಾಜಿ ರೈತ ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದಾರೆ ಎಂಬ ದೂರುಗಳಿವೆ. ಇದು ಯುದ್ಧ, ನಾನೊಬ್ಬನೇ ನಾಯಕ, ನನಗೊಬ್ಬನಿಗೇ ಬೆಲೆಕೊಡಿ ಎಂದು ಅವರು ರೈತರಿಗೆ ಒತ್ತಿ ಹೇಳುತ್ತಿದ್ದಾರೆ. ಜೋಷಿಗೆ ಇಂಡಿಯಾದ ಕೈಯಿಂದ ಭಾರತವನ್ನು ಪಾರಾಗಿಸುವ ಅದ್ಭುತ ಆಲೋಚನೆಗಳೂ ಇವೆ. (ಭಾರತ ಎಂದರೆ ಆರೆಸ್ಸೆಸ್‌ನ ಹಿಂದೂರಾಷ್ಟ್ರ ಅಲ್ಲ ತಾನೆ?) ಕೀನ್ಸನ ಆರ್ಥಿಕ ತತ್ವಗಳು ಇವರ ಆದರ್ಶವಂತೆ. ಯಾವ ರಾಜಕೀಯ ಪಕ್ಷದಲ್ಲೂ ನಂಬಿಕೆಯಿಲ್ಲದ ಈ ಮುಖಂಡನ ಆಪ್ತ ಸಹವರ್ತಿಗಳು ಸಕ್ಕರೆ ಕಾರ್ಖಾನೆಯ ಮಾಲೀಕರು. ಮಹಾರಾಷ್ಟ್ರದ ಚರಿತ್ರೆಯಲ್ಲಿ ರೈತ ಚಳುವಳಿ ನಡೆದದ್ದೇ ಶರದ್‌ಜೋಷಿಯಿಂದ, ಇದುವರೆಗೆ ಯಾವ ರಾಜಕೀಯ ಪಕ್ಷಕ್ಕೂ ರೈತ ಚಳುವಳಿಯ ಅನುಭವ ಇಲ್ಲ ಎಂದು ಬೂರ್ಜ್ವಾ ಪತ್ರಿಕೆಗಳು ಸುಳ್ಳು ಬರೆಯುತ್ತಿವೆ. ಮಾರ್ಕ್ಸ್‌ವಾದಿಗಳ ನೇತೃತ್ವದಲ್ಲಿ ನಡೆದ ಆದಿವಾಸಿ ವಾರಲೀಯರ ಸಶಸ್ತ್ರ ಹೋರಾಟವನ್ನು ಅವು ಬೇಕೆಂದೇ ಮರೆತಂತಿದೆ.

ಕರ್ನಾಟಕದ ಹೆಚ್. ಎಸ್. ರುದ್ರಪ್ಪನವರಿಗೆ ರಾಜ್ಯವ್ಯಾಪಿ ನಾಯಕತ್ವ ಇಲ್ಲ. ಶರದ್‌ಗಿರುವಂಥ ಡೈನಮಿಕ್ ವ್ಯಕ್ತಿತ್ವವೂ ಇಲ್ಲ. ಶಿವಮೊಗ್ಗ ನಗರವನ್ನು ರೈತರು ಸ್ತಬ್ಧಗೊಳಿಸುವ ಚಳುವಳಿಗೆ ಅವರು ಮಾರ್ಗದರ್ಶನ ಕೊಟ್ಟಿದ್ದಾರೆ. ಈ ಪ್ರಗತಿಪರ ಜನತಂತ್ರ ರಂಗವು ಸಂಘಟಿಸಿರುವ ರೈತರ ಜಾಥಾಗೆ ಬೆಂಬಲ ಕೊಡಬೇಡಿ ಎಂದು ಅವರು ಸಾರಿದ್ದಾರೆ. ರಾಜಕೀಯ ಬೇಡ ಎನ್ನುವುದರ ಹಿಂದೆಯೆ ಏನೋ ರಾಜಕಾರಣ ಇದೆ. ಆದರೆ ರುದ್ರಪ್ಪನವರ ಕರೆಯನ್ನು ಕಡೆಗಣಿಸಿ ಶಿವಮೊಗ್ಗದ ರೈತರು ಜಾಥಾಗೆ ಬಂದಿದ್ದಾರೆ. ಕರ್ನಾಟಕದ ರೈತರಿಗೆ ನಾರಾಯಣಸ್ವಾಮಿನಾಯ್ಡು ಅವರ ಉದ್ದೇಶಗಳು ಅರ್ಥವಾಗುತ್ತವೆ. ರುದ್ರಪ್ಪನವರನ್ನೂ ಅವರು ಅರ್ಥ ಮಾಡಿಕೊಳ್ಳಬಲ್ಲರು. ಯಾವ ಸಂಘಟನೆಗೇ ಆಗಲಿ ರಾಜಕೀಯ ಆಯಾಮ ಇಲ್ಲದಿದ್ದರೆ ಸಂಘಟನೆಗೆ ಅರ್ಥ ಇರುವುದಿಲ್ಲ. ಆದರೆ ಯಾವ ಪಕ್ಷದ ರಾಜಕೀಯವನ್ನು ಆರಿಸಿಕೊಳ್ಳಬೇಕೆಂದು ನಿರ್ಧರಿಸುವಾಗ ತುಂಬ ಎಚ್ಚರ ವಹಿಸಬೇಕು. ಜನತಂತ್ರರಂಗಕ್ಕೆ ಬೆಂಬಲ ನೀಡಬೇಡಿ ನಮಗೆ ರಾಜಕೀಯ ಬೇಡ ಎಂದು ಬಾಯಲ್ಲಿ ಹೇಳುತ್ತಲೇ ಸರ್ಕಾರಕ್ಕೆ ಸಹಾಯ ಮಾಡುತ್ತಿರುವುದು ಕ್ಷುದ್ರ ರಾಜಕೀಯವಲ್ಲವೇ? ಸರ್ಕಾರವು ಮುಖಂಡರಲ್ಲಿ ಒಡಕು ಹುಟ್ಟಿಸಲು ಆಮಿಷ ತೋರಿಸುತ್ತದೆ. ಮುಖಂಡರು ರೈತರನ್ನು ಒಡೆಯುತ್ತಾರೆ. ಆದರೆ ಕರ್ನಾಟಕದ ರೈತ ಚಳುವಳಿ ರುದ್ರಪ್ಪನವರನ್ನು ಮೀರಿ ಬೆಳೆಯುತ್ತದೆ. ತನ್ನ ರಾಜಕೀಯವನ್ನು ಗುರುತಿಸಿಕೊಂಡರೆ ಬಲಿಷ್ಠವಾಗುತ್ತದೆ.

—ಆರ್. ಪೂರ್ಣಿಮಾ

ನರಗುಂದ ಬಂಧುಗಳು

ಬಿಸಿಲ ಬೇಗೆಗೆ ಬಿರಿದ ನೆಲದೊಳಗಿಂದ ಬಿಸಿಯುಸಿರು
ಬಸಿರಿಟ್ಟ ಬೀಜಗಳ ಸುಟ್ಟು ಹೊಗೆಯಾಡುತಿದೆ ಗಾಳಿಯಲ್ಲಿ
ನೊಗ ಹೊತ್ತ ಜೀವಗಳು ಜಡವಾಗಿ ಬಡವಾಗಿ
ಎಲುಬುಗೂಡುಗಳಾಗಿ ಹಸಿರು ಕಾಣದೆ
ಉಸಿರಡಗಿ ಮೂಳೆ ಚಕ್ಕಳದ ತಟ್ಟೆಗಳು.
ನೀರಿಲ್ಲದ ಕಾಲುವೆಗಳು ಕೆಸರಿಲ್ಲದ ಕುಂಟೆಗಳಲ್ಲಿ
ಒಣಗಿ ತರಗಾದ ಮೀನುಗಳ ರಾಶಿ
ನೀಲಿಯಾಕಾಶದಲ್ಲಿ ಬಂಜೆ ಮೋಡದ ಕೆಳಗೆ
ಹಾರಾಡುತ್ತಿರುವ ಹದ್ದು ಕಾಗೆಗಳ ಸದ್ದಿಲ್ಲ.
ಗುಡ್ಡ ಬೆಟ್ಟಗಳಲ್ಲಿ ಮುಖ ಸೋತ ಗಿಡ ಮರ ಬಳ್ಳಿ
ಸುಟ್ಟು ಸುಡುಗಾಡಾದ ಕರುನಾಡ ನೆಲ.
ನೀರು ಬತ್ತಿದ ಕಣ್ಣುಗಳು, ಮಾಂಸವಿಲ್ಲದ ಮೂಳೆಗಳು
ಓಡಾಡುತ್ತಿವೆ ಹೊಲದ ಬದುಗಳ ಮೇಲೆ
ತಲೆ ಎತ್ತಿ ಆಕಾಶದತ್ತ ಹತ್ತಿರಾಶಿಯ ಕಂಡು ಸಂಕಟದ
ಸಮುದ್ರದಲ್ಲಿ ಬದುಕಿವೆ-ಬದುಕು ಮನ್ನಿಸು ಎಂದು
ನಾರು ಹುಣ್ಣಿಗೆ ಬರೆ ಇಕ್ಕಿದಂತೆ, ಬರಗಾಲಕ್ಕೆ ನೆಂಟರು
ಬಂದರೋ ಬಂದರು ಕಂದಾಯ ಸುಂಕಗಳ ಸುಲಿಗೆಗೆ
ಅಧಿಕಾರಿಗಳ ದಂಡು ಚಿರತೆ ಹಿಂಡಾಗಿ.
ಎತ್ತಿ ಎಸೆದರು ಆಚೆ ಇದ್ದಬದ್ದುದನೆಲ್ಲ ಚೆಂಬು ತಣಿಗೆ,
ನೆಲಕೆ ಬಿದ್ದ ಸದ್ದಿಗೆ ಭೂತಾಯಿ ಎದೆಯೊಡೆದು ಅತ್ತಳೋ
ಮಿಳಮಿಳನೆ ನೋಡಿ ಗಳಗಳನೆ ಅಳುವಾಗ
ಕರುಳ ಕತ್ತರಿಸಿ ಎಳೆದೆಳೆದು ಸೆಳೆದರೋ
ಬತ್ತಿಹೋಗಿದೆ ಕಣ್ಣು ಬಲವಿಲ್ಲ ಭುಜದೊಳಗೆ
ಎದೆಯೊಳಗೆ ರಂಜಕದ ಕಿಡಿಹತ್ತಿ ಕಣ್ಣೊಳಗೆ
ತುಳುಕಿ ಗಾಳಿಯಲಿ ಸುಳಿಸುಳಿದು ಮುಖ ಮುಖಗಳಲಿ
ಎದುರಿದ್ದು ನುಗ್ಗಿ ಪ್ಯಾಕೊಡವಿ ಕುಡುಗೋಲು ಕೊಡಲಿ
ರಾಟಿ ಪೇಟೆಗಳ ಹಿಡಿದು ಕಾಲಿಟ್ಟ ಕಡೆಯಲ್ಲೆಲ್ಲ ಲಂಕಾದಹನ
ಕೋವಿನಳಿಗೆಗಳ ಹೆಲ್ಲು ಹೋಗೆಗಳಿಗೆ ಎದೆಕೊಟ್ಟು
ಹೊಡೆದ ಗುಂಡುಗಳ ಬಾಯಲ್ಲಿ ನುಂಗಿ ನುಗ್ಗಿದರು
ನೆಲತಾಯಿ ಮಕ್ಕಳು ನರಗುಂದ ಬಂಧುಗಳು.

—ಸಿ. ವೀರಣ್ಣ

ಪುಸ್ತಕ ಪರಿಚಯ : ಕಾಗೋಡು ಸತ್ಯಾಗ್ರಹ ಲೇ : ಜಿ. ರಾಜಶೇಖರ್
ಪ್ರಕಾಶಕರು : ಅಕ್ಷರ ಪ್ರಕಾಶನ, ಸಾಗರ

ಮರೆತ ರೈತಹೋರಾಟದ ಉತ್ತಮ ಅಧ್ಯಯನ

ಕಾಗೋಡು ಎಂಬ ಶಬ್ದ ಇದುವರೆಗೆ ನಮ್ಮಲ್ಲಿ ಹಲವರು ಕೇಳಿರಲಿಕ್ಕಿಲ್ಲ, ಅಥವಾ ಇತ್ತೀಚೆಗೆ ಕಾಗೋಡು ತಿಮ್ಮಪ್ಪನವರು ಸಚಿವರಾದ ಮೇಲೆ ನಡೆದ ಅಸಂಖ್ಯಾತ ಸನ್ಮಾನ ಸಮಾರಂಭಗಳ ವರದಿಗಳಲ್ಲಷ್ಟೇ ಕೇಳಿರಬಹುದು. ಆದರೆ ಕಾಗೋಡು ಸತ್ಯಾಗ್ರಹದ ಬಗ್ಗೆ ಬಹಳ ಜನ ತಿಳಿದಿರಲಿಕ್ಕಿಲ್ಲ. ಸುಮಾರು 30 ವರ್ಷಗಳ ಕೆಳಗೆ ನಡೆದ, ನಾವು ಸಹಜವಾಗಿಯೇ ಹೆಮ್ಮೆ ಪಡಬಹುದಾದ ಈ ಧೀರ ರೈತ ಹೋರಾಟದ ಒಂದು ವಿವರವಾದ ಅಧ್ಯಯನ ಮೇಲೆ ಹೇಳಿದ ಪುಸ್ತಕ.

ಕಾಗೋಡು ಶಿವಮೊಗ್ಗಾ ಜಿಲ್ಲೆಯ ಒಂದು ತೀರಾ ಚಿಕ್ಕದಾದ ಗ್ರಾಮ. 1950ರ ವೇಳೆಗೆ ಇಲ್ಲಿ ಸುಮಾರು 90 ಕುಟುಂಬಗಳಿದ್ದವು. ಇವುಗಳಲ್ಲಿ 70 ದೀವ ಜಾತಿಯವರದಿದ್ದು, 14 ಹರಿಜನರದ್ದು. ಈಗಲೂ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಕಡುಬಡವರೇ ದೊಡ್ಡ ಸಂಖ್ಯೆಯಲ್ಲಿರುವ ಕೆಳ ಜಾತಿಗಳಲ್ಲಿ ದೀವರ ಜಾತಿಯೂ ಒಂದು. ಪರಂಪರಾಗತವಾಗಿ ಹೆಂಡ ಇಳಿಸುವುದು ಉಪಕಸುಬಾಗಿರುವ ಇವರಲ್ಲಿ ಹೆಚ್ಚಿನವರು ಕೃಷಿಗೇ ಅಂಟಿಕೊಂಡವರು. ವಿದ್ಯಾಭ್ಯಾಸ ಹಾಗೂ ಕೃಷಿಯೇತರ ಉದ್ಯೋಗಗಳಿಂದ ಬಹಳ ದೂರ ಉಳಿದವರು. ಕೃಷಿಯೇ ಮುಖ್ಯ ಕಸುಬಾಗಿದ್ದರೂ ಹೆಚ್ಚಿನವರಿಗೆ ಸ್ವಂತ ನೆಲವಿರಲಿಲ್ಲ. ಎಲ್ಲರೂ ಗೇಣಿ ಒಕ್ಕಲುಗಳಾಗಿದ್ದರು. ಶಿವಮೊಗ್ಗ ಜಿಲ್ಲೆಯಲ್ಲೇ ದೊಡ್ಡ ಜಮೀನುದಾರರ ಪೈಕಿ ಪರಿಗಣಿಸಲ್ಪಡುತ್ತಿದ್ದ ಕಾಗೋಡು ಗೌಡರು ಇವರ ಭೂಮಾಲಕರು. ಇಂತಹ ದೀವರು ಸುಮಾರು ಎರಡು ವರ್ಷ ನಡೆಸಿದ ಹೋರಾಟವೇ "ಕಾಗೋಡು ಸತ್ಯಾಗ್ರಹ" ಎಂದು ಪ್ರಖ್ಯಾತವಾಗಿದೆ.

1948ರ ಜನವರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಮಲೆನಾಡು ಗೇಣಿದಾರರ ಸಂಘ ಸ್ಥಾಪಿತವಾಗಿತ್ತು. ನಾಲ್ಕು ತಿಂಗಳ ನಂತರ ಸಾಗರ ತಾಲ್ಲೂಕಿನಲ್ಲಿ ಸಾಗರ ತಾಲ್ಲೂಕು ರೈತಸಂಘ ಹುಟ್ಟಿಕೊಂಡಿತು. ಮುಂದೆ ಅವೆರಡೂ 1951ರಲ್ಲಿ "ಮಲೆನಾಡು ರೈತ ಸಂಘ" ಎಂಬ ಹೆಸರಲ್ಲಿ ಒಂದಾಯಿತು.

ಕೊಳಗದ ತಕರಾರು

ಗೇಣಿ ಪ್ರಮಾಣ ನಿಗದಿಯಾಗಬೇಕು. ಅದು ಫಸಲಿನ ಮೂರನೇ ಒಂದಕ್ಕಿಂತ ಜಾಸ್ತಿ ಇರಕೂಡದು ಎಂಬುದು ರೈತ ಸಂಘದ ಬೇಡಿಕೆಗಳಲ್ಲಿ ಮುಖ್ಯವಾದದ್ದು. ಸಾಗರ ತಾಲ್ಲೂಕು ರೈತಸಂಘ ಈ ಬೇಡಿಕೆಯನ್ನು ವಿಶಿಷ್ಟವಾದ ರೀತಿಯಲ್ಲಿ ಜಮೀನುದಾರರ ಮುಂದಿಟ್ಟಿತು. ಸಾಗರ ತಾಲ್ಲೂಕಿನಲ್ಲಿ ಆಗ ಆಹಾರಧಾನ್ಯಗಳ ಅಳತೆಯ ಮಾನ ಖಂಡುಗವಾಗಿತ್ತು. ಒಂದು ಖಂಡುಗಕ್ಕೆ 20 ಕೊಳಗ. ಒಂದು ಕೊಳಗಕ್ಕೆ ಮೂರು ಸೇರು. ಆದರೆ

IVನೇ ಪುಟ ನೋಡಿ

ಮರೆತ ರೈತ ಹೋರಾಟದ ಉತ್ತಮ ಅಧ್ಯಯನ

IIನೇ ಪುಟದಿಂದ

ಶಿವಮೊಗ್ಗದ ಕೆಲವು ಹೋಬಳಿಗಳಲ್ಲಿ ಗೇಣಿ ಅಳೆಸಿಕೊಳ್ಳಲು ಉಗಯೋಗಿಸುತ್ತಿದ್ದ ಕೊಳಗ 3¼, 3½, 3¾ ಸೇರು ಕೆಲವೊಮ್ಮೆ 4ಸೇರಿನದ್ದೂ ಆಗಿರುತ್ತಿತ್ತು. ಸರಕಾರಿ ಲೆಕ್ಕದ ಕೊಳಗಕ್ಕೆ ಮೂರೇ ಸೇರು. ಹೀಗಿರುತ್ತಾ ಕೆಲವು ಜಮೀನುದಾರರು ಮಾತ್ರ ಯಾಕೆ ಜಾಸ್ತಿ ಪ್ರಮಾಣದ ಕೊಳಗಗಳಲ್ಲಿ ಅಳೆಸಿಕೊಳ್ಳಬೇಕು? ಇದು ಅನ್ಯಾಯ ಎಂದು ಸಂಘ ಪ್ರಚಾರ ಮಾಡಿತು. 3 ಸೇರಿನ ಕೊಳಗದ ಬೇಡಿಕೆಯನ್ನು ಹಲವು ಜಮೀನುದಾರರು ಮನ್ನಿಸಿದರು. ಆದರೆ ಕಾಗೋಡಿನ ಗೌಡರು ಅದನ್ನು ತಿರಸ್ಕರಿಸಿದರು.

ಕಾಗೋಡಿನ ದೀವರೆಲ್ಲ ಸೇರಿ ಗೌಡರನ್ನು ಕೇಳಿದಾಗ ಹೀನಾಯವಾಗಿ ಮಾತಾಡಿದರು. ಅದೇ ರಾತ್ರಿ ದೀವರೆಲ್ಲ ಸೇರಿ ಇನ್ನು ಮುಂದೆ ಗೌಡರಿಗೆ 3 ಸೇರಿನ ಕೊಳಗದಲ್ಲಿ ಅಳೆಯುವುದೇ ಸೈ ಎಂದು ತೀರ್ಮಾನಿಸಿ ಅದನ್ನು ಜಾರಿಗೊಳಿಸಿಯೇಬಿಟ್ಟರು. ಗೌಡರು ಒಪ್ಪದ್ದರಿಂದ ಅವರ ಹೆಸರಿನಲ್ಲಿ ಸರ್ಕಾರಿ ಮಿಲ್ಲುಗಳಿಗೆ ಭತ್ತವನ್ನು ಹಾಕಿ ರಶೀದಿ ಪಡೆದರು. ಸಿಟ್ಟಾದ ಗೌಡರು ನಮ್ಮ ಜಮೀನು ಬಿಡಿ ಎಂದರು. ಮಲೆನಾಡು ರೈತ ಸಂಘದ ಒಂದು ನಿಯೋಗ ಅಧ್ಯಕ್ಷ ಕಡಿದಾಳ ಮಂಜಪ್ಪನವರ ನೇತೃತ್ವದಲ್ಲಿ ಮಂತ್ರಿಗಳನ್ನು ಭೇಟಿ ಮಾಡಿತು. ಆಗಿನ ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ಸಹಾಯವನ್ನು ಕೋರಲಾಯಿತು. ಆದರೆ ಎಲ್ಲವೂ ನಿಷ್ಫಲ. 1951ರ ಜನವರಿಯಲ್ಲಿ ಶಿವಮೊಗ್ಗಾ ಜಿಲ್ಲಾ ಕಲೆಕ್ಟರರ ಸಮ್ಮುಖದಲ್ಲಿ ನಡೆದ ಮಾತುಕತೆಯೂ ವಿಫಲವಾಯಿತು. ಗೌಡರು ತಮ್ಮ ಪಟ್ಟು ಬಿಡಲಿಲ್ಲ.

ಸತ್ಯಾಗ್ರಹದ ಆರಂಭ

1951 ರ ಮಾರ್ಚ್--ಎಪ್ರಿಲ್ ತಿಂಗಳುಗಳಲ್ಲಿ ಕಾಗೋಡಿನ ಒಕ್ಕಲುಗಳು ತಮ್ಮ ಗದ್ದೆಗಳಿಗಿಳಿದಾಗ ಗೌಡರಕಡೆಯವರು ಅದನ್ನು ತಡೆದರು. ಗದ್ದೆಗಳಿಗೆ ಕಾಲಿಡಕೂಡದು ಎಂದು ಬೆದರಿಸಿದರು. ಒಕ್ಕಲುಗಳ ಮೇಲೆ ಕ್ರಿಮಿನಲ್ - ಟ್ರೆಸ್‌ಪಾಸ್ ದಾವೆ ಹಾಕಲಾಯಿತು. ಒಕ್ಕಲುಗಳ ಬಂಧನ ಆರಂಭವಾಯಿತು: ರೈತ ಸಂಘದ ಪ್ರಚಾರದಿಂದಾಗಿ ಸುದ್ದಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹರಡಿತು ಈ ಹಳ್ಳಿಗಳ ದೀವರ ಒಕ್ಕಲುಗಳು ಪ್ರತಿದಿನ ನೊಗ ಸಮೇತ ಬಂದು ಗೌಡರ ಗದ್ದೆಗಳಿಗೆ ಇಳಿಯಲಾರಂಭಿಸಿದರು. ಅತ್ತ ಎಲ್ಲಾ ಲಿಂಗಾಯಿತ ಜಮೀಂದಾರರು ತಮ್ಮ ಆಳುಗಳ ಸಮೇತ ಗೌಡರಿಗೆ ನೆರವಾಗಲು ಬರಲಾರಂಭಿಸಿದರು. ಹೀಗೆ ಕೊಳಗದ ತಕರಾರು ದೀವರ ಲಿಂಗಾಯತ ಸಂಘರ್ಷದ ರೂಪ ಪಡೆಯಿತು. ಜಮೀಂದಾರರು ಮತ್ತು ಸರಕಾರ ನಿಜವಾದ ಆರ್ಥಿಕ ಬೇಡಿಕೆಯನ್ನು ಬದಿಗೆ ಸರಿಸಲು ಇದರ ದುರುಪಯೋಗ ಪಡೆದು ಅಪಪ್ರಚಾರ ನಡೆಸಿದರು.

ಸತ್ಯಾಗ್ರಹ ಮುಂದುವರೆಯಿತು. ನಾಯಕರ ಮೇಲೆ ಅರೆಸ್ಟು ವಾರಂಟು ಹೊರಟಿತು. ಒಂದು ಪೋಲೀಸು ತಂಡ ಕಾಗೋಡಿನಲ್ಲಿ ಕ್ಯಾಂಪು ಹೂಡಿತು. ಪೋಲೀಸರು ಗೌಡರ ಆಳುಗಳೊಡನೆ ಸೇರಿ ದಬ್ಬಾಳಿಕೆ ನಡೆಸಿದರು. ಈ ಮಧ್ಯೆ ಸಂಧಾನದ ಇನ್ನೊಂದು ಪ್ರಯತ್ನ ವಿಫಲವಾಯಿತು. ಪರಿಸ್ಥಿತಿ ತೀರಾ ಗಂಭೀರವಾಗಲಾರಂಭಿಸಿದಾಗ ಸರಕಾರ ಶಿವಮೊಗ್ಗದಲ್ಲಿ ಸಂಧಾನಸಭೆ ಕರೆಯಿತು. ಅದೂ ವಿಫಲವಾಯಿತು. ಇಷ್ಟು ಹೊತ್ತಿಗೆ ಕಾಂಗ್ರೆಸ್ಸಿಗರಾಗಿಕಡಿದಾಳ್ ಮಂಜಪ್ಪ ಮಲೆನಾಡು ರೈತ ಸಂಘದ ಅಧ್ಯಕ್ಷರಾಗಿದ್ದರೂ ಸತ್ಯಾಗ್ರಹದಿಂದ ದೂರ ಸರಿದರು. ಸಾಗರ ತಾಲ್ಲೂಕು ರೈತ ಸಂಘ ಸತ್ಯಾಗ್ರಹದ ಆರಂಭದಿಂದಲೂ ಸಕ್ರೀಯ ಬೆಂಬಲ ನೀಡುತ್ತಿದ್ದ ಸೋಷಲಿಸ್ಟ್ ಪಕ್ಷದ ಸಹಾಯದಿಂದ ಸತ್ಯಾಗ್ರಹ ಮುಂದುವರೆಸಲು ನಿರ್ಧರಿಸಿತು.

ಸೋಷಲಿಸ್ಟರ ಪಾತ್ರ

ಸೋಷಲಿಸ್ಟರು ಸತ್ಯಾಗ್ರಹದ ನಾಯಕತ್ವ ವಹಿಸಿದ ಮೇಲೆ 'ಇಂಕಿಲಾಬ್ ಜಿಂದಾಬಾದ್' ಜಮೀನುದಾರಿಗೆ ಧಿಕ್ಕಾರ' 'ಉಳುವವನೆ ಹೊಲದೊಡೆಯ' ಘೋಷಣೆ ಕೂಗುವುದು, ಗದ್ದೆಗಳಿಗಿಳಿಯುವುದು, ಬೇಲಿ ಮುರಿಯುವುದು, ಪೋಲೀಸರು ಅಟ್ಟಿಕೊಂಡು ಬಂದು ಲಾಕಪ್ಪಿಗೆ ಹಾಕುವುದು, ಈ ರೀತಿ ಸತ್ಯಾಗ್ರಹ ಮುಂದುವರಿಯಿತು. ರಾಜ್ಯದ ಹಲವು ಕಡೆಗಳಿಂದ ಸೋಷಲಿಷ್ಟರ ತಂಡಗಳು ಒಂದು ಸತ್ಯಾಗ್ರಹ ನಡೆಸಿತು. ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ ಜೋರಾದ ಪ್ರಚಾರ ನಡೆಯಿತು. ಅಖಿಲ ಭಾರತ ಖ್ಯಾತಿಯ ಸೋಷಲಿಸ್ಟ್ ನಾಯಕ ಡಾ॥ ಲೋಹಿಯಾ ಬಂದು ಸ್ವತಃ ಭಾಗವಹಿಸಿ ಬಂಧಿತರಾದರು. ಆದರೆ ಸೋಷಲಿಸ್ಟ್‌ಪಕ್ಷ ಗೋಪಾಲಗೌಡರ ಸಮರ್ಥ ನಾಯಕತ್ವದಲ್ಲಿದ್ದರೂ ಯೋಗ್ಯ ಸಂಘಟನೆಯಿಲ್ಲದೆ ಬಹಳ ದಿನ ಸಂಘಟನೆ ಮುಂದುವರೆಸಲಾಗಲಿಲ್ಲ. 1951ರ ಜುಲೈ 3 ರಂದು ಅದುವರೆಗೆ ತಲೆಮರೆಸಿಕೊಂಡು ತಿರುಗಾಡುತ್ತಿದ್ದ ಗೋಪಾಲಗೌಡರ ಬಂಧನವಾದ ಮೇಲೆ ಸತ್ಯಾಗ್ರಹ ಆಗಸ್ಟ್ ತಿಂಗಳ ಹೊತ್ತಿಗೆ "ತಲೆ ತಲಾಂತರದಿಂದ ಸಾಗುವಳಿ ಮಾಡಿಕೊಂಡಿದ್ದ ಭೂಮಿಯ ಸ್ವಾಧೀನ ಮೊದಲಾಗಬೇಕು" ಎಂಬ ಮುಖವುಳಿಸುವ ರಾಜಿಸೂತ್ರದೊಂದಿಗೆ ತಣ್ಣಗಾಯಿತು.

ಇದು ಸ್ವಲ್ಪದರಲ್ಲಿ ಕಾಗೋಡು ಸತ್ಯಾಗ್ರಹದ ಕಥೆ. ಬಹುಶಃ ತಕ್ಷಣದ ಉದ್ದೇಶಗಳ ದೃಷ್ಟಿಯಿಂದ ಈ ಸತ್ಯಾಗ್ರಹ ಸೋತಿತು. ಆದರೆ ನಾಡಿಗೆ ಸ್ವಾತಂತ್ರ್ಯ ಬಂದ ಹೊಸದರಲ್ಲಿಯೇ ಇಂತಹದೊಂದು ಸತ್ಯಾಗ್ರಹ ನಡೆದದ್ದು ಅದೂ ಆರ್ಥಿಕವಾಗಿ ಸಾಮಾಜಿಕವಾಗಿ ಬಹಳ ಹಿಂದುಳಿದ ದೇವರು ನಡೆಸಿದರೆಂಬುದೇ ಅದರಷ್ಟಕ್ಕೆ ಒಂದು ಸಾಧನೆ. ಮೇಲ್ಜಾತಿಯ ಜಮೀನುದಾರರ ವಿರುದ್ಧ ದೀನರಾಗಿದ್ದ ದಿವರ ಸ್ವಾಭಿಮಾನ ಕೆರಳಿನಿಂತಿದ್ದು ಅವರ ನೆರವಿಗೆ ಉಳಿದ ಹಳ್ಳಿಗಳ ದೀವರು ಸತ್ಯಾಗ್ರಹದಲ್ಲ ಭಾಗವಹಿಸಿದ್ದು ಮಹತ್ವ ಪೂರ್ಣವಾದ ಅಂಶ. ಈ ಸತ್ಯಾಗ್ರಹದ ನಂತರ ಕಾಗೋಡಿನಲ್ಲಿ ಬಿಟ್ಟಿ ದುಡಿಮೆ ನಿಂತೇಹೋಯಿತೆಂಬುದೂ ಗಮನಾರ್ಹ.

ಸಾಧನೆ ವೈಫಲ್ಯ

ಒಂದು ಗಂಭೀರ ಅಧ್ಯಯನವಾದರೂ ಸುಲಭವಾಗಿ ಓದಿಸಿಕೊಂಡು ಹೋಗುವ ಈ ಪುಸ್ತಕದಲ್ಲಿ ಕಾಂಗ್ರೆಸ್ ಸರಕಾರದ ನಾಯಕರ ಇಬ್ಬಂದಿತನದ ಬಗ್ಗೆ; ಹನುಮಂತಯ್ಯನವರತಂಹ 'ಸಜ್ಜನ ಮುಖ್ಯಮಂತ್ರಿ'ಯ ದುಷ್ಟಬುದ್ಧಿಯ ಬಗ್ಗೆ, ಬಡ ಮತ್ತು ಉದಾರ ಆದರ್ಶಗಳ ಬಗ್ಗೆ ಸೊಗಸಾಗಿ ಮಾತಾಡುತ್ತಾ ಮೂರ್ತರೂಪ ಪಡೆಯುವಾಗ ಅದನ್ನು ತುಳಿದುಹಾಕುವ ನರಭಕ್ಷಕ ನೆಹ್ರೂ ರಾಜಕೀಯ ಪರಂಪರೆ ಬಗ್ಗೆ ಚೆನ್ನಾಗಿ ಬರೆದಿದ್ದಾರೆ. ಇದಕ್ಕಿಂತಲೂ ಮುಖ್ಯವಾಗಿ ರೈತರು ದೇಶಾದ್ಯಂತ ಎಚ್ಚೆತ್ತಿರುವ ಈ ಸಂದರ್ಭದಲ್ಲಿ ಈ ಧೀರ ಹೋರಾಟ ವಿಫಲವಾಗಲು ಲೇಖಕರು ಗುರುತಿಸಿದ ಕಾರಣಗಳು ಗಮನಾರ್ಹ. ಈ ದೇಶದ ರೈತಾಪಿವರ್ಗ ಮತ್ತು ಇತರ ದುಡಿಯುವ ವರ್ಗಗಳನ್ನು ಸಂಘಟಿಸುವ ಶಕ್ತಿ ಇರುವುದು ಎಡಪಂಥೀಯ ಪಕ್ಷಗಳಿಗೆ ಮಾತ್ರ. ಆದರೆ ಈ ಪಕ್ಷಗಳ ಸಂಘಟನಾತ್ಮಕ, ಸೈದ್ಧಾಂತಿಕ ನ್ಯೂನ್ಯತೆಗಳಿಂದಾಗಿ ಈ ದಿಕ್ಕಿನಲ್ಲಿ ಆಗಿರುವ ಸಾಧನೆ ಬಹಳ ಕಮ್ಮಿ. ಕಾಗೋಡು ಸತ್ಯಾಗ್ರಹ ಸಾಗರ ಬಿಟ್ಟು ಬೇರೆ ಕಡೆ ವ್ಯಾಪಿಸದೆ ಹೋದದ್ದು, ದೀವರುಗಿಂತಲೂ ಕೆಳಮಟ್ಟದಲ್ಲಿದ್ದ ಭೂಹೀನ ಹರಿಜನರನ್ನು ಹೋರಾಟದಲ್ಲಿ ಒಳಗೊಳ್ಳಲು ರೈತ ಸಂಘವಾಗಲಿ, ಸೋಷಲಿಸ್ಟ್‌ರಾಗಲಿ ಪ್ರಯತ್ನಿಸದೆ ಇದ್ದದ್ದು, (ಜಮೀನುದಾರರು ಹರಿಜನರನ್ನು ದೀವರ ವಿರುದ್ಧ ಉಪಯೋಗಿಸಿದ್ದರು.) ಕೆಲವು ನಾಯಕರನ್ನು ಬಿಟ್ಟು ಹೆಚ್ಚಿನ ಪಕ್ಷದ ಸದಸ್ಯರಿಗೆ ತಮ್ಮ ಹೋರಾಟದ ಬಗ್ಗೆ ಏನೇನೂ ಅರಿವಿಲ್ಲದ್ದು ಈ ಹೋರಾಟದ ಸೋಲಿಗೆ ಕಾರಣವಾದ ಕೆಲವು ಅಂಶಗಳು.

ಕನ್ನಡದಲ್ಲಿ ರೈತ ಹೋರಾಟದ ಈ ರೀತಿಯ ಸಮಗ್ರ ಅಧ್ಯಯನ ನಡೆದಿರುವುದು ಬಹುಶಃ ಇದೇ ಮೊದಲು ಈ ದೃಷ್ಟಿಯಿಂದ ರೈತ ಮತ್ತು ಹಳ್ಳಿ ಬಡವರನ್ನು ಸಂಘಟಿಸುವ ಕಾರ್ಯಕರ್ತರು ಮತ್ತು ಈ ಬಗ್ಗೆ ಆಸಕ್ತಿ ಇರುವ ಎಲ್ಲರೂ ಗಮನವಿಟ್ಟು ಓದಲೇಬೇಕಾದ ಪುಸ್ತಕ ಇದು.

—ವೇದ್


ಅಗಲಿದ ಎರಡು ಮಹಾಚೇತನಗಳು

IIನೇ ಪುಟದಿಂದ

ಕಾರ್ಯದರ್ಶಿಯಾಗಿಯೇ ಚುನಾಯಿತರಾಗುತ್ತಿದ್ದರು.

ಭೂಮಸೂದೆಯ ಅನುಷ್ಠಾನದ ಬಗ್ಗೆ 1973ರ ಫೆಬ್ರವರಿ 15–17 ರಂದು ಪಾಟ್ನಾದಲ್ಲಿ ನಡೆದ ವಿಚಾರ ಸಂಕಿರಣ ಮತ್ತು ಭಾರತ ಸರಕಾರದ ಗೃಹಖಾತೆ ತನ್ನ ಅಧಿಕಾರಿಗಳಿಗಾಗಿ ಡೆಹ್ರಾಡೂನ್‌ನಲ್ಲಿ ಏರ್ಪಡಿಸಿದ್ದ ಭೂಸಂಬಂಧಗಳ ಕುರಿತಾದ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಕೋನಾರ್ ಅವರನ್ನು ಆಮಂತ್ರಿಸಲಾಗಿತ್ತು. ಭಾರತದ ಭೂಮಿಯ ಪ್ರಶ್ನೆಯ ಕುರಿತು ಅವರಿಗಿದ್ದ ತಿಳುವಳಿಕೆ, ಅನುಭವ ಎಷ್ಟು ಅಗಾಧವಾದುದೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು.

ಕೃಷಿ, ಅರಣ್ಯ ಮತ್ತು ತೋಟಗಾರಿಕೆ ಕೆಲಸಗಾರರ ಸಂಘಟನೆಯ ಜಾಗತಿಕ ಸಮ್ಮೇಳನಗಳಲ್ಲಿ ಭಾಗವಹಿಸಲು ಅವರು ನಿಕೋಸಿಯಾ (ಸೈಪ್ರಸ್–ಅಕ್ಟೋಬರ್ 22–26, 1970) ಪ್ರಾಗ್ (ಜೆಕೋಸ್ಲೊವಾಕಿಯಾ ಆಗಸ್ಟ್ 28-ಸೆಪ್ಟಂಬರ 3, 1972) ಮತ್ತು ಬರ್ಲಿನ್ (ಜರ್ಮನ್ ಗಣತಂತ್ರ– ಆಗಸ್ಟ್– 31, 1973) ಗಳನ್ನು ಸಂದರ್ಶಿಸಿದ್ದರು. 1974ರ ಜುಲೈ 23 ರಂದು ತನ್ನ 59 ವರ್ಷ ಪ್ರಾಯದಲ್ಲಿ ಕ್ಯಾನ್ಸರ್ ಕಾಯಿಲೆಯಿಂದಾಗಿ ಕಾ. ಕೋನಾರ್ ತೀರಿಕೊಂಡರು.



ಸೂತ್ರ. ಮುಂದಿನ ವರ್ಷ ಆಸಾಮಿಗೆ ಬೆಳೆಪಾಲಿಗೆ ಕೊಡಬಹುದು ಅಥವಾ ಕೊಡದೆಹೋಗಬಹುದು. 1946ರಲ್ಲಿ ಮಾಡಿದ ಒಂದು ಅಂದಾಜು ಲೆಕ್ಕದ ಪ್ರಕಾರ ಸುಮಾರು ನಾಲ್ಕು ಎಕ್ರೆ ಜಮೀನಿನಲ್ಲಿ ಉತ್ಪಾದಿಸಿದ ಭತ್ತ ಸಮವಾಗಿ ಪಾಲು ಮಾಡಿಕೊಂಡರೆ ಇಬ್ಬರಿಗೂ 230 ರೂ. ದೊರೆಯುತ್ತದೆ. ಜಮೀನುದಾರನಿಗೆ ಇದು ನಿವ್ವಳ ಲಾಭ. ಆದರೆ ರೈತ ತನ್ನ ಸಂಸಾರದ ಕನಿಷ್ಠ ಅವಶ್ಯಕತೆ, ಉತ್ಪಾದನೆಗೆ ಮಾಡಿದ ಖರ್ಚು ತೂಗಿಸಲು 350ರೂ. ಸಾಲ ಮಾಡಬೇಕಾಗುತ್ತದೆ! ಲೇವಾದೇವಿಗಾರ ಜಮೀನುದಾರನೇ ಆಗಿರುತ್ತಾನೆ. ಸಾಲ ಬಾಕಿ, ಸಾಲದ ಬಡ್ಡಿ, ಉತ್ಪಾದನಾ ಖರ್ಚು, ಹೊಸ ಸಾಲ ಇವುಗಳಿಂದ ರೈತ ಜಮೀನುದಾರನ ಖಾಯಂ ಗುಲಾಮ.


ಈ ರೀತಿಯ ಪದ್ಧತಿಯಿಂದ ಬಳಲಿ ಬೆಂಡಾಗಿದ್ದ ರೈತನ ಪರಿಸ್ಥಿತಿ 30ರ ದಶಕದ ಕೊನೆಗೆ ಇನ್ನೂ ಹದಗೆಟ್ಟಿತು. 1939ರಲ್ಲಿ ಮಹಾಯುದ್ಧ ಆರಂಭವಾಯಿತು. ಯುದ್ಧ ಸಮಯದಲ್ಲಿ ಬೆಲೆಏರಿಕೆ ನಿರೀಕ್ಷಿಸಿ ಜಮೀನುದಾರ ಧಾನ್ಯ ಕೂಡಿಟ್ಟದ್ದರಿಂದ ಬಂದ 1943ರ ಮಹಾಕ್ಷಾಮದಿಂದ 40 ಲಕ್ಷ ಜನ ಸತ್ತರು. ಈ ಕಷ್ಟಕರ ಸಮಯದಲ್ಲಿ ಸಾವಿನ ದವಡೆಯಿಂದ ಪಾರಾಗಲು ತಮ್ಮ ಜಮೀನು ಬಹಳ ಕಡಿಮೆ ಬೆಲೆಗೆ ಜಮೀನುದಾರರಿಗೆ ಮಾರಿ ಹಲವರು ಭೂಹೀನರಾದರು. ಇದಿಷ್ಟೆ ಅಲ್ಲದೆ ಈಗ ಕಾಂಗ್ರೆಸ್ ಸ್ವಾತಂತ್ರ್ಯಾನಂತರ ಜಮೀನುದಾರಿ ಪದ್ಧತಿ ಮತ್ತು ಜಮೀನುದಾರರಿಗೆ ಅವರ ಜಮೀನಿನ ಪ್ರಮಾಣ ಆಧರಿಸಿ ಪರಿಹಾರ ಕೊಡಲಾಗುವುದೆಂದು ಹೇಳುತ್ತಿತ್ತು. ಆದ್ದರಿಂದ ಹಲವು ರೈತರನ್ನು ಓಡಿಸಿ, ಮತ್ತಿತರ ಎಲ್ಲಾ ವಿಧಗಳಿಂದ ಸಾಧ್ಯವಾದಷ್ಟು ಹೆಚ್ಚು ಜಮೀನು ತಮ್ಮ ಹೆಸರಿನಲ್ಲಿ ಮಾಡಿಕೊಳ್ಳಲು ಯತ್ನಿಸುತ್ತಿದ್ದರು.

ಈ ಕಾರಣಗಳಿಂದ 1944ರ ಹೊತ್ತಿಗೆ ಬಂಗಾಳದಲ್ಲಿ ಭೂಹೀನ ರೈತರ ಪ್ರಮಾಣ 40% ಆಗಿತ್ತು. ಈ ಮೇಲಿನ ಬೆಳವಣಿಗೆಗಳಿಂದ ಜಮೀನು ಒಡೆತನದ ಭಾರಿ ಕೇಂದ್ರೀಕರಣವಾಗಿತ್ತು. ಬಂಗಾಳದ ಸುಮಾರು ಎಲ್ಲಾ ಜಮೀನು ಕೇವಲ 2000 ಜಮೀನುದಾರರ ಕೈಯಲ್ಲಿತ್ತು. ಸುಮಾರಿಗೆ ಎಲ್ಲಾ ರೈತರು ಬರ್ಗಾದಾರ ಅಥವಾ ಕೃಷಿಕೂಲಿಗಾರರಾಗಿದ್ದರು. ದೊಡ್ಡ ಪ್ರಮಾಣದ ಜಮೀನಿನಲ್ಲಿ ಕೃಷಿಯೇ ನಡೆಯುತ್ತಿರಲಿಲ್ಲ. ಜಮೀನಿನ ಕೇಂದ್ರೀಕರಣ ಮತ್ತು ಎರಡನೇ ಮಹಾಯುದ್ಧಾನಂತರ ಉಲ್ಬಣವಾದ ಆರ್ಥಿಕ ಪರಿಸ್ಥಿತಿ (ಏರುತ್ತಿದ್ದ ಬೆಲೆಗಳು ಇತ್ಯಾದಿ) ಬಂಗಾಳದ ರೈತರನ್ನು ಬಂಡೇಳುವಂತೆ ಮಾಡಿತು. ಇದೇ ತೇಭಾಗ ಚಳುವಳಿಯ ಹಿನ್ನೆಲೆ.

ಚಳುವಳಿ ಅವಿಭಕ್ತ ಬಂಗಾಳದ ಹಲವು ಜಿಲ್ಲೆಗಳಲ್ಲಿ ಒಟ್ಟಿಗೆ ಆರಂಭವಾಯಿತು. ಈ ಜಿಲ್ಲೆಗಳು: ಜಲಪೈಗುರಿ, ದಿನಾಜ್‌ಪುರ್, ರಂಗ್‌ಪುರ್, ಮಿಡ್ನಾಪುರ್, 24 ಪರಗಣ, ಖುಲ್ನಾ, ಜೆಸ್ಸೂರು, ಪಬ್ನಾ, ಮೈಮೆನ್‌ಸಿಂಗ್, ಡಾಕ್ಕಾ, ಕೊಮಿಲ್ಲಾ.

“ಅಧಿ ನ್ಯಾ ತೇಭಾಗ ಚ್ಯಾ”

ಚಳುವಳಿ ಯಾವ ರೀತಿ ನಡೆಯಿತು ಎಂದು ರಂಗಪುರ್ ಜಿಲ್ಲೆಯ ಯೊಗಾಖಾರಿಬಾಡಿ ಎಂಬ ಹಳ್ಳಿಯಲ್ಲಿ ನಡೆದ ಘಟನೆ ಹೇಳುತ್ತದೆ. ರೈತರು ಎಂದಿನ ಕ್ರಮ ತಪ್ಪಿಸಿ, ಬೆಳೆದ ಫಸಲನ್ನು ತಮ್ಮ ಕಣಜಗಳಿಗೆ ತುಂಬಿಸಿಕೊಂಡು. ಅಲ್ಲಿಂದ



ಜಮೀನುದಾರನ ಪಾಲು ನಂತರ ಕೊಡುವ ಕ್ರಮ ಆರಂಭಿಸಿದರು. ಆದರೆ ಮರುದಿನವೇ ರೈತಕುಟುಂಬ ಮತ್ತು ಕಣಜಗಳ ಮೇಲೆ ಜಮೀನುದಾರರ ಗೂಂಡಾಗಳು ಕೋವಿಗಳಿಂದ ದಾಳಿ ನಡೆಸಿದರು. ರೈತರು ಇದಕ್ಕೆ ತಮಗೆ ಸಿಕ್ಕಿದ ಆಯುಧಗಳಿಂದ ಪ್ರತಿರೋಧ ಒಡ್ಡಿದರು. ಸುಮಾರಾಗಿ ಅದೇ ಸಮಯಕ್ಕೆ ಪೋಲೀಸು ಸಹ ಆಗಮಿಸಿ ಗೋಲಿಬಾರು ನಡೆಸಿತು. ಇದರಲ್ಲಿ ತ್ಯಾಗನಾರಾಯಣ ಎಂಬ ರೈತ ಬಲಿಯಾದ. ಇದರಿಂದ ಕ್ರುದ್ಧರಾದ ರೈತರು ಇದನ್ನು ಪ್ರತಿಭಟಿಸಿ ಸಬ್‌ಡಿವಿಜನಲ್ ಪಟ್ಟಣ ನೀಲ್‌ಫಮಾರಿ ಎಂಬಲ್ಲಿಗೆ ಮೆರವಣಿಗೆ ತೆಗೆದರು. ಮೆರವಣಿಗೆ ಆ ಪಟ್ಟಣ ಮುಟ್ಟುವ ದಾರಿಯುದ್ದಕ್ಕೂ ಹತ್ತಿರದ ಹಳ್ಳಿಗಳಿಂದ ಬಂದು ಸೇರಿದ ರೈತರಿಂದ ಬೆಳೆಯುತ್ತಾಹೋಯಿತು. ಆದರೆ ನೀಲ್‌ಫಮಾರಿಯಲ್ಲಿ ಕೋಮುವಾರು ದಂಗೆಗಳು ನಡೆಯುತ್ತಿದ್ದವು. ಈ ಮೆರವಣಿಗೆ ಅಲ್ಲಿ ತಲುಪಿದಾಗ ಎರಡೂ ಗುಂಪುಗಳು ವಿರೋಧ ಗುಂಪಿನವರು ಬರುತ್ತಿದ್ದಾರೆಂದು ಬಗೆದು ಮನೆಯೊಳಗೆ ಸೇರಿಕೊಂಡರು. ಆದರೆ ಮೆರವಣಿಗೆಯ ಘೋಷಣೆಗಳು 'ತ್ಯಾಗನಾರಾಯಣರ ಸಾವಿಗೆ ಪ್ರತೀಕಾರ ಮಾಡಿ' 'ಹಿಂದೂ-ಮುಸ್ಲಿಮರು ಹೊಡೆದಾಡಬೇಡಿ-ಜಮೀನುದಾರನ ವಿರುದ್ಧ ಒಟ್ಟಾಗಿ ಹೋರಾಡಿ' ಎಂಬ ಘೋಷಣೆಗಳನ್ನು ಕೇಳಿ ಆ ಗುಂಪುಗಳೂ ಬಂದು ಮೆರವಣಿಗೆ ಸೇರಿಕೊಂಡವು. ಹೀಗೆ ಹಲವು ಕಡೆ ತೇಭಾಗಾ ಚಳುವಳಿ ಕೋಮುವಾರು ದಂಗೆಯನ್ನು ಶಮನಮಾಡುವ ಕೆಲಸ ಸಹ ಮಾಡಿತು.

ಹೀಗೆ ತೇಭಾಗಾ ಚಳುವಳಿ ಈ ಕೆಳಗಿನ ಘೋಷಣೆಗಳೊಂದಿಗೆ ಹರಡತೊಡಗಿತು.

1. ಬೆಳೆದ ಫಸಲಿನ ⅔ ನೇ ಅಂಶ ಬರ್ಗಾದಾರನಿಗೆ ಸಿಗಬೇಕು.
2. ಖಾಯಂ ಗೇಣಿದಾರ ಹಕ್ಕುಗಳು ಸಿಗಬೇಕು.
3. ಸಾಲದ ಬಡ್ಡಿ 12½% ಮಾತ್ರ ಇರಬೇಕು.
4. ಹಬ್ಬಹರಿದಿನಗಳ, ಮತ್ತಿತರ ವಿಶೇಷ ಕಾಣಿಕೆಗಳ ವಸೂಲಿ ನಿಲ್ಲಬೇಕು.
5. ಬರ್ಗಾ ಕೊಡುವಾಗ ಸೂಕ್ತ ಕಾಗದಪತ್ರಗಳನ್ನು ಕೊಡಬೇಕು.
6. ಕೃಷಿಯೋಗ್ಯ ಜಮೀನು ಖಾಲಿಬಿದ್ದಲ್ಲೆಲ್ಲಾ ಕೃಷಿಗೆ ಒಳಪಡಿಸಬೇಕು.
7. ಫಸಲು ಕಟಾವಾದ ಮೇಲೆ ರೈತನ ಕಣಜಗಳಿಗೆ ತರಬೇಕು.
8. ಎಲ್ಲಾ ಪಂಚಾಯತುಗಳಲ್ಲಿ ಸರ್ಕಾರಿ ಕಣಜವಿರಬೇಕು.

ಚಳುವಳಿಯ ಘೋಷಣೆಗಳು: 'ಫಸಲನ್ನು ರೈತರ ಕಣಜಗಳಿಗೆ ತನ್ನಿ' 'ಅರ್ಧವಲ್ಲ 2/3 ಪಾಲು'ಬೇಕು '(ಅಧಿ ನಾಯ್, ತೇಭಾಗಾ ಚಾಯ್)'. ಜಮೀನುದಾರರು, ಕಾಂಗ್ರೆಸ್ಸು ಪಂಥೀತರ ಪ್ರತಿಗಾಮಿ ಶಕ್ತಿಗಳು ತೇಭಾಗಾ ಚಳುವಳಿಯನ್ನು 'ಸ್ವಾತಂತ್ರ್ಯ ಮೊದಲು ಜಮೀನುದಾರಿ ರದ್ದತಿ ನಂತರ' ಎಂಬ ಘೋಷಣೆಗಳೊಡನೆ ಎದುರಿಸಲು ಪ್ರಯತ್ನಿಸಿದರು. ಕಮ್ಯುನಿಸ್ಟ್ ಪಕ್ಷ 'ತೇಭಾಗಾ ಸ್ವಾತಂತ್ರ್ಯ ಚಳುವಳಿಯ ಅವಿಭಾಜ್ಯ ಅಂಗ' ಎಂದಿತು.

ಚಳುವಳಿಯ ಕಾಲದಲ್ಲಿ ಪೋಲೀಸು, ಜಮೀನುದಾರಿ ದಬ್ಬಾಳಿಕೆ ಪ್ರತಿರೋಧ ಒಪ್ಪಲು ಸ್ವಯಂಸೇವಕ ಪಡೆ (ಕೊಮಿಲ್ಲಾದಲ್ಲಿ) ಮತ್ತು ಮೈಮೆನ್‌ಸಿಂಗ್ ಜಿಲ್ಲೆಯಲ್ಲಿ ಗೆರಿಲ್ಲಾ ಪಡೆಗಳು ಕೆಲಸಮಾಡಹತ್ತಿದವು. ಮಹಿಳಾ ಸ್ವಯಂಸೇವಕಿಯರು ರೈತರ ಕಣಜಗಳನ್ನು ಕಾಯುತ್ತಿದ್ದರು.

ತೇಭಾಗಾ ಚಳುವಳಿ ರೈತರ ರಾಜಕೀಯ ಪ್ರಜ್ಞೆಯನ್ನು ಏರಿಸುವ ಮೂಲಕ ಬಂಗಾಳದ ರೈತಚಳುವಳಿ ಮೇಲಿನ ಹಂತ ತಲುಪಿತು. ಉತ್ತರ ಬಂಗಾಳದಲ್ಲಿ ಈ ಸಮಯದಲ್ಲಿ ರೈಲ್ವೆ ಮುಷ್ಕರ ನಡೆಸಿದ ಕಾರ್ಮಿಕರಿಗೆ ಆಹಾರ ಸರಬರಾಜು ಮಾಡಿದ್ದು ಒಂದು ಇಂತಹ ಉದಾಹರಣೆ. ಬೇರೆ ಚಳುವಳಿಗಳಂತೆ ಇದು ಈ ಸಮಯದಲ್ಲಿ ಆರಂಭವಾಗಿ ಈ ಸಮಯದಲ್ಲಿ ಮುಗಿಯಿತು ಎಂದು ಹೇಳುವುದು ಕಷ್ಟ. ಮುಂದೆ ನಡೆದ ಒಕ್ಕಲೆಬ್ಬಿಸುವಿಕೆಯ ವಿರುದ್ಧ, ಬೇನಾಮಿ ಜಮೀನು ಆಕ್ರಮಿಸುವ ಚಳುವಳಿಗಳಿಗೆ ಇದು ನಾಂದಿಯಾಯಿತು. ತೇಭಾಗಾ ಚಳುವಳಿಯಿಂದ ಆರಂಭವಾಗಿ ರೈತಚಳುವಳಿ ಇಂದಿನವರೆಗೆ ಒಂದೇ ಸಮನೆ ಮುನ್ನಡೆ ಸಾಧಿಸಿದೆ.

೩. ವಾರಲೀ ಹೋರಾಟ

ವಾರಲೀಯರ ಹೋರಾಟ ಎಂದು ಪ್ರಸಿದ್ಧವಾಗಿರುವ ಈ ಹೋರಾಟ ನಡೆದದ್ದು ಆಗಿನ ಮುಂಬಯಿ ಪ್ರಾಂತದ (ಈಗ ಮಹಾರಾಷ್ಟ್ರದಲ್ಲಿರುವ) ಥಾಣೆ ಜಿಲ್ಲೆಯಲ್ಲಿ. ಇದು 1945 ರಲ್ಲಿ ಆರಂಭವಾಗಿ 1947ರ ಮಧ್ಯಭಾಗದವರೆಗೆ ಮುಂದುವರಿಯಿತು. ಈ ಹೋರಾಟದಲ್ಲಿ ಭಾಗವಹಿಸಿದವರು ಈ ಜಿಲ್ಲೆಯ ಉಂಬರ್‌ಗಾಂವ್, ದರ್ಹಾಣಿ, ಪಾಲ್‌ಘರ್ ಮತ್ತು ಜವ್ಹಾರ್ ತಾಲ್ಲೂಕುಗಳಲ್ಲಿ ವಾಸಿಸುತ್ತಿದ್ದ ಆದಿವಾಸಿ ಜನರು. ಅವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ವಾರಲೀ ಎಂಬ ಉಪಪಂಗಡಕ್ಕೆ ಸೇರಿದವರು.

ಬೇರೆಲ್ಲಾ ಕಡೆಗಳಲ್ಲಿ ನಡೆದಂತೆ ಇಲ್ಲಿಯೂ ಸುಮಾರು ನೂರು ವರ್ಷಗಳ ಹಿಂದೆ ತಮ್ಮ ಒಡೆತನದಲ್ಲೇ ಇದ್ದ ಜಮೀನುಗಳಲ್ಲಿ ಜೀತದಾಳುಗಳಾಗಿ ದುಡಿಯಬೇಕಾಗಿತ್ತು. ಪಟ್ಟಣದ ಸುಶಿಕ್ಷಿತ ಜನರ ಮೋಸ, ವಂಚನೆ ಹಾಗೂ ಅಭಾವ ಸ್ಥಿತಿಯಿಂದಾಗಿ ಎಲ್ಲವನ್ನು ಕಳೆದುಕೊಂಡ ವಾರಲೀಯರು ಸಾಹುಕಾರರೂ, ಹುಲ್ಲುಗಾವಲಿನ ಮಾಲೀಕರೂ, ಅರಣ್ಯ ಕಂಟ್ರಾಕ್ಟರರೂ ಇತ್ಯಾದಿ ಎಲ್ಲವೂ ಆಗಿದ್ದ ಜಮೀನುದಾರರಿಂದ ಅತೀವ ದಬ್ಬಾಳಿಕೆಗೊಳಗಾಗಿದ್ದರು. ಎಲ್ಲಾ ಸರಕಾರೀ ಇಲಾಖೆಗಳ ಅಧಿಕಾರಿಗಳ ಬೆಂಬಲ ಈ ಜಮೀನುದಾರರಿಗಿತ್ತು.

‘ಪುಕ್ಕಟೆ ದುಡಿಮೆ ಇನ್ನಿಲ್ಲ’

1942ರ ನಂತರ ರೈತರಲ್ಲಿ ರಾಜಕೀಯ ಪ್ರಜ್ಞೆ ಹುಟ್ಟಿಸುವ ದೃಷ್ಟಿಯಿಂದ ರೈತ ಸಂಘಟನೆಗಳನ್ನು ಕಟ್ಟಲು ಕಮ್ಯುನಿಸ್ಟ್ ಪಕ್ಷ ತೀವ್ರವಾಗಿ ಸಿದ್ಧತೆ ನಡೆಸಿತ್ತು. ಇದೇ ಸಂಬಂಧವಾಗಿ ಕಾಂ. ಶಾಮರಾವ್ ಪರುಳೇಕರ್, ಕಾಂ. ದಳವಿ ಮತ್ತು ಕಾಂ. ಗೋದಾವರಿ ಪರುಳೇಕರ್ ಥಾಣೆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. 1945ರ ಜನವರಿಯಲ್ಲಿ ಟಿಟವಾಳ್‌ನಲ್ಲಿ ನಡೆದ ಮಹಾರಾಷ್ಟ್ರ ಕಿಸಾನ್ ಸಭೆಯ ಪ್ರಥಮ ಅಧಿವೇಶನದಲ್ಲಿ ಕೇಳಬಂದ 'ಜೀತ ಪದ್ಧತಿ ರದ್ದು ಮಾಡಿ' ಎಂಬ ಘೋಷಣೆ ಅಲ್ಲಿ ಹಾಜರಿದ್ದ ಕೆಲವು ವಾರಲೀಯರಲ್ಲಿ ಹೊಸ ಉತ್ಸಾಹ ಮೂಡಿಸಿತ್ತು. ಮೇಲೆ ಹೇಳಿದ ನಾಯಕರು ಡೋಂಗಾರಿ ಎಂಬ ಗ್ರಾಮದಲ್ಲಿ ಸಂಚಾರ ಮಾಡುತ್ತಿದ್ದಾಗ ಅವರ ಪ್ರೋತ್ಸಾಹದ ಮೇಲೆ ಬಿಟ್ಟಿ ದುಡಿಮೆಯನ್ನು ವಾರಲೀಯರು ನಿರಾಕರಿಸಿದರು. ಜಮೀನುದಾರರು ತೆಪ್ಪಗಿರಬೇಕಾಯಿತು. ಈ ಘಟನೆ ವಾರಲೀಯರಲ್ಲಿ ಆತ್ಮವಿಶ್ವಾಸ ಮೂಡಿಸಿತು. “ದುಡ್ಡಿಲ್ಲದ ದುಡಿಮೆ ಇನ್ನಿಲ್ಲ” ಎಂದು ಕಾಡೆಲ್ಲಾ ನವಚೈತನ್ಯದಿಂದ ದುಮುದುಮಿಸುವಂತೆ ಅವರು ಪ್ರಚಾರ ನಡೆಸಿದರು. ಹೆಚ್ಚು ಸಂಘಟಿತವಾಗಿ ಕೆಲಸ ಮುಂದುವರಿಸುವ ಉದ್ದೇಶದಿಂದ ನಂತರ ಝರಿ ಗ್ರಾಮದಲ್ಲಿ ನಡೆದ ಪರಿಷತ್ತಿನಲ್ಲಿ 5000 ಆದಿವಾಸಿಗಳು ಭಾಗವಹಿಸಿ “ಜೀತ ಪದ್ಧತಿ ರದ್ದಾಗಲಿ; ಬಿಟ್ಟಿ ದುಡಿಮೆಯನ್ನು ಹೂತು ಬಿಡಿ; ಪುಕ್ಕಟೆ ಕೆಲಸ ಇನ್ನಿಲ್ಲ” ಎಂಬ ಘೋಷಣೆಗಳೊಂದಿಗೆ ಕೆಂಪು ಬಾವುಟಗಳನ್ನು ಹಿಡಿದು ಉತ್ಸಾಹದಿಂದ ಸ್ವಗ್ರಾಮಗಳಿಗೆ ತೆರಳಿದರು. ಈ ಚಳುವಳಿ ಜಿಲ್ಲೆಯಾದ್ಯಂತ ಕಾಡ್ಗಿಚ್ಚಿನಂತೆ ಹರಡಿತು. ಚಳವಳಿ ಎಷ್ಟೊಂದು ತೀವ್ರವಾಗಿ, ಶಿಸ್ತುಬದ್ಧವಾಗಿ ವ್ಯವಸ್ಥಿತವಾಗಿತ್ತೆಂದರೆ ಕೇವಲ ಎರಡೇ ವಾರಗಳಲ್ಲಿ ಶತಮಾನಗಳ ಜೀತ ಪದ್ಧತಿ ಅಳಿದು ಹೋಯಿತು. ಇದಕ್ಕೆ ಪ್ರತೀಕಾರವಾಗಿ ಧಾನ್ಯ ಅಥವಾ ಯಾವುದೇ ಸಾಲ ಸಿಗದು ಎಂದು ಜಮೀನುದಾರರು ಬೆದರಿಸಿದರೂ ಅದರಿಂದ ಏನೂ ಪರಿಣಾಮವಾಗಲಿಲ್ಲ.

ಮದುವೆ ಜೀತದಾಳುಗಳು

ಜೀತದಾಳುಗಳಲ್ಲಿ ಮದುವೆ ಸಾಲದ ಜೀತದಾಳುಗಳು ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿದ್ದರು. ಮದುವೆಗೆಂದು ಜೀತದಾಳುಗಳು ಪಡೆದ ನೂರೋ ಇನ್ನೂರೋ ರೂಪಾಯಿಯ ಸಾಲ ಸಾಹುಕಾರನ ಧೂರ್ತತೆಯಿಂದಾಗಿ ಹಲವು ವರ್ಷಗಳ, ಆಜೀವ, ಕೆಲವೊಮ್ಮೆ ವಂಶಪರಂಪರಾಗತ ಗುಲಾಮಗಿರಿಗೆ ಆದಿವಾಸಿಗಳನ್ನು ಗುರಿಮಾಡುತ್ತಿತ್ತು. ಅಲ್ಲದೆ ಮದುವೆ ಜೀತದಾಳಿನ ಹೆಂಗಸರು ಸಾಹುಕಾರನ ಉಪಭೋಗದ ವಸ್ತುವಾಗಬೇಕಿತ್ತು. ವಾರಲೀಯರ ಹೋರಾಟದ ಮುಂದಿನ ಹೆಜ್ಜೆ ಈ ಪದ್ಧತಿಗೆ ತೀವ್ರವಾದ ಹೊಡೆತ ಕೊಟ್ಟಿತು. ಇವನ್ನು ವಾರಲೀಯರು ಕಿಸಾನ್‌ಸಭಾದ ನಿರ್ದೇಶನವಿಲ್ಲದೆ ಸ್ವಯಂಸ್ಫೂರ್ತಿಯಿಂದ ನಡೆಯಿತು. ಮೊದಲು ಸಭೆ ಸೇರಿ ಮದುವೆಯಾಳುಗಳ ಮುಕ್ತಿಯ ಠರಾವು ಪಾಸು ಮಾಡಿದರು.ನಂತರ ದೊಡ್ಡ ಜಮೀನುದಾರರ ಮನೆಗಳಿಗೆ ಮೆರವಣಿಗೆಯಲ್ಲಿ ಹೋಗಿ “ಬಟ್ಟೆ ಬರೆ ತಕ್ಕೋ, ಹೊರಗಿನ ದಾರಿ ನೋಡಿಕೋ” ಎಂಬ ಘೋಷಣೆಗಳನ್ನು ಕೂಗಿದರು. ಅಂತಹ ಆಳುಗಳು ಆಗ ಜಮೀನುದಾರರ ಮನೆಗಳಿಂದ ಹೊರಬಂದು ಮೆರವಣಿಗೆಯನ್ನು ಸೇರುತ್ತಿದ್ದರು. ಈ ರೀತಿ ಮೆರವಣಿಗೆ ದಿನವಿಡೀ ಸುತ್ತುತ್ತಿತ್ತು. ಕೆಲವೇ ದಿನಗಳಲ್ಲಿ ಈ ರೀತಿ ನೂರಾರು ಮದುವೆಯಾಳುಗಳ ಬಿಡುಗಡೆಯಾಯಿತು. ಕೆಂಪು ಬಾವುಟಗಳನ್ನು ನೋಡಿ ಜೀವಭಯ ಆದರಿಸಿನ ಜಮೀನುದಾರ ಇದನ್ನು ತಡೆಯಲಿಲ್ಲ.



ವಾರಲೀಯ ಎಚ್ಚತ್ತಾಗ

ನ್ಯಾಯ ಕೂಲಿಗೆ ಮುಷ್ಕರ

ಚಳುವಳಿಯ ಮುಂದಿನ [illegible] ವಾಗಿ ಕಿಸಾನ್‌ಸಭಾ ಹುಲ್ಲು ಕೊಯ್ಲಿನ

ಕೂಲಿಯ ಪ್ರಶ್ನೆಯನ್ನು ಕೈಗೆತ್ತಿಕೊಂಡಿತು. ಹುಲ್ಲುಗಾವಲುಗಳಲ್ಲಿ ಬಲಾತ್ಕಾರವಾಗಿ ಹುಲ್ಲು ಕೊಯ್ಸಿ ವಾಲ್ಯಾಗೆ ಅಥವಾ ಅಷ್ಟೇ ಬೆಲೆಯ ಮಡಕೆ ತೆಂದಿ ಕೊಡಲಾಗುತ್ತಿತ್ತು. ಇದನ್ನು ವಿರೋಧಿಸಿ ಎಲ್ಲಾ ಖರ್ಚುಗಳನ್ನು ಲೆಕ್ಕಹಾಕಿ 500 ಪೌಂಡು ಹುಲ್ಲಿಗೆ ಅರಣ್ಯ ಪ್ರದೇಶದಲ್ಲಿ ಎರಡೂವರೆ ರೂಪಾಯಿ, ಬಂದರಿನಲ್ಲಿ ಮೂರು ರೂಪಾಯಿ ಕೂಲಿ ಕೊಡಬೇಕೆಂಬ ಬೇಡಿಕೆ ಮುಂದಿಟ್ಟು ಅದರ ಈಡೇರಿಕೆಗೆ ಆದಿವಾಸಿಗಳು ಮುಷ್ಕರ ಹೂಡಿದರು. ಹುಲ್ಲುಗಾವಲಿನ ಕೊಯ್ಲಿನ ಅವಧಿಯಲ್ಲಿ ಆರಂಭವಾದ ಈ ಮುಷ್ಕರ ಶಾಂತಿಯುತವಾಗಿ ಯಶಸ್ವಿಯಾಗಿ ಮುಂದುವರಿಯಿತು.

ಇದನ್ನು ಮುರಿಯಲು ಸುಳ್ಳು ದಾವೆಹಾಕಿ ಲಾಕಪ್ಪಿನಲ್ಲಿಡುವುದು ಇತ್ಯಾದಿ ಹಲವು ಪ್ರಯತ್ನಮಾಡಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಕೆಂಪು ಬಾವುಟದ ಬಗ್ಗೆ ಆದಿವಾಸಿಗಳಿಗಿದ್ದ ಅಭಿಮಾನವ ದುರುಪಯೋಗ ಪಡೆದು ಮುಷ್ಕರ ಮುರಿಯುವ ಯೋಜನೆಯನ್ನು ಮಾಲೀಕರು ಹಾಕಿಕೊಂಡರು. "ಕೆಂಪು ಬಾವುಟದ ಅಮ್ಮನ ಸಭೆಯಲ್ಲಿ ಗೂಂಡಾಗಳು ಗಲಾಟೆಮಾಡುವವರಿದ್ದಾರೆ. ಸಾಧ್ಯವಿದ್ದ ಆಯುಧಗಳನ್ನು ಹಿಡಿದುಕೊಂಡು ಅಮ್ಮನ ರಕ್ಷಣೆಗೆ ಬರಬೇಕು" ಎಂದು ಸುಳ್ಳು ಸುದ್ದಿ ಹಬ್ಬಿಸಿ ಇನ್ನೊಂದೆಡೆ "ಆದಿವಾಸಿಗಳು ಸಶಸ್ತ್ರ ದಂಗೆಯೆದ್ದಿದ್ದಾರೆ. ಸಹಾಯಕ್ಕೆ ಬರಬೇಕು" ಎಂದು ಪೋಲೀಸರಿಗೂ ಸುಳ್ಳು ಸುದ್ದಿ ಕೊಟ್ಟರು. ಸುದ್ದಿ ನಂಬಿದ ಸುಮಾರು ಹತ್ತುಸಾವಿರ ವಾರಲೀಯರು ಸುದ್ದಿ ಹಬ್ಬಿದ ಜಾಗದಲ್ಲಿ ಕೆಂಪುಬಾವುಟ ನೆಟ್ಟು ಆಯುಧಗಳೊಂದಿಗೆ ಮಧ್ಯರಾತ್ರಿಯ ಹೊತ್ತಿಗೆ ಶಾಂತವಾಗಿ ಕೂತರು. ಪೋಲೀಸರು ಬಂದು ಅವರ ಮೇಲೆ ಗುಂಡುಹಾರಿಸಲಾರಂಭಿಸಿದರು. ಆದರೆ ಜನ ಚದುರಲಿಲ್ಲ. ಹಲವರು ಸತ್ತರು. ಲೆಕ್ಕವಿಲ್ಲದಷ್ಟು ಜನ ಗಾಯಗೊಂಡರು. ಆದರೂ ಮರುದಿನ ಮಧ್ಯಾಹ್ನ ಕಾಂ. ರಣದಿವೆ ಬಂದು ಆ ಸುದ್ದಿ ಸುಳ್ಳು ಎಂದು ಹೇಳುವವರೆಗೆ ಅವರು ಕದಲಿರಲಿಲ್ಲ.

ಅನಂತರ ದಬ್ಬಾಳಿಕೆ ಇನ್ನೂ ಜಾಸ್ತಿಯಾಯಿತು. ಪ್ರಮುಖ ಕಾರ್ಯಕರ್ತರನ್ನು ಬಂಧಿಸಲಾಯಿತು. ಆದರೆ ಮುಷ್ಕರ ನಿಲ್ಲಲಿಲ್ಲ. ಮುಂಬೈ ನಗರದ ಹಾಲು ಸರಬರಾಜು ವ್ಯವಸ್ಥೆಯ ಮೇಲೆ ಇದರ ಪರಿಣಾಮ ಕಂಡುಬರಲಾರಂಭಿಸಿತು. ಜಿಲ್ಲಾಧಿಕಾರಿಗಳು ಮಾಲೀಕರನ್ನೂ, ಪರುಳೇಕರ್ ದಂಪತಿಗಳನ್ನೂ ಮಾತುಕತೆಗೆ ಕರೆದರು. ಮಾಲೀಕರಿಂದಾಗಿ ಅದು ವಿಫಲವಾಯಿತು. ಪರುಳೇಕರ್ ದಂಪತಿಗಳೂ ಸೇರಿದಂತೆ ಹಲವು ಕಾರ್ಯಕರ್ತರನ್ನು ಗಡೀಪಾರು ಮಾಡಿ ಸುಮಾರು 10 ದಿನಗಳಕಾಲ ಸಾಹುಕಾರರು, ಜಮೀನುದಾರರು ಹಾಗೂ ಪೋಲೀಸರು ಅತ್ಯಂತ ಹೇಯವಾದ ಅತ್ಯಾಚಾರಗಳನ್ನು ನಡೆಸಿ ಸಾಮ ಕತ್ತರಿಸಿದ್ದ ಮುಷ್ಕರಕಾರರನ್ನು ಬಗ್ಗಿಸಲು ನೋಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕಾಡಿನಲ್ಲಿಯ ಒಂದು ಹುಲ್ಲು ಕಡ್ಡಿಯೂ ಕಟಾವಾಗಲಿಲ್ಲ. ಈ ಮಧ್ಯೆ ಮುಂಬೈಯ ಹಾಲು ಪೂರೈಕೆ ತೀರಾ ಹದಗೆಟ್ಟಿತು. ಮುಂಬೈ ಪತ್ರಿಕೆಗಳೂ ಥಾಣೆ ಜಿಲ್ಲೆಯಲ್ಲಿನ ಅತ್ಯಾಚಾರಗಳನ್ನು ಟೀಕಿಸಿದವು. ಹುಲ್ಲು ಒಣಗಿ ಮಾಲೀಕರಿಗೆ ಸಾವಿರಾರು ರೂಪಾಯಿ ನಷ್ಟವಾಗುವ ಸಂಭವವಿತ್ತು. ಆದ್ದರಿಂದ ಗಡೀಪಾರಿನ ಆಜ್ಞೆ ರದ್ದಾಯಿತು. ಅತ್ಯಾಚಾರ ನಿಂತಿತು. ಮಾಲೀಕರು ಮೂರುವರೆ, ನಾಲ್ಕು, ನಾಲ್ಕೂವರೆ ರೂಪಾಯಿವರೆಗೂ ಕೂಲಿಕೊಟ್ಟು ಕಟಾವು ಮಾಡಿಸಹತ್ತಿದರು. ಇನ್ನೊಮ್ಮೆ ಆದಿವಾಸಿಗಳಿಗೆ ವರ್ಗ ಜಾಗೃತಿಹೊಂದಿದ ಸಂಘಟನೆಯ ಶಕ್ತಿಯ ಅರಿವಾಯಿತು. ಇದರಿಂದಾಗಿ ತಾನೇತಾನಾಗಿ ಆದಿವಾಸಿಗಳ ಸಂಘಟನೆ ಬೆಳೆಯಲಾರಂಭಿಸಿತು.

1946ರ ಜನವರಿಯಲ್ಲಿ ಮಹಾಲಕ್ಷ್ಮಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅನ್ಯಾಯದ, ಅಸಾಧ್ಯವಾದ ಸಾಲದ ಬಾಕಿ ರದ್ದಾಗಬೇಕು; ಫಸಲಿನಲ್ಲಿ ಮಾಲೀಕನಿಗೆ ಕೊಡಬೇಕಾದ 'ಲಾವಣಿ'ಯಲ್ಲಿ ಕೇವಲ ಭತ್ತ ಕೊಡಬೇಕು, ತರಕಾರಿ ಇತ್ಯಾದಿ ಕೊಡಬಾರದು ಎಂದು ನಿರ್ಧರಿಸಲಾಯಿತು. ಈ ನಿರ್ಧಾರಗಳು ಕೂಡಲೇ ಜಾರಿಗೆ ಬಂದವು. ಯಾಕೆಂದರೆ ಆದಿವಾಸಿಗಳ ಸಂಘಟಿತ ಉತ್ಸಾಹದೆದುರು ಜಮೀನುದಾರರು ಏನೂ ಮಾಡದೆ ತೆಪ್ಪಗಿರಬೇಕಾಗಿತ್ತು.

ಅರಣ್ಯ ಕಟಾವಿಗೆ ಕನಿಷ್ಠ ಕೂಲಿ

ಇದೇ ರೀತಿ ಅರಣ್ಯ ಕಟಾವಿನ ಕನಿಷ್ಠ ಕೂಲಿಯ ಬೇಡಿಕೆಯೂ ಹುಲ್ಲು ಕಟಾವಿನ ಕೂಲಿಯ ಮುಷ್ಕರದಂತೆಯೇ ಸಾಕಷ್ಟು ಹೋರಾಟದ ನಂತರ ಈಡೇರಿತು. ಆದರೆ ಆಗಿನ ಕಾಂಗ್ರೆಸ್ ಸರ್ಕಾರ ಮಾಲೀಕರು ಹಾಗೂ ಕೂಲಿಕಾರರ ನಡುವೆ ಆದ ಒಪ್ಪಂದವನ್ನು ಮಾನ್ಯಮಾಡಲಿಲ್ಲ. ಗೃಹಮಂತ್ರಿ ಮೊರಾರ್ಜಿದೇಸಾಯಿ "ಕಮ್ಯುನಿಸ್ಟರು ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ನನಗೆ ಆಸಕ್ತಿಯಿಲ್ಲ. ವಾರಲೀಯರಲ್ಲಿ ಕಮ್ಯುನಿಸ್ಟರ ವರ್ಚಸ್ಸನ್ನು ಸ್ಥಿರಗೊಳಿಸುವ ಯಾವುದೇ ವಿಷಯವನ್ನು ಸರ್ಕಾರ ಸಹಿಸದು" ಎಂದು ಹೇಳಿಕೆಯಿತ್ತರು. ಥಾಣೆಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ ಕಾರ್ಯಕರ್ತರನ್ನು ಗಡೀಪಾರು ಮಾಡಿ, ಒಪ್ಪಂದಕ್ಕೆ ಕಾರಣವಾದ ವಿಭಾಗಾಧಿಕಾರಿಯನ್ನು ವರ್ಗಮಾಡಿ, ಆದಿವಾಸಿಗಳ ಪರ ವಾದಮಾಡಿದ ವಕೀಲರಿಗೂ ಗಡೀಪಾರು ಆಜ್ಞೆ ವಿಧಿಸಿ ಕಾಂ. ಗೋಧಾವರಿ ಪರುಳೇಕರ್‌ರನ್ನು ಬಂಧಿಸಲಾಯಿತು. ಆದಿವಾಸಿಗಳೂ ಬಂಧಿತರಾಗುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ವಾರಲೀಯರು ಸರಕಾರದ ದಬ್ಬಾಳಿಕೆಯ ವಿರುದ್ಧ ಒಂದು ಶಿಸ್ತುಬದ್ಧ ಗೆರಿಲ್ಲಾ ಮಾದರಿಯ ಯುದ್ಧವನ್ನೇ ನಡೆಸಿದರು. ಈ ಮಧ್ಯೆ ಮುಷ್ಕರವೂ ಮುಂದುವರಿಯಿತು. ಹೆದರಿದ ಸರ್ಕಾರ ಮಿಲಿಟರಿ ತುಕಡಿಯೊಂದನ್ನು ಕಳಿಸಿತು. ಇದನ್ನು ಪತ್ರಿಕೆಗಳು, ಸುಧಾರಣಾವಾದೀ, ಸರ್ವೋದಯವಾದಿ ನಾಯಕರೂ ಖಂಡಿಸಿದರು. ಒತ್ತಡಕ್ಕೆ ಮಣಿದ ಸರ್ಕಾರ ಸೈನ್ಯವನ್ನು ವಾಪಾಸು ಕರೆಸಿತು. ಬೇಡಿಕೆಗಳನ್ನು ಮಾನ್ಯಮಾಡಿ ವಾರಲೀಯರನ್ನು ಬಿಡುಗಡೆಗೊಳಿಸಿತು. ಆದರೆ ಕಮ್ಯುನಿಸ್ಟ್ ಕಾರ್ಯಕರ್ತರ ಮೇಲಿನ ಗಡೀಪಾರು ಆಜ್ಞೆಯನ್ನು ವಾಪಾಸು ಪಡೆಯಲಿಲ್ಲ. ವಾರಲೀಯರ ಸಂಘಟನೆಯನ್ನು ಮುರಿಯುವ ಸರ್ಕಾರದ ಈ ಯುಕ್ತಿಯೂ ನಿಷ್ಫಲವಾಯಿತು. ಯಾಕೆಂದರೆ ಶಿಸ್ತುಬದ್ಧವಾದ ವಾರಲೀಯರ ಸಂಘಟನೆ ಮುಂದುವರೆಯಿತು.

ಥಾಣೆಯ ರೈತರ ಎರಡು ವರ್ಷಗಳ ಹೋರಾಟ ಭಾರತದ ರೈತ ಚಳುವಳಿಯ ಇತಿಹಾಸದಲ್ಲೇ ಒಂದು ಅದ್ಭುತ ಅಧ್ಯಾಯ. ಆದಿವಾಸಿಗಳು ಚಳುವಳಿಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಇದೇ ಮೊದಲು. 1947ರ ನಂತರ ಮಹಾರಾಷ್ಟ್ರದಲ್ಲಿ ರೈತರಿಗೆ ದೊರೆತ ಎಲ್ಲಾ ಕಾನೂನುಬದ್ಧ ಸೌಲಭ್ಯಗಳೂ ಈ ಹೋರಾಟದ ನೇರಫಲ. ಅಲ್ಲದೆ ಆದಿವಾಸಿ ಜನಾಂಗದಲ್ಲಿ ಸ್ವಾಭಿಮಾನ, ಆತ್ಮವಿಶ್ವಾಸ ಹುಟ್ಟಿಸಿ ಪುಕ್ಕಲುತನ, ದೀನಭಾವನೆಯನ್ನು ನಾಶಗೊಳಿಸಿ ದೇಶದ ರಾಜಕಾರಣದಲ್ಲಿ ಅವರು ಪಾಲುಗೊಳ್ಳುವಂತೆ ಮಾಡಿದ್ದು ಈ ಚಳುವಳಿಯ ದೊಡ್ಡ ಸಾಧನೆ.

೪. ತೆಲಂಗಾಣಾ


ತೆಲಂಗಾಣಾ ಈಗಿನ ಆಂಧ್ರಪ್ರದೇಶದ 8 ಜಿಲ್ಲೆಗಳಿಂದ ಕೂಡಿದ ಸ್ವಾತಂತ್ರ್ಯಪೂರ್ವದಲ್ಲಿ ನಿಜಾಮನ ಆಡಳಿತದಲ್ಲಿದ್ದ ಪ್ರದೇಶ. ಈ ಇಡೀ ರಾಜ್ಯ ಪಾಳೆಯಗಾರಿ ವ್ಯವಸ್ಥೆಯ ಕ್ರೌರ್ಯಗಳು ಭದ್ರವಾಗಿ ಬೇರೂರಿದ್ದ ಪ್ರದೇಶ. ಹೈದರಾಬಾದಿನ ಒಟ್ಟು ಜಮೀನಿನ 60% ಸರ್ಕಾರಿ ಭೂಕಂದಾಯಕ್ಕೆ (ದಿವಾನಿ ಭೂಮಿ) ಒಳಗಾಗಿದ್ದರೆ, 30% ಭಾಗ ಜಾಗೀರ್‌ದಾರ್ ಮತ್ತು 10% ನಿಜಾಮನ ಸ್ವಂತ ಭೂಮಿ (ಸರ್ಫ್ ಖಾಸ್) ಆಗಿತ್ತು. ಅತ್ಯಂತ ದೊಡ್ಡ ಜಮೀನುಗಳನ್ನು ಹೊಂದಿದ್ದ ಜಮೀನುದಾರರು ಇಲ್ಲಿದ್ದರು. (30000, 40000 ಎಕರೆ ಜಮೀನು ಹೊಂದಿರುವುದು ಸಾಮಾನ್ಯವಾಗಿತ್ತು.) ಈ ಮೂರು ತರದ ಜಮೀನುಗಳಲ್ಲಿ ರೈತರಿಂದ ಬಹಳ ಹೆಚ್ಚು ತೆರಿಗೆ, ಭೂಕಂದಾಯ ಬಲಾತ್ಕಾರದಿಂದ ವಸೂಲಿಯಾಗುತ್ತಿತ್ತು. ಭ್ರಷ್ಟ ಅಧಿಕಾರಿಗಳು ತಾಂಡವವಾಡುತ್ತಿದ್ದು, ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಹಕ್ಕುಗಳು ಇರಲಿಲ್ಲ.

1928ರಲ್ಲಿ ಹಲವು ದೇಶಪ್ರೇಮಿ ಉದಾರವಾದಿ ಬುದ್ಧಿಜೀವಿಗಳು ಆಂಧ್ರ ಮಹಾಸಭಾ ಎಂಬ ಸಾಂಸ್ಕೃತಿಕ ಸಂಸ್ಥೆ ಕಟ್ಟಿದರು. ಈ ಪರಿಸ್ಥಿತಿಯಲ್ಲಿ ಇದು ಎಲ್ಲಾ ಜನವಿಭಾಗಗಳ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ಕೇಂದ್ರಬಿಂದುವಾಗಿ ಬೆಳೆಯಿತು. ರೈತರ ಸಂಘಟನೆಗೆ ಇಳಿದ ಇದು ಕ್ರಮೇಣ ವಿಶಾಲ ತಳಹದಿಯ ರಾಜಕೀಯ ಸಂಘಟನೆಯಾಗಿ ಬೆಳೆಯಿತು. ಇದು ಹಲವು ಪ್ರಗತಿಪರ ನಾಯಕರು ಕಮ್ಯುನಿಸಂ ಕಡೆಗೆ ಆಕರ್ಷಿತರಾಗಿ ಹಾಗೂ ಹಲವು ಕಮ್ಯುನಿಸ್ಟರು ಸಭಾ ಸೇರುವುದರೊಂದಿಗೆ ಇದರ ನಾಯಕತ್ವ ಕಮ್ಯುನಿಸ್ಟ್ ಆಯಿತು. ಜನರು ಅಭಿಮಾನದಿಂದ ಇದನ್ನು "ಸಂಘಂ" ಎಂದು ಕರೆಯುತ್ತಿದ್ದರು. ವೆಟ್ಟಿ ಪದ್ಧತಿ, ಒಕ್ಕಲೆಬ್ಬಿಸುವಿಕೆಯ ಭ್ರಷ್ಟ ಅಧಿಕಾರಿಗಳು, ನಿಜಾಮನ ದುರಾಡಳಿತದ ಹೋರಾಟ ಇದರೊಂದಿಗೆ ಬೆಳೆಯತೊಡಗಿತು.

ಹೋರಾಟದ ಕಿಡಿ

ತೆಲಂಗಾಣಾ ಸಶಸ್ತ್ರ ಹೋರಾಟಕ್ಕೆ ಕಿಡಿಯಾದ ಘಟನೆ ಜುಲೈ 4, 1946 ರಂದು ನಡೆಯಿತು. ನಾಲ್ಗೊಂಡಾ ತಾಲ್ಲೂಕಿನ ರಾಮಚಂದ್ರ ರೆಡ್ಡಿ (40,000 ಎಕ್ರೆ ಜಮೀನಿನ ಮಾಲಕ) ಎಂಬ ಕುಖ್ಯಾತ ದೇಶಮುಖನ ಸಶಸ್ತ್ರ ಗೂಂಡಾಗಳು ಐಲಮ್ಮ ಎಂಬವಳ ಹೊಲಕ್ಕೆ ಬೆಳೆ ಲೂಟಿ ಮಾಡಲು ಬಂದಾಗ ಕಮ್ಯುನಿಸ್ಟ್ ಪಕ್ಷ ಮತ್ತು ಆಂಧ್ರ ಮಹಾಸಭಾದ ಸ್ವಯಂಸೇವಕರು ಅವರನ್ನು ಹಿಮ್ಮೆಟ್ಟಿಸಿದರು. ಇದನ್ನು ಪ್ರತಿಭಟಿಸಲು ನಡೆದ ಮೆರವಣಿಗೆ ಮೇಲೆ ದಾಳಿ ನಡೆದು, ನಾಯಕ ದೊಡ್ಡಿ ಕೊಮರಯ್ಯ ಹುತಾತ್ಮರಾದರು.

ಈ ಘಟನೆ ಈ ಪ್ರದೇಶದ ರೈತರನ್ನು ರೊಚ್ಚಿಗೆಬ್ಬಿಸಿತು. ಪ್ರತಿಹಳ್ಳಿಯಲ್ಲಿ ರೈತರು ಸಂಘಟಿತರಾಗಿ ಜಮೀನುದಾರನ ಅಥವಾ ದೇಶಮುಖನ ಮನೆಯ ಎದುರಿನಲ್ಲೇ ಕೆಂಬಾವುಟ ಹಾರಿಸಿ "ಇಲ್ಲಿ ಸಂಘಂ ಸಂಘಟಿಸಲಾಗಿದೆ. ಇನ್ನು ಮೇಲೆ ವೆಟ್ಟಿ ಇಲ್ಲ. ಕಾನೂನು ಬಾಹಿರ ಕಡ್ಡಾಯ ತೆರಿಗೆ ಕಂದಾಯಗಳಿಲ್ಲ. ಒಕ್ಕಲೆಬ್ಬಿಸುವಿಕೆ ಇಲ್ಲ" ಎಂದು ಘೋಷಣೆ ಕೂಗುತ್ತಿದ್ದರು. ಈ ಚಳುವಳಿಯಿಂದ ಸರ್ಕಾರ ಧಾನ್ಯಲೆವಿ ವಸೂಲು ಮಾಡಲಾಗಲಿಲ್ಲ. ಹಲವು ಕಡೆ ಭೂಮಾಲಿಕರು,



ದೇಶಮುಖರನ್ನು ಓಡಿಸಲಾಯಿತು. ಹಲವರು ಸ್ವತಃ ಓಡಿಹೋದರು. ಉಳಿದವರು ಅಧಿಕಾರಹೀನರಾದರು. ಇದಕ್ಕೆ ಉತ್ತರವಾಗಿ ನಿಜಾಮನ ಸರಕಾರ ಸಂಘಂ ಮತ್ತು ಕಮ್ಯುನಿಸ್ಟ್ ಕಾರ್ಯಕರ್ತರ ಶೋಧನೆ, ಸಾಮೂಹಿಕ ಬಂಧನಕ್ಕೆ ತೊಡಗಿತು. ಪೋಲೀಸು ಸೈನ್ಯ ಜನರ ಮೇಲೆ ಆಕ್ರಮಣ ನಡೆಸತೊಡಗಿದವು. ಸಂಘಂ ಮತ್ತು ಪಾರ್ಟಿಯಿಂದ ಲಾಠಿ ಪ್ರಯೋಗ ತರಬೇತಿ ಪಡೆದ ರೈತ ಸ್ಕ್ವಾಡುಗಳು ಜನರ ರಕ್ಷಣಾ ಕಾರ್ಯ ನಿರ್ವಹಿಸಿದವು. ಸತತ ದಬ್ಬಾಳಿಕೆ, ಅತ್ಯಾಚಾರದ ನಡುವೆಯೂ ಚಳುವಳಿ ಪಾಳೆಯಗಾರಿ ಭೂಮಾಲಕತ್ವದ ವಿರುದ್ಧ ಮುಂದುವರೆಯಿತು. ಈ ಅವಧಿಯಲ್ಲೇ ಹೊಸ ಜಾನಪದ ಹಾಡುಗಳು, ಬುರ್ರಕಥಾ ಒಳಗೊಂಡ ದೊಡ್ಡ ಸಾಂಸ್ಕೃತಿಕ ಚಳುವಳಿ ಸಹ ಆರಂಭವಾಯಿತು.

1947 ಆಗಸ್ಟ್‌ನಲ್ಲಿ ನೆಹರೂ ಸರ್ಕಾರಕ್ಕೆ ಅಧಿಕಾರ ಹಸ್ತಾಂತರವಾಯಿತು. ಹೆಚ್ಚಿನ ಸ್ಥಳೀಯ ರಾಜರು ಒಪ್ಪಿದರೂ, ಹೈದರಾಬಾದಿನ ನಿಜಾಮ ಭಾರತ ಒಕ್ಕೂಟಕ್ಕೆ ಸೇರಲು ಒಪ್ಪಲಿಲ್ಲ. ಆಗ ಕಾಂಗ್ರೆಸ್ ತನ್ನ ರಾಜ್ಯಶಾಖೆಯ ಮೂಲಕ ನಿಜಾಮನ ವಿರುದ್ಧ ಚಳುವಳಿ ಹೂಡಲು ನಿರ್ಧರಿಸಿತು. ಈ ಆಂದೋಲನದಲ್ಲಿ ಸಂಘಂ ಮತ್ತು ಕಮ್ಯುನಿಸ್ಟ್ ಪಕ್ಷ ಭಾಗಿಯಾಯ್ತು. ಶಾಲೆಕಾಲೇಜುಗಳ ಬಹಿಷ್ಕಾರ, ಹೈದರಾಬಾದು-ಭಾರತ ಗಡಿ ಉಲ್ಲಂಘನೆ ಇತ್ಯಾದಿ ಈ ಚಳುವಳಿಯ ಕಾರ್ಯಕ್ರಮಗಳಾದವು. ಇದೇ ಸಮಯದಲ್ಲಿ ಚಳುವಳಿ ಎಲ್ಲಾ ತೆಲುಗು ಮಾತಾಡುವ ಪ್ರದೇಶಗಳನ್ನು ಒಟ್ಟು ಸೇರಿಸಿ ಆಂಧ್ರಪ್ರದೇಶದ ರಚನೆ ಹಾಗೂ ದೇಶದಾದ್ಯಂತ ಭಾಷಾವಾರು ರಾಜ್ಯಗಳಿಗೆ ಒತ್ತಾಯಿಸಿತು. ಈ ಘಟ್ಟದ ಚಳುವಳಿಯ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಇನ್ನೂ ಆಳವಾಗಿ, ವ್ಯಾಪಕವಾಗಿ ಹರಡಿತು. ಹೆಚ್ಚು ಜನವಿಭಾಗಗಳನ್ನು ಒಳಗೊಂಡಿತು.

ಈ ಚಳುವಳಿಯನ್ನು ಹತ್ತಿಕ್ಕಲು ನಿಜಾಮ ಪೋಲೀಸು, ಸೈನ್ಯದೊಂದಿಗೆ ಮುಸ್ಲಿಂ ಮತಾಂಧ ರಜಾಕಾರ ಪಡೆಯೊಂದನ್ನು ರಾಜ್ಯದ ಮೂಲೆ ಮೂಲೆಗೂ ಕಳಿಸಿದ. ರಜಾಕಾರರು ಸಾಮೂಹಿಕ ಕೊಲೆ, ಲೂಟಿ, ಮಾನಭಂಗ, ಮನೆ ಸುಡುವುದರಲ್ಲಿ ತೊಡಗಿದರು. ರಜಾಕಾರರು, ಪೋಲೀಸು, ಸೈನ್ಯ ಇವರ ಜಂಟಿ ಕಾರ್ಯಾಚರಣೆಯನ್ನು ಎದುರಿಸಲು ಮದ್ದು ಗುಂಡುಗಳ ಶಸ್ತ್ರಾಸ್ತ್ರ ಪ್ರಯೋಗ ಅನಿವಾರ್ಯವಾಯಿತು. 10,000 ಬಲವುಳ್ಳ ಗ್ರಾಮಸ್ಕ್ವಾಡು ಮತ್ತು 2000 ಜನರ ಗೆರಿಲ್ಲಾ ಸ್ಕ್ವಾಡುಗಳನ್ನು ಸಿದ್ಧಪಡಿಸಲಾಯಿತು. ಗ್ರಾಮ ಸ್ಕ್ವಾಡುಗಳು ಗ್ರಾಮದ ರಕ್ಷಣೆಮಾಡಿದರೆ, ಗೆರಿಲ್ಲಾ ಸ್ಕ್ವಾಡ್ ಪೋಲೀಸು, ಮಿಲಿಟರಿ, ರಜಾಕಾರರ ಕ್ಯಾಂಪು ಪಡೆಗಳ ಮೇಲೆ ಅನಿರೀಕ್ಷಿತ ದಾಳಿ, ಗೆರಿಲ್ಲಾ ಹೋರಾಟದಲ್ಲಿ ತೊಡಗಿತು. ಜನಸಮೂಹ ಸಹ ಮಿಲಿಟರಿ, ರಜಾಕಾರ ಪಡೆಗಳ ವಿರಾಮ ಕ್ಯಾಂಪುಗಳಿಗೆ ಬೆಂಕಿ ಇಡುವುದು ಮುಂತಾದ ಅಸಾಂಪ್ರದಾಯಿಕ ಆಕ್ರಮಣ ನೀತಿ ಅನುಸರಿಸಿತ್ತು. ಗೆರಿಲ್ಲಾಪಡೆ, ಗ್ರಾಮಪಡೆಗಳು ಜನಸಮೂಹದ ಸಕ್ರಿಯ ಬೆಂಬಲದಿಂದ ನಿಜಾಮನ ದಬ್ಬಾಳಿಕೆಗೆ ತಕ್ಕ ಪ್ರತಿರೋಧ ಒಡ್ಡಲು ಸಾಧ್ಯವಾಯಿತು.

1947 ಆಗಸ್ಟ್‌ನಿಂದ 1948 ಸೆಪ್ಟೆಂಬರ್‌ವರೆಗಿನ ಸಶಸ್ತ್ರ ಹೋರಾಟದ ಈ ಘಟ್ಟದಲ್ಲಿ ಎಲ್ಲಾ ಪಾಳೆಯಗಾರಿ-ವಿರೋಧಿ ಸುಧಾರಣೆಗಳು ಜಾರಿಗೆ ಬಂದವು. ಬಿಟ್ಟಿದುಡಿಮೆ, ಒಕ್ಕಲೆಬ್ಬಿಸುವಿಕೆ ಪೂರ್ಣ ನಿಂತು

(9ನೇ ಪುಟ ನೋಡಿ)

ಮಲಪ್ರಭಾ - ಮಲೆನಾಡು ರೈತ ಚಳುವಳಿ

1980ರ ಅವಧಿಯಲ್ಲಿ ಜಾಗತಿಕವಾಗಿ, ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಹಲವಾರು ಚರಿತ್ರಾರ್ಹ ಘಟನೆಗಳು ನಡೆದಿವೆ. ಆದರೆ ಇತಿಹಾಸದ ಮುನ್ನಡೆಯ ದೃಷ್ಟಿಯಿಂದಲೋ, ಜನರ ಪ್ರಜ್ಞೆಯ ಬೆಳವಣಿಗೆಯ ದೃಷ್ಟಿಯಿಂದಲೋ ಅಥವಾ ಪ್ರಜಾಪ್ರಭುತ್ವದ ಉಳುವಿನ ದೃಷ್ಟಿಯಿಂದಲೋ ನಿಸ್ಸಂಶಯವಾಗಿ ಅದ್ವಿತೀಯ ಎನ್ನಿಸಿಕೊಳ್ಳುವ ಘಟನೆಗಳು ಒಂದೋ ಎರಡೋ ಇರುತ್ತವೆ ಅಷ್ಟೆ. ಈ ದೃಷ್ಟಿಯಿಂದ ಜಾಗತಿಕ ಹಿನ್ನೆಲೆಯಲ್ಲಿ ಪ್ರಮುಖವಾದ ಘಟನೆ ಎಂದರೆ ಜಿಂಬಾಬ್ವೆಯ ಉದಯ. ಸಾಮ್ರಾಜ್ಯಶಾಹಿ-ವಸಾಹತುಶಾಹಿಗೆ ಕೊಟ್ಟ ದೊಡ್ಡ ಪೆಟ್ಟು ಅದು. ಕರಿಯ ಜಗತ್ತಿಗೆ ಅದೊಂದು ಆಶಾಕಿರಣ. ಭಾರತದಲ್ಲಿ ಆದ ಪ್ರಮುಖ ಹಿನ್ನಡೆ ಎಂದರೆ ರಾಷ್ಟ್ರೀಯ ಭದ್ರತಾ ಮಸೂದೆ. ಸರ್ವಾಧಿಕಾರವನ್ನು ಸುತ್ತುದಾರಿಯಲ್ಲಿ ತರುವ ಹೊಂಚು ಇದು. 1980ರ ಶಾಪ ಇದು. ಕರ್ನಾಟಕದಲ್ಲಿ ನಡೆದ ರೈತಚಳುವಳಿ 1980ರ ಪ್ರಮುಖ ರಾಜ್ಯಘಟನೆ. ಒಳಗೇ ಸಂಚಿತವಾಗಿ ಹೊಗೆಯಾಡುತ್ತಿದ್ದ ರೈತರ ಆಕ್ರೋಶ ನರಗುಂದದಲ್ಲಿ ಮೊದಲಬಾರಿಗೆ ಪ್ರಕಟವಾಯಿತು. ಅದಕ್ಕೆ ರಕ್ತದ ಬಲಿಯೂ ಆಯಿತು. ಈ ಮೂರು 1980ರ ಪ್ರಮುಖ ಘಟನೆಗಳು.

ಮಲಪ್ರಭಾ ಯೋಜನೆಯಿಂದ ರೈತರಿಗೆ ಲಾಭಕ್ಕಿಂತ ಹೆಚ್ಚು ನಷ್ಟವೇ ಆಗಿರುವುದೊಂದು ವಿಪರ್ಯಾಸ. ಇದಕ್ಕೆ ಖಂಡಿತ ಸರ್ಕಾರವೇ ಹೊಣೆ. ಒಂದು ಕೈಯಿಂದ ಕೊಟ್ಟ ಹಾಗೆ ಮಾಡಿ ಇನ್ನೊಂದು ಕೈಯಿಂದ ಕಿತ್ತುಕೊಳ್ಳುತ್ತಿದೆ. ನೀರಾವರಿ ಸೌಕರ್ಯ ಒದಗಿಸಿದ್ದೂ ಆಯಿತು, ಬೆಲೆ ಸರಿಯಾಗಿಡದೆ, ತೆರಿಗೆ ಹೆಚ್ಚು ಹಾಕಿ ಬಂದದ್ದನ್ನು ನುಂಗಿ ಹಾಕಿದ್ದೂ ಆಯಿತು. ಬಂಡವಾಳಶಾಹಿಯಲ್ಲಿ ಸರ್ಕಾರದ ಹಿತಾಸಕ್ತಿಗಳು ಮೂಲಭೂತವಾಗಿ ತನ್ನ ಆಧಾರಸ್ತಂಭಗಳಾದ ಶ್ರೀಮಂತರು, ದೊಡ್ಡ ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳ ಲಾಭದ ಸುತ್ತಲೇ ಸುತ್ತುತ್ತಿರುವುದರಿಂದ ರೈತನಿಗೆ ಅಂಥ ಸರ್ಕಾರ ನೀಡುವ ಸೌಲಭ್ಯಗಳು, ಉದ್ಯಮಿಗಳು ವ್ಯಾಪಾರಿಗಳ ಲಾಭ ಹೆಚ್ಚಿಸುವುದಕ್ಕೇ ದುಡಿಯುತ್ತವೆ. ನೀರಾವರಿ ಸೌಲಭ್ಯದಿಂದ ರೈತ ಹೆಚ್ಚು ಬೆಳೆಯಬಹುದು. ಆದರೆ ಅವನು ಹೆಚ್ಚು ಹೆಚ್ಚು ಬೆಳೆದಷ್ಟೂ ವ್ಯಾಪಾರಿಗಳಿಗೆ, ಉದ್ಯಮಿಗಳಿಗೆ ಹಿಗ್ಗು. ಕುರಿಕೊಬ್ಬಿದಷ್ಟೂ ಕುರುಬನಿಗೆ ಲಾಭ ಎನ್ನುವ ಹಾಗೆ. ರೈತನ ಹೆಚ್ಚು ಬೆಳೆ, ವ್ಯಾಪಾರಿಯ ಹೆಚ್ಚು ದಾಸ್ತಾನಾಗಿ ಪರಿವರ್ತನೆಗೊಳ್ಳುತ್ತದೆ. ಹತ್ತಿಯಂಥ ಬೆಳೆಗಳು ಕೈಗಾರಿಕೋದ್ಯಮಿಗೆ ಹೆಚ್ಚು ಕಚ್ಚಾಸರಕಾಗಿ ಪರಿವರ್ತನೆಯಾಗುತ್ತದೆ. ವ್ಯಾಪಾರಿಯೂ ಉದ್ಯಮಿಯೂ ಹೆಚ್ಚು ಲಾಭ ಮಾಡಿಕೊಳ್ಳುತ್ತಾರೆ. ರೈತ ಬೆಳೆದಷ್ಟೂ ಹೆಚ್ಚು ನಷ್ಟಕ್ಕೆ ಈಡಾಗುತ್ತಾನೆ. ಮಲೆನಾಡಿನ ರೈತರ ಗೋಳಿಗೆ ದನಿಕೊಟ್ಟಿರುವ ಶಿವಮೊಗ್ಗದ ರೈತರ ಕಥೆಯೂ ಇದೇ ರೀತಿಯದೇ. ಮಲೆನಾಡಿನಲ್ಲಿ ನೀರಾವರಿ ಬೆಳೆಗಾರರಂತೂ ಹೇಳತೀರದ ಕಷ್ಟ ಅನುಭವಿಸುತ್ತಿದ್ದಾರೆ. ಈಗ ಮಲೆನಾಡಿನ ಮೂಲೆಮೂಲೆಗಳಲ್ಲಿ ಎಚ್ಚರ ಮೂಡುತ್ತಿದೆ.

ಮಲಪ್ರಭಾ-ಮಲೆನಾಡು ರೈತರ ಚಳುವಳಿಗಳು ಈಗ ಆರಂಭವಾಗಿದೆ. ಇದುವರೆಗೆ ತಲೆಮೇಲೆ ಕೈ ಹೊತ್ತು ಕುಳಿತಿರುತ್ತಿದ್ದ ರೈತ ಈಗ ತಲೆ ಎತ್ತಿ, ಕೈ ಎತ್ತಿ ಹೋರಾಟಕ್ಕೆ ಇಳಿದಿದ್ದಾನೆ. ಎದ್ದ ಮೇಲೆ ನಡೆಯಲು ಮುನ್ನುಗ್ಗಲು ಸರಿಯಾದ ದಾರಿಯನ್ನು ಹುಡುಕಿಕೊಳ್ಳಬೇಕಲ್ಲವೇ? ಈಗ ಸಮಸ್ಯೆ ಇರುವುದು ಅಲ್ಲಿಯೇ.

ರೈತ ಚಳುವಳಿ ಬರೀ ರೈತ ಚಳುವಳಿಯಾಗಿ ನಡೆದರೆ ಅದಕ್ಕೆ ಸಿಗುವ ಫಲ ಕಡಿಮೆ. ಹೋರಾಟ ಸಫಲವಾಗಬೇಕಾದರೆ ರೈತ ಚಳುವಳಿಗೆ ಒಂದು ರಾಜಕೀಯ ಆಯಾಮ ಬೇಕೇಬೇಕು. ಕೆಲವು ರೈತ ಮುಖಂಡರು ನಾವು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ ಎಂದು ಹೇಳಿಕೊಂಡಿದ್ದಾರೆ. ರಾಜಕೀಯ ಪಕ್ಷಗಳು ಸಂಘಟಿಸಿರುವ ರೈತರ ಜಾಥಾಕ್ಕೆ ಬೆಂಬಲ ಕೊಡಬೇಡಿ ಎಂಬ ಕರೆಯಂತೂ ತೀರ ಅವ್ಯೆಚಾರಿಕವಾದುದು. ಈಗ ಸಂಘಟಿಸಿರುವ ರಾಜಕೀಯ ಪಕ್ಷಗಳಲ್ಲಿ ಕೆಲವು ಪಕ್ಷಗಳ ರಾಜಕೀಯ ದೃಷ್ಟಿಕೋನವೇ ರೈತ-ಕಾರ್ಮಿಕರ ಹಿತಸಾಧನೆಗೆ ರೂಪುಗೊಂಡಿವೆ. ಮಿಕ್ಕ ಪಕ್ಷಗಳೂ ಈ ಹೊತ್ತಿನಲ್ಲಿ ರೈತರ ಬಗ್ಗೆ ನಿಜವಾದ ಕಳಕಳಿಯನ್ನು ಹೊಂದಿವೆ. ಬೆಂಬಲ ನೀಡುವ ರಾಜಕೀಯ ಪಕ್ಷಗಳ ಜೊತೆ ಸೇರಿ ರೈತ ಚಳುವಳಿಯು ತನ್ನ ರಾಜಕೀಯ ಆಯಾಮವನ್ನು ರೂಪಿಸಿಕೊಳ್ಳುವುದು ಆರೋಗ್ಯಕರ.

ಈಗಿನ ರೈತ ಚಳುವಳಿ ದೊಡ್ಡ ರೈತರದೇ ಹೊರತು ಸಣ್ಣ ರೈತರದಲ್ಲ ಎಂಬ ಆಪಾದನೆಗಳೂ ಅಲ್ಲಲ್ಲಿ ಕೇಳಿಬರುತ್ತಿವೆ. ಆದರೆ ಮಲಪ್ರಭಾ-ಮಲೆನಾಡು ಪ್ರದೇಶದ ಅಂಕಿ-ಅಂಶಗಳ ಪ್ರಕಾರ ಅಲ್ಲಿ ಸಣ್ಣ ರೈತರೇ ಬಹುಸಂಖ್ಯಾತರು. ತೆರಿಗೆ ಕರಭಾರಗಳಿಂದ ಹೆಚ್ಚಿನ ಪೆಟ್ಟು ತಿಂದಿರುವವರೂ ಅವರೇ. ಇದರೊಟ್ಟಿಗೇ ಗಮನಿಸಲೇಬೇಕಾದ ಮುಖ್ಯ ಅಂಶವೆಂದರೆ ಕೃಷಿಕೂಲಿಕಾರರು.

ಕರತೆರಿಗೆಗಳ ಪೆಟ್ಟಿನಿಂದ ಶಿಥಿಲವಾಗುತ್ತಿರುವ ರೈತರ ಸ್ಥಿತಿಗಿಂತ ತುಂಬ ಹೀನಾಯವಾದ ಪರಿಸ್ಥಿತಿ ಇವರದು. ಇವರಿಗೆ ಭೂಮಿಯ ಒಡೆತನ ಇಲ್ಲದಿರುವುದರಿಂದ ಇವರು ರೈತರು ಎನ್ನಿಸಿಕೊಳ್ಳುವುದಿಲ್ಲ. ಆದರೆ ಬೇಸಾಯವೇ ಇವರ ಜೀವನಾಧಾರ. ಹೊಲ ಉಳುವುದು, ಬಿತ್ತುವುದು, ನಾಟಿಮಾಡುವುದು, ಕಟಾವುಮಾಡುವುದು, ಕಣಮಾಡುವುದು, ಹಣ್ಣು ಕೀಳುವುದು, ಬಿಡಿಸುವುದು, ಬೆಳೆಯನ್ನು ಹಸನುಮಾಡುವುದು ಎಲ್ಲದರಲ್ಲೂ ರೈತನಿಗೆ ಇವರ ಸಹಾಯ ಬೇಕೇಬೇಕು. ಕೃಷಿಕೂಲಿಗಾರರಿಗೆ ಭೂಮಿಯುಳ್ಳ ರೈತನೇ ಉದ್ಯೋಗದಾತ. ಆದ್ದರಿಂದ ಕೃಷಿಕಾರ್ಮಿಕರ ಬೇಡಿಕೆಗಳನ್ನು ರೈತ ಮುಂದಿಡುವುದು ವಿಪರ್ಯಾಸ ಎನ್ನಿಸಬಹುದು. ಕೃಷಿಕಾರ್ಮಿಕರಿಗೆ ರೈತ ಕರೆದಾಗ ಮಾತ್ರ ಕೆಲಸ, ಸಂಬಳ, ಊಟ. ಮಿಕ್ಕ ಅವಧಿಯಲ್ಲಿ ಅವನ ಗತಿ ಯಾರಿಗೂ ಬೇಡ. ಸರ್ಕಾರ ಕೆಲವು ವಲಯಗಳಿಗೆ ಕನಿಷ್ಠ ಕೂಲಿಯನ್ನು ಶಾಸನದಲ್ಲಿ ನಿಗದಿಮಾಡಿದೆ. ಆದರೆ ಯಾರೂ ಅವನಿಗೆ ಆ ಮಟ್ಟದಲ್ಲಿ ಕೂಲಿ ಕೊಡುತ್ತಿಲ್ಲ. ಕೃಷಿಕಾರ್ಮಿಕರಲ್ಲಿ ಹೆಂಗಸರು, ಗಂಡಸರು, ಸಮಾನ ಸಂಖ್ಯೆಯಲ್ಲಿದ್ದಾರೆ. ಗಂಡಸರಷ್ಟೇ ಕೆಲಸವನ್ನು ಹೆಂಗಸರೂ ಮಾಡುತ್ತಿದ್ದಾರೆ. ಆದರೆ ಗಂಡಸರಿಗೆ ಸಿಗುತ್ತಿರುವಷ್ಟೇ ಕೂಲಿ ಹೆಂಗಸರಿಗೆ ಸಿಗುತ್ತಿಲ್ಲ. ಗಂಡಸು ಕೃಷಿಕೂಲಿಗಾರರು ತುಂಬ ಶೋಷಣೆಗೊಳಗಾದರೆ, ಹೆಂಗಸು ಕೃಷಿಕೂಲಿಗಾರರು ಅವರಿಗಿಂತ ಹೆಚ್ಚು ಶೋಷಣೆಗೆ ಒಳಗಾಗಿದ್ದಾರೆ. ಇದು ಸಾಲದೆಂಬಂತೆ ಹೆಚ್ಚು ಜಮೀನು ಹೊಂದಿರುವ ಜಮೀನ್ದಾರರ ಕ್ರೌರ್ಯ, ಕಾಮುಗಳಿಗೂ ಅವರು ಬಲಿಪಶುಗಳಾಗಿದ್ದಾರೆ.

ರೈತಚಳುವಳಿಯನ್ನು ಬೆಂಬಲಿಸಿ, ಗೋಲಿಬಾರ್‌ಗಳನ್ನು ಖಂಡಿಸಿ ಅನೇಕ ಕೈಗಾರಿಕೆಗಳ ಕಾರ್ಮಿಕಸಂಘಟನೆಗಳು ಗೊತ್ತುವಳಿಗಳನ್ನು ಸ್ವೀಕರಿಸಿವೆ. ಆದರೆ ಇಷ್ಟರಿಂದ ಬೆಂಬಲ ಕೊಟ್ಟಂತಾಗದು. ಕಾರ್ಮಿಕಶಕ್ತಿಯ ಪ್ರಮಾಣವನ್ನು ಇತ್ತೀಚಿನ 'ಬೆಂಗಳೂರು ಬಂದ್' ತೋರಿಸಿಕೊಟ್ಟಿದೆ. ರೈತಪ್ರಧಾನವಾದ ನಮ್ಮ ದೇಶದಲ್ಲಿ ಕಾರ್ಮಿಕ-ರೈತರ ಐಕ್ಯತೆಗೆ ತೀರ ಮಹತ್ವವಿದೆ. ಕಾರ್ಮಿಕರ ಮುಖ್ಯ ಹೊಣೆಗಳಲ್ಲಿ ಒಂದು ಅವರ ಅನಕ್ಷರಸ್ಥ ಸೋದರ ಸಮೂಹವನ್ನು ಸಂಘಟಿಸುವ ಮಾರ್ಗ ಹುಡುಕುವುದು ಅತ್ಯಗತ್ಯವಾದುದು.

ಕೋಲಾರದಲ್ಲಿಹೋರಾಟದ ಪ್ರತಿಧ್ವನಿ

ನರಗುಂದದಲ್ಲಿ ಆರಂಭವಾಗಿ ರಾಜ್ಯದಾದ್ಯಂತ ಹರಡುತ್ತಿದ್ದ ರೈತಚಳುವಳಿಗೆ ರಾಜ್ಯದ ಬರದ ಜಿಲ್ಲೆಗಳಲ್ಲಿ ಒಂದಾದ ಕೋಲಾರವೂ ಮಾರ್ದನಿ ಕೊಟ್ಟಿತು. ನೈಸರ್ಗಿಕವಾಗಿ ಕೋಲಾರ ಬರಡಾಗಿರಬಹುದು. ಆದರೆ ಕ್ರಾಂತಿಕಾರಿ ಮನೋಭಾವಕ್ಕೆ ಅಲ್ಲಿ ಕೊರತೆಯಿಲ್ಲ. 23-10-1980ರಂದು ಕೋಲಾರದ ರೈತಕ್ರಿಯಾಸಮಿತಿಯು ಬೃಹತ್ ಮೆರವಣಿಗೆಯನ್ನು ಸಂಘಟಿಸಿತ್ತು. ಅಂದಿನಿಂದ ಕೋಲಾರ ರೈತರ ಚಳುವಳಿಗೆ ನಿರ್ದಿಷ್ಟ ಸ್ವರೂಪ ಬಂದಿತು. ಅಲ್ಲಿನ ಕ್ರಿಯಾಸಮಿತಿ 22 ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿತು.

ಚಿಂತಾಮಣಿ, ಮುಳುಬಾಗಿಲು, ಬಂಗಾರುಪೇಟೆ, ಬಾಗೇಪಲ್ಲಿಗಳಲ್ಲಿ ರೈತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ರೈತರು ಬೇಡಿಕೆಗಳನ್ನು ಒತ್ತಾಯಿಸುತ್ತಿದ್ದ ಹಾಗೆ ಸರ್ಕಾರವು ಬಾಗೇಪಲ್ಲಿಯ ಗೋಲಿಬಾರ್‌ನಲ್ಲಿ ಉತ್ತರಕೊಟ್ಟಿತು. ನಂತರ ಕೆಲವು ಲಕ್ಷಗಳ ಪರಿಹಾರವನ್ನು ಸೂಚಿಸಿತಾದರೂ ಒಣಗಿಹೋಗಿರುವ ಜಿಲ್ಲೆಯ ಹಸಿವಿಗೆ ಅದು ಏತಕ್ಕೂ ಸಾಲುವುದಿಲ್ಲ.

ಜಿಲ್ಲೆಯಾದ್ಯಂತ ಪ್ರಗತಿಪರ ಮುಖಂಡರು, ರೈತ ಪ್ರಮುಖರು, ವಕೀಲರು, ಕಾರ್ಮಿಕರು ಚಳುವಳಿಗೆ ಧುಮುಕಿದರು. ಪಿಕೆಟಿಂಗ್ ಮಾಡಿ ಬಂಧನಕ್ಕೆ ಒಳಗಾದರು. ಬಾಗೇಪಲ್ಲಿಯ ಗೋಲೀಬಾರ್ ನಡೆದ ಸ್ಥಳಕ್ಕೆ ಕಾಂ. ಚಾತುನ್ನಿ ಮಾಸ್ತರ್ ಅವರು ಭೇಟಿ ಇತ್ತಿದ್ದರು.

ಚಳುವಳಿ ತಾತ್ಕಾಲಿಕವಾಗಿ ನಿಲುಗಡೆಯಾಗಿದ್ದರೂ ಕೋಲಾರ ಜಿಲ್ಲೆಯಾದ್ಯಂತ ಈಗ ಬಲಿಷ್ಠ ಸಂಘಟನೆ ನಡೆಯುತ್ತಿದೆ. ಆಳುವ ಸರ್ಕಾರದ ಕ್ರೂರ ನೀತಿಗಳಿಗೆ ಅನಕ್ಷರಸ್ಥ ರೈತರೂ ಕೂಡ ಪ್ರತಿಭಟನೆ ತೋರಿಸುತ್ತಿದ್ದಾರೆ. ಜಿಲ್ಲೆಯ ಚಳುವಳಿಯಲ್ಲಿ ಒಟ್ಟು ಹತ್ತು ಸಾವಿರಕ್ಕೂ ಮಿಕ್ಕು ಜನ ಬಂಧನಕ್ಕೊಳಗಾಗಿದ್ದಾರೆ.

—ಉಮಾ

ಸ್ಮರಣೀಯ ರೈತ ಹೋರಾಟಗಳು

(8ನೇ ಪುಟದಿಂದ)

ಹೋಯಿತು. ಗೇಣಿ ಮತ್ತು ಕಂದಾಯಗಳ ಕಡಿತ ಮತ್ತು ಕ್ರಮೇಣ ರದ್ಧತಿ ಆಯಿತು. ಉಳುವ ಗೇಣಿದಾರ ಹೊಲದೊಡೆಯನಾದ. ಭೂಮಾಲಿಕ ಕಸಿದುಕೊಂಡ ಜಮೀನು ರೈತರಿಗೆ ಹಿಂದೆ ದೊರೆಯಿತು. 100 ಎಕರೆ ಒಣ ಜಮೀನಿಗೆ ಹಾಗೂ 10 ಎಕರೆ ನೀರಾವರಿ ಜಮೀನಿಗೆ ಪರಮಾವಧಿ ಭೂಹಿಡುವಳಿ ಮಿತಿ ಕಡ್ಡಾಯವಾಗಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಇದರಲ್ಲಿ ದೊರೆತ ಹೆಚ್ಚುವರಿ ಜಮೀನು ಹಾಗೂ ಖಾಲಿಯಾಗಿದ್ದ ಕೃಷಿಯೋಗ್ಯ ಜಮೀನು ಎಲ್ಲಾ ಸೇರಿಸಿ ಸುಮಾರು 10 ಲಕ್ಷ ಎಕರೆ ಜಮೀನು ರೈತರಲ್ಲಿ ಹಂಚಲಾಯಿತು. ಈ ಎಲ್ಲಾ ಕಾರ್ಯಕ್ರಮಗಳನ್ನು ರೈತಸಮಿತಿಗಳೇ ನಡೆಸಿದವು. ಕುಖ್ಯಾತ ಜಮೀನುದಾರರ ಭಾರಿ ಕಣಜಗಳನ್ನು ಸ್ವಾಧೀನಪಡಿಸಿಕೊಂಡು ಬಡವರಿಗೆ ಹಂಚಲಾಯಿತು. ಕೃಷಿಕಾರ್ಮಿಕರಿಗೆ ಕೂಲಿ ಪರಿಸಲಾಯಿತು ಮತ್ತು ಅದು ಜಾರಿಗೆ ಬರುವಂತೆ ನೋಡಿಕೊಳ್ಳಲಾಯಿತು. ಇವಿಷ್ಟೆ ಅಲ್ಲದೆ 30 ಲಕ್ಷ ಜನಸಂಖ್ಯೆ ಇರುವ ನಾಲ್ಗೊಂಡಾ, ವಾರಂಗಲ್, ಖಮ್ಮಾಮ್ ಜಿಲ್ಲೆಗಳಲ್ಲಿ ಈ ಒಂದು ಒಂದುವರೆ ವರುಷದ ಅವಧಿಯಲ್ಲಿ ರೈತಸಮಿತಿಗಳು, ಗ್ರಾಮ ಪಂಚಾಯತು ಆಧಾರಿತ ಗ್ರಾಮರಾಜ್ಯದ ಸ್ವಯಮಾಡಳಿತ ನಡೆಸಿದವು.

ಪೋಲೀಸ್ ಕಾರ್ಯಾಚರಣೆ

1948ರ ಮಧ್ಯದ ಹೊತ್ತಿಗೆ ತೆಲಂಗಾಣ ರೈತರ ಸಶಸ್ತ್ರ ಹೋರಾಟ ನಿಜಾಮನ ಪಡೆಗಳ ಮೇಲೆ ವಿಜಯದ ಮೇಲೆ ವಿಜಯ ಸಾಧಿಸುತ್ತಾ ಮುನ್ನಡೆದಿತ್ತು. ರೈತಸಮಿತಿಗಳ ರಾಜಕೀಯ ಆಡಳಿತ 3 ಜಿಲ್ಲೆಗಳಿಂದ ಇನ್ನೂ ಹೆಚ್ಚು ಜಿಲ್ಲೆಗಳಿಗೆ ಹರಡುವ ಸಂಭವವಿತ್ತು. ಸುಮಾರು ಒಂದು ವರ್ಷದವರೆಗೆ ಕಷ್ಟಕರ ಪರಿಸ್ಥಿತಿಯಲ್ಲಿ ಹೋರಾಡುತ್ತಿದ್ದ ತೆಲಂಗಾಣಾ ರೈತರ ಸಹಾಯಕ್ಕೆ ಬರದ ನೆಹ್ರೂ ಸರ್ಕಾರ, ಅದು ಇನ್ನೇನು ವಿಜಯದ ಹೊಸ್ತಿಲಲ್ಲಿದ್ದಾಗ ಭಾರತದ ಪಡೆಗಳು ಹೈದರಾಬಾದಿನೊಳಗೆ ನುಗ್ಗುವಂತೆ ಆಜ್ಞಾಪಿಸಿತು. ಆಗಲೇ ಸುಸ್ತಾಗಿದ್ದ ನಿಜಾಮನ ಸೈನ್ಯ ಐದೇ ದಿನಗಳಲ್ಲಿ ಶರಣಾಯಿತು. ಇದನ್ನು 'ಪೋಲೀಸು ಕಾರ್ಯಾಚರಣೆ' ಎಂದು ಕರೆಯಲಾಯಿತು.

ಆದರೆ ಮುಂದಿನ ವಾರದಲ್ಲಿಯೇ 'ಪೋಲೀಸು ಕಾರ್ಯಾಚರಣೆ'ಯ ನಿಜವಾದ ಉದ್ದೇಶ ಬಯಲಾಯಿತು. ನಿಜಾಮನ ಅಧಿಕಾರಿಗಳು ರಜಾಕಾರರನ್ನು ಬಿಟ್ಟು ತೆಲಂಗಾಣ ರೈತ ಚಳುವಳಿಯ ಸುವ್ಯವಸ್ಥಿತ ದಮನಕ್ಕೆ ಸೈನ್ಯ ತೊಡಗಿತು. ಹೈದರಾಬಾದು ಪ್ರವೇಶಿಸಿದ್ದ 50,000 ಬಲವಿದ್ದ ಮಿಲಿಟರಿ ಪಡೆ, 7-8 ಹಳ್ಳಿಗಳಿಗೆ ಒಂದರಂತೆ ಕ್ಯಾಂಪು ಆರಂಭಿಸಿತು. 'ಸ್ವತಂತ್ರ' ಭಾರತ ಸೈನ್ಯ ತೆಲಂಗಾಣಾ ರೈತರ ಮೇಲೆ ಮಾಡಿದ ಈ ಧಾಳಿಯನ್ನು ಎದುರಿಸಲು ಹಾಗೂ 2-3 ವರ್ಷದ ಸತತ ಹೋರಾಟದ ಫಲವಾದ ಪ್ರಜಾಸತ್ತಾತ್ಮಕ ಹಕ್ಕು ಸ್ವಾತಂತ್ರ್ಯಗಳನ್ನು ಪಾಳೆಯಗಾರಿ-ವಿರೋಧಿ ಕ್ರಮಗಳ ಜಾರಿ ಇವನ್ನು ಉಳಿಸಿಕೊಳ್ಳಲು ಕಮ್ಯುನಿಸ್ಟ್ ಪಕ್ಷ 'ಸಶಸ್ತ್ರ ವಿಮುಕ್ತಿ ಹೋರಾಟ' ಮುಂದುವರೆಸಲು ನಿರ್ಧರಿಸಿತು. ಭಾರತೀಯ ಸೈನ್ಯ ರಜಾಕಾರ, ನಿಜಾಮನ ಪೋಲೀಸು, ಸೈನ್ಯವನ್ನು ನಾಚಿಸುವಂತೆ ಲೂಟಿ, ಮಾನಭಂಗ, ಅತ್ಯಾಚಾರಗಳಲ್ಲಿ ತೊಡಗಿತು. ಮಿಲಿಟರಿ ಕ್ಯಾಂಪುಗಳು ಯಾತನಾ ಶಿಬಿರಗಳಾದವು. ಸಾವಿರಾರು ರೈತನಾಯಕರು, ಕಮ್ಯುನಿಸ್ಟರ ಕೊಲೆಯಾಯಿತು. 1948-51ವರೆಗೆ ತೆಲಂಗಾಣಾ ರೈತರು, ಜನತೆ ವೀರಾವೇಶದಿಂದ ಹೋರಾಡಿದರು. ಭಾರತ ಸೈನ್ಯ ನುಗ್ಗಿದ ಮೊದಲ ಕೆಲವು ತಿಂಗಳುಗಳಲ್ಲಿ ಶಾಖೆ, ವಿಭಾಗ ಸ್ಥರದ ಕಾರ್ಯಕರ್ತರಲ್ಲಿ ಇದ್ದ ಭ್ರಮೆ, ಇದರಿಂದಾದ ಸನ್ನದ್ಧ ಸ್ಥಿತಿಯ ಅಭಾವ ಮೊದಲ ತಿಂಗಳುಗಳಲ್ಲೇ ಸಾವಿರಾರು ಸಮರ್ಥ ಕಾರ್ಯಕರ್ತರ ಹಾನಿ, ಹೋರಾಟಕ್ಕೆ ಪಕ್ಷದ ಕೇಂದ್ರ ಮತ್ತು ರಾಜ್ಯಸಮಿತಿಯ ಒಂದು ವಿಭಾಗದ ಸತತ ವಿರೋಧ ಹಾಗೂ ದ್ರೋಹ, ಪ್ರತಿಕೂಲವಾದ ರಾಜಕೀಯ ಪರಿಸ್ಥಿತಿ ಇವೆಲ್ಲವುಗಳಿಂದ ವಿಮುಕ್ತಿ ಹೋರಾಟ 1951ರ ಹೊತ್ತಿಗೆ ಮುಂದುವರೆಸುವುದು ಅಸಾಧ್ಯವಾಯಿತು. ಹೋರಾಟದ ಫಲಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹೊಸ ಸಂದರ್ಭದಲ್ಲಿ ಉಳಿಸಿಕೊಂಡು ಮುಂದಿನ ಘಟ್ಟದ ರಾಜಕೀಯ ಹೋರಾಟಕ್ಕೆ ಸಿದ್ಧವಾಗಲು ಹೋರಾಟ ಹಿಂತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ಇತ್ತು.

ಈ ರೀತಿ 5 ವರ್ಷದ ಅಮೋಘ ರೈತರ ಚಳುವಳಿ ಕೊನೆಯಾಯಿತು. ತೆಲಂಗಾಣಾ ರೈತರ ಹೋರಾಟದ ಸಾಧನೆಗಳು ವೈಶಿಷ್ಟ್ಯಗಳು : ರೈತರೇ ಜಾರಿಗೆ ತಂದ ವ್ಯಾಪಕ ಕೃಷಕ ಸುಧಾರಣೆಗಳು, 1-1½ ವರ್ಷಗಳ ರೈತರ ಸ್ವಯಮಾಡಳಿತದ ಪ್ರಯೋಗ, ಪೂರ್ಣ ತರಬೇತು ಹೊಂದಿದ ಉತ್ಕೃಷ್ಟ ಸೈನ್ಯಕ್ಕೆ 5 ವರ್ಷಗಳ ಕಾಲ ಒಡ್ಡಿದ ಪ್ರತಿರೋಧ, ಭಾಷಾವಾರು ರಾಜ್ಯಗಳ ರಚನೆ ಬಗ್ಗೆ ಪ್ರಬಲ ಪ್ರತಿಪಾದನೆ.

—ವಿರಾಜ್

ಕೃಷ್ಣೆ ತನ್ನ ಹರಿವನ್ನು ಬೆಂಗಳೂರಿನತ್ತ ಬದಲಿಸಿದಂತಿದೆ

(3ನೇ ಪುಟದಿಂದ)

ಓಡುತ್ತಾ, ಬೆಂಗಳೂರಿಗೆ ಮುನ್ನುಗ್ಗಿ ಬರುತ್ತಿರುವ ರೈತ ಜಾಥಾವನ್ನು ಎದುರ್ಗೊಳ್ಳಲು ಜನರು ಸಾಗರದಂತೆ ನೆರೆದಿರುತ್ತಾರೋ ಎಂದು ನೋಡಲು ನಾನು ಜಾಥಾಕ್ಕಿಂತಲೂ ಮುಂದಾಗಿಯೇ ಬಂದೆ.



ಹುಬ್ಬಳ್ಳಿಯಲ್ಲಿ ಜಾಥಾವನ್ನು ಸಂಭ್ರಮದಿಂದ ಸ್ವಾಗತಿಸುತ್ತಿರುವುದು

ಗುಂಡೂರಾಯರ ಹೊಲಸು ಉಪಾಯಗಳು

ಆಳುವ ವರ್ಗ ಒಂದು ಜನತಾ ಚಳುವಳಿಯ ವಿರುದ್ಧ ಹೂಡಬಹುದಾದ ಎಲ್ಲಾ ಹೊಲಸು ಉಪಾಯಗಳನ್ನು ಗುಂಡೂರಾಯರು ಹೂಡಿದ್ದರು. ಮೊದಮೊದಲಿಗೆ, ಜಾಥಾ ಹುಟ್ಟುವಾಗಲೇ ಸತ್ತು ಹುಟ್ಟಿರುತ್ತದೆಂದು ಯೋಚಿಸಿದ್ದರು. ನರಗುಂದದಲ್ಲಿ ಸೇರಿದ್ದ ಜನರನ್ನು ಭಯಭೀತಗೊಳಿಸಲು ಸಶಸ್ತ್ರ ಪಡೆ ಫ್ಲಾಗ್ ಮಾರ್ಚ್ ಪ್ರದರ್ಶಿಸಿತು. ಜನರನ್ನು ಹೆದರಿಸಲು ಪೋಲೀಸರು ಜ. 16 ರಂದು ಮಾಡಿದ ದಬ್ಬಾಳಿಕೆ 1980ರ ಜುಲೈ 21ರಂದು ನಡೆದ ನರಗುಂದ ಘಟನೆಗಳ ನೆನಪು ಮರುಕಳಿಸುವಂತೆ ಮಾಡಿತು. ಪೋಲೀಸ್ ಮೆರವಣಿಗೆಯಿಂದಾಗಿ ಜಾಥಾದ ಜನ್ಮವನ್ನು ಮೊದಲೇ ನಿರ್ಧರಿಸಿದ ಸಮಯಕ್ಕೆ ಅಂದರೆ ಬೆಳಿಗ್ಗೆ 9ಕ್ಕೆ ಬದಲಾಗಿ, ಅಪರಾಹ್ನ 2 ಗಂಟೆಯವರೆಗೆ ತಡವಾಯಿತಷ್ಟೇ. ಅಗಾಧ ಆಂತರಿಕ ಶಕ್ತಿ ಹುದುಗಿಸಿಕೊಂಡ ಅಲ್ಲಿನ ಸಮಾಜ ಜನ್ಮವಿತ್ತದ್ದು ಸತ್ತ ಜೀವಕ್ಕಲ್ಲ. ಇದರಲ್ಲಿ ಸಣ್ಣದಾದರೂ ಸ್ಥೈರ್ಯದಿಂದ ತುಂಬಿದ ನರಗುಂದದ ನಂದಿ ಹಾಸಬಿ ಬಟ್ಟೆ ಗಿರಣಿಯ ಕಾರ್ಮಿಕವರ್ಗ ಸೂಲಗಿತ್ತಿಯ ಕೆಲಸಮಾಡಿತು. ಪೋಲೀಸರ ಫ್ಲಾಗ್ ಮಾರ್ಚ್‌ಗೆ ಪ್ರತಿಯಾಗಿ ಕಾರ್ಮಿಕರು ನರಗುಂದದ ರಸ್ತೆಗಳಲ್ಲಿ ಮೆರವಣಿಗೆ ಹೊರಟರು. ಧೀರ ರೈತರು ಅವರ ಹಿಂದೆ ಹೊರಟರು. ಜಾಥಾ ಈ ರೀತಿ ಆರಂಭವಾಯಿತು. ಜಾಥಾದ ಈ ರೀತಿಯ ಆರಂಭವೇ ಕಾರ್ಮಿಕ-ರೈತರ ಒಗ್ಗಟ್ಟಿನ ಸೂಚಕವಾಗಿತ್ತು. ಇದೇ ಒಗ್ಗಟ್ಟು ತಾನೇ ನಿಜವಾದ ಸಾಮಾಜಿಕ ಬದಲಾವಣೆ ತರುವ ಶಕ್ತಿ. ಆದ್ದರಿಂದಲೇ ಹಸಿರು ಕ್ರಾಂತಿವಾಲಾಗಳು ಇದನ್ನು ಸದೆಬಡಿಯಲು ಪ್ರಯತ್ನಿಸುತ್ತಿರುವುದು. ಈ ಹಸಿರುಕ್ರಾಂತಿವಾಲಾಗಳು, ಕೆಲವು ಸ್ವಯಂಘೋಷಿತ 'ರೈತ' ನಾಯಕರು ತಮ್ಮ ಹಸಿರು ಬ್ಯಾನರ್‌ನಲ್ಲಿ 'ರಾಜಕೀಯ ಬೇಡ' ಎಂಬ ಘೋಷಣೆ ಬರೆಸಿಕೊಂಡು ಒಂದು ಉತ್ತಮ ಜೀವನಕ್ಕಾಗಿ ಅದ್ಭುತ ಹೋರಾಟ ನಡೆಸುತ್ತಿರುವ ಜನತೆಯಲ್ಲಿ ಬಿಕ್ಕಟ್ಟು ತಂದು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಂದ ಜನತೆಯನ್ನು ದೂರವಿಡುವ ಆಳುವವರ್ಗದ ರಾಜಕೀಯ ಮಾಡುತ್ತಿದ್ದಾರೆ. ರೈತರು ಬೆಳೆವ ಹತ್ತಿಬಟ್ಟೆ ತಯಾರಿಸುವ ನರಗುಂದದ ಕಾರ್ಮಿಕರು ರೈತರಿಗೆ ಯೋಗ್ಯ ಬೆಲೆ ಸಿಗದಂತೆ ಮಾಡುವುದು, ಕಾರ್ಮಿಕರಿಗೆ ನ್ಯಾಯವೇತನ ಸಿಗದಂತೆ ಮಾಡುವುದು ಬಟ್ಟೆ ಗಿರಣಿ ಮಾಲೀಕರ ಹಿತಾಸಕ್ತಿ ಎಂಬುದನ್ನು ಸಾರಿದ್ದಾರೆ.

ಗುಂಡೂರಾಯರ ಬಗಲಲ್ಲಿದ್ದ ಇನ್ನೊಂದು ಕುತಂತ್ರವೆಂದರೆ ಹಳ್ಳಿಯವರನ್ನು. ವಿಶೇಷವಾಗಿ ಹಳ್ಳಿಯ ಪ್ರಭಾವಶಾಲಿ ಶ್ರೀಮಂತ ವಿಭಾಗವನ್ನು ಬಲಪ್ರಯೋಗದ ಬೆದರಿಕೆಯೊಡ್ಡಿ ಜಾಥಾದ ಸದಸ್ಯರಿಗೆ ಮಾರ್ಗದಲ್ಲಿ ಆಹಾರ, ವಸತಿ, ಸಿಗದಂತೆ ಮಾಡುವುದು. ಹೆಬಸೂರು ಗ್ರಾಮದಲ್ಲಿ ಛೇರ್‌ಮನ್ ಜಾಥಾ ಸದಸ್ಯರಿಗೆ ಆಹಾರ ಒದಗಿಸಲು ನಿರಾಕರಿಸಿದ. ಆದರೆ, ಬಡಜನರು. ವಿಶೇಷವಾಗಿ ಕುರುಬರ ಜನಾಂಗಕ್ಕೆ ಸೇರಿದ ಜನರು ಜಾಥಾ ಸದಸ್ಯರಿಗೆ ಉಣಬಡಿಸಿದರು. ಇದು ಆಳುವ ವರ್ಗದ ಇನ್ನೊಂದು ಹಸೀಸುಳ್ಳನ್ನು ಬಯಲಿಗೆಳೆದಿದೆ. ಆಳುವ ವರ್ಗಗಳು ಯೋಗ್ಯ ಪ್ರೋತ್ಸಾಹ ಬೆಲೆಯ ಬೇಡಿಕೆ ಮತ್ತು ಹೋರಾಟ ಕೇವಲ ಶ್ರೀಮಂತ ರೈತರದ್ದು ಮಾತ್ರ ಎಂಬ ಸುಳ್ಳು ಹರಡಿಸಿತ್ತು. ಹೆಬಸೂರು ಜಾಥಾದ ಹಾದಿಯಲ್ಲಿದ್ದ ಇತರ ಹಳ್ಳಿಗಳ ಬಡವರು ಅದ್ಭುತವಾಗಿ ಪ್ರತಿಕ್ರಿಯಿಸಿದರು. ಯಾಕೆಂದರೆ ಜಾಥಾದಲಿ ಅವರು ಕಂಡದ್ದು ತಮ್ಮ ಬಾಂಧವರನ್ನೇ.

ಜಾಥಾ ಹುಬ್ಬಳ್ಳಿಯನ್ನು ತಲುಪದಂತೆ ಪ್ರಯತ್ನಿಸುವ ಕುತಂತ್ರದಲ್ಲಿ ಸೋತಮೇಲೆ ಗುಂಡೂರಾವ್ ತನ್ನ ಬಂಟ ಕೆ. ಎಚ್. ಪಾಟೀಲರಿಗೆ ಜಾಥಾವನ್ನು ವಿಫಲಗೊಳಿಸುವ ಜವಾಬ್ದಾರಿ ಒಪ್ಪಿಸಿದರು. ಸಹಕಾರೀ ಬಟ್ಟೆ ಗಿರಣಿಯ ಮಾಲೀಕರಾದ ಕೆ. ಎಚ್. ಪಾಟೀಲ್ ರಾಣಿಬೆನ್ನೂರಲ್ಲಿ ತನ್ನ ಹೊಲಸು ಉಪಾಯವನ್ನು ಪ್ರಯತ್ನಿಸಿದರು. ಅವರ ಯಜಮಾನನಂತೆ ಇವರೂ ಜಾಥಾವನ್ನು ಸ್ವಲ್ಪ ವಿಳಂಬಗೊಳಿಸಿದರಷ್ಟೇ ಹೊರತು ಜಾಥಾವನ್ನು ತಡೆಯುವುದು ಅಥವಾ ವಿಫಲಗೊಳಿಸುವುದು ಅವರಿಂದಾಗಲಿಲ್ಲ. ರಾಣಿಬೆನ್ನೂರಲ್ಲಿ ಜನವರಿ 22ರಂದು ಜಾಥಾವನ್ನು ಸ್ವಾಗತಿಸಲೆಂದು ಸಭೆ ನಡೆಯಬೇಕಾಗಿದ್ದ ಜಾಗದಲ್ಲಿ ಅದೇ ಸಮಯದಲ್ಲಿ ಕೆ. ಎಚ್. ಪಾಟೀಲ್ ಒಂದು ಸಾವಿರ ಜನರನ್ನು ಬೇಕೆಂದೇ ಸೇರಿಸಿ ಸಭೆ ಮಾಡಿದರು. ಅವರ ಸಭೆ ವಿಸರ್ಜನೆಯಾಗುವವರೆಗೆ ಪಟ್ಟಣದ ಹೊರಗೇ ಇದ್ದ ಜಾಥಾ ರಾತ್ರಿ 10-30ಕ್ಕೆ ಪಟ್ಟಣ ಪ್ರವೇಶಿಸಿತು.

ನಿಜವಾಗಿ ಗುಂಡೂರಾಯರ ಈ ಮಂಗಚೇಷ್ಟೆ ಅವರ ಮೇಲೆ ತಿರುಗಿಬಿತ್ತು. ಮರುದಿನ ಬೆಳಿಗ್ಗೆ ಸ್ಥಳೀಯ ಕಾಂಗ್ರೆಸ್ (ಐ) ಎಂ.ಎಲ್.ಎ.ರವರೇ ಒಂದು ಭವ್ಯ ರೈತ ರ್‍ಯಾಲಿಯನ್ನು ಸಂಘಟಿಸಿದರು. ಈ ರ್‍ಯಾಲಿಯಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ನೊಗಕ್ಕೆ ಕಟ್ಟಿದ ಜೋಡಿ ಎತ್ತುಗಳು ಭಾಗವಹಿಸಿದ್ದವು. 23ರ ಮಧ್ಯಾಹ್ನ ಜಾಥಾದ ಊಟದ ವ್ಯವಸ್ಥೆ ಅವರೇ ಮಾಡಿದ್ದರು.

ತುಮಕೂರಿನಲ್ಲಿ ಖಡ್ಗ ಝಳಪಿಸುವವರೆಗೆ ಗುಂಡೂರಾಯರ ಉಪಾಯಗಳ ಖಜಾನೆ ಬರಿದಾಗಿತ್ತು.

ಜಾಥಾ ಅನುಭವ

ಹರಿಹರದಲ್ಲಿ 23-1-81ರ ರಾತ್ರಿ 11ಗಂಟೆಗೆ ತುಂಗಭದ್ರಾ ನದಿಯನ್ನು ದಾಟುವ ಹೊತ್ತಿಗೆ ಜಾಥಾದ ಶಕ್ತಿ ವರ್ಧಿಸಿತು. ಸಣ್ಣದಾದರೂ ಹೆಚ್ಚಾಗಿ ಕಾರ್ಮಿಕವರ್ಗದಿಂದಲೇ ಕೂಡಿದ ಹರಿಹರ ಪಟ್ಟಣ ಜಾಥಾಕ್ಕೆ ವೀರೋಚಿತ ಸ್ವಾಗತ ನೀಡಿತು. ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದವರಲ್ಲಿ ಅಖಿಲಭಾರತ ಕಿಸಾನ್ ಸಭಾದ ಪ್ರಧಾನಕಾರ್ಯದರ್ಶಿ ಹಾಗೂ ಎಂ. ಪಿ. ಯಾಗಿರುವ ಕಾಂ. ಚಾಥುನ್ನಿ ಮಾಸ್ಟರ್‌ರವರೂ ಒಬ್ಬರು. ಸಭೆ ನಡುರಾತ್ರಿ ಕಳೆದು 1-30ರ ವರೆಗೂ ನಡೆಯಿತು.

ನಂತರದ ಪಟ್ಟಣ ಬಟ್ಟೆಗಿರಣಿಗಳ ಕೇಂದ್ರವಾದ ದಾವಣಗೆರೆ. ಆ ಪಟ್ಟಣದ ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಇತರ ಜನಸಾಮಾನ್ಯರು 24ರಂದು ಸಂಜೆ 5ರಿಂದ 9 ಗಂಟೆಯವರೆಗೆ ರಸ್ತೆಗಳಲ್ಲಿ ನೆರೆದಿದ್ದರು- ಜಾಥಾವನ್ನು ಸೇರಲು, ಜಾಥಾದೆದುರು ಹಾಡಿ ಕುಣಿಯಲು. ಅಲ್ಲಿನ ಸಭೆಯಲ್ಲಿ ಸಿ.ಪಿ.ಐ.ನ ಕಾರ್ಯದರ್ಶಿ ಎನ್. ರಾಜಶೇಖರರೆಡ್ಡಿ, ಚಾಥುನ್ನಿ ಮಾಸ್ಟರ್ ಮತ್ತು ಹೊಸದಾಗಿ ಚುನಾಯಿತರಾದ ಕೆ. ಪಿ. ಸಿ. ಸಿ. (ಯು) ಅಧ್ಯಕ್ಷ ಶ್ರೀ ಡಿ. ಬಿ. ಚಂದ್ರೇಗೌಡ ಮಾತನಾಡಿದರು.

ನಾನು ಜಾಥಾವನ್ನು ಸೇರಿದ್ದು, ಅದು 28ರಂದು ಚಿತ್ರದುರ್ಗವನ್ನು ಬಿಟ್ಟು ಮರಡಿಹಳ್ಳಿಯಲ್ಲಿ ಠಿಕಾಣಿ ಹೂಡುವ ಮೊದಲು. ನಾನು ಚಿತ್ರದುರ್ಗ ಸೇರುವ ಹೊತ್ತಿಗೆ ಜಾಥಾ ಹೊರಟುಬಿಟ್ಟಿದ್ದರಿಂದ ಚಿತ್ರದುರ್ಗದಲ್ಲಿ ಲಾರಿಹಿಡಿಯಬೇಕಾಯಿತು. ನಾನು ಪ್ರಯಾಣಿಸುತ್ತಿದ್ದ ಲಾರಿಯನ್ನು ದಾರಿಯಲ್ಲಿ ಒಂದು ಗುಂಪು ಅಡ್ಡಗಟ್ಟಿತು. ಆ ಜನರು ಲಾರಿಯೆದುರು ತಮ್ಮ ಜೀವವನ್ನು ಪಣವೊಡ್ಡಿ ನಿಂತಿದ್ದು ತಮಗೆ ಜಾಗ ಪಡೆಯಲು ಅಲ್ಲ, ಜಾಥಾದಲ್ಲಿ ಹಿಂದುಳಿದ ಒಬ್ಬ ವಯಸ್ಸಾದ ಸದಸ್ಯನಿಗಾಗಿ. ಈ ಘಟನೆ ಜಾಥಾ ಮತ್ತು ಹಳ್ಳಿಗರ ನಡುವಿನ ಭಾವನಾಪೂರ್ಣ ಸಂಬಂಧಗಳು ಎಂತಹವು ಎಂಬುದನ್ನು ನನಗೆ ಪರಿಚಯ ಮಾಡಿಸಿತು.

ಚಿತ್ರದುರ್ಗದ ಜಿಲ್ಲೆಯ ಪ್ರತೀ ಜಾಗದಲ್ಲೂ ಜನರು ಅಗಾಧ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ತಮಟೆ, ಡೋಲು ಬಾರಿಸುತ್ತಾ ಸಾಂಪ್ರದಾಯಿಕವಾಗಿ ಸಿಂಗರಿಸಿದ ಎತ್ತಿನ ಗಾಡಿಗಳಲ್ಲಿ ಹಳ್ಳಿಗಳಿಂದ ಆಹಾರ ತುಂಬಿಸಿಕೊಂಡು ಬರುತ್ತಿದ್ದರು. ಜನತೆ ಜನತೆಯ ಅತಿಥ್ಯ ನಡೆಸಿತು. ಜನ ಬೇರೆಬೇರೆ ರೀತಿಯ ಆಹಾರವನ್ನು ಹಂಚಿಕೊಳ್ಳುತ್ತಿದ್ದರು. ಒಂದು ತೆರನ ಆಹಾರವನ್ನು ಕೊಟ್ಟು ಇನ್ನೊಂದನ್ನು ಪಡೆಯುತ್ತಿದ್ದರು. ಜಾತಿ, ಮತ, ಶ್ರೀಮಂತಿಕೆ ಇತ್ಯಾದಿ ಯಾವ ಭೇದಭಾವವೂ ಇರಲಿಲ್ಲ. ನಾನು ತುಮಕೂರಿನಲ್ಲಿ ಜಾಥಾ ಬಿಡುವ ಹೊತ್ತಿಗೆ ಜಾಥಾದ ಸದಸ್ಯರ ಸಂಖ್ಯೆ 2500ಕ್ಕೇರಿತ್ತು. ಊಟ ಮತ್ತು ವಿರಾಮಕ್ಕಾಗಿ ಜಾಥಾ ತಂಗಿದ ಜಾಗಗಳಲ್ಲೆಲ್ಲಾ ಹೊಸ ಸ್ವಯಂಸೇವಕರು ಸೇರಿಕೊಳ್ಳುತ್ತಿದ್ದರು. ಸಂಪೂರ್ಣ ಜಾಥಾ ಕಾಲ್ನಡಿಗೆಯಲ್ಲೇ ಸಾಗುತ್ತಿತ್ತು. ಯಾರೂ ಯಾವುದೇ ರೀತಿಯ ವಾಹನ ಉಪಯೋಗಿಸುತ್ತಿರಲಿಲ್ಲ. ಪ್ರತಿಯೊಂದು ಕಡೆ ಜಾಥಾದ ವಿರಾಮ ಸಭೆಗಳಾಗುತ್ತಿದ್ದವು. ಆ ಸಭೆಗಳಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಯು)ಹಾಗೂ ಲೋಕದಳದ ನಾಯಕರು ಮಾತನಾಡುತ್ತಿದ್ದರು.

ಶಿರಾದಲ್ಲಿ ಜಾಥಾ ತಲುಪಿದಾಗ, ಶಿರಾ ತಾಲ್ಲೂಕು ಬೀಡಿಕಾರ್ಮಿಕರ ಯೂನಿಯನ್ (ಸಿ.ಐ.ಟಿ.ಯು.)ನ ಸಾವಿರಾರು ಸದಸ್ಯರು, ಗಂಡಸರು ಹೆಂಗಸರೆನ್ನದೆ ಸ್ವಾಗತಿಸಿ ಅದನ್ನು ಸೇರಿದರು. ಸುಮಾರು ಒಂದುವರೆ ಗಂಟೆಕಾಲ ರಣಬಿಸಿಲಿನಲ್ಲಿ ರೈತ ಹೋರಾಟಕ್ಕೆ ಬೀಡಿಕಾರ್ಮಿಕರ ಬೆಂಬಲ ಸೂಚಿಸುವ ಘೋಷಣೆ ಕೂಗುತ್ತಾ, ಜಾಥಾ ಜತೆ ಬಂದರು. ಜಾಥಾ ಸದಸ್ಯರಿಗೆ ಲಕ್ಷಗಟ್ಟಲೆ ಬೀಡಿಗಳನ್ನು ಉಡುಗೊರೆ ನೀಡಿದರು.

ಹಿರಿಯೂರು ಬಳಿಯ ಅಡಿವಾಳದಲ್ಲಿ ಎಲ್ಲಾ ಜಾಥಾ ಸದಸ್ಯರಿಗೆ ಎಳನೀರು ಕೊಡಲಾಯಿತು. ಕೆಲವು ಕಡೆ ಡಜನುಗಟ್ಟಲೆ ಬಾಳೆಹಣ್ಣುಗಳನ್ನು ಕೊಡಲಾಯಿತು. ಹೆಚ್ಚುಳಿದ ಚಪಾತಿ ಆಹಾರ ಸಾಮಗ್ರಿಗಳನ್ನು 2 ಲಾರಿಗಳಲ್ಲಿ ಒಯ್ಯಲಾಗುತ್ತಿತ್ತು.

"ದೇಶ ಎಂದು ಗೆದ್ದು ಕೊಡುತ್ತೀರಿ ?"

ಜಾಥಾದಲ್ಲಿ ಭಾಗವಹಿಸಿದ ಜನರ ವಿವರ ನೀಡದೆ ಈ ಲೇಖನ ಅಪೂರ್ಣವೇ ಸರಿ. ಜಾಥಾದಲ್ಲಿದ್ದವರಲ್ಲಿ ಶೇಕಡಾ 80ಕ್ಕೂ ಹೆಚ್ಚುಜನ ಬಡ ರೈತರು. ಉಳಿದವರು ಶ್ರೀಮಂತ ರೈತರು. ಬೇರೆಬೇರೆ ಕಸುಬುದಾರರು, ರಾಜಕೀಯ ಕಾರ್ಯಕರ್ತರು, ಬುದ್ಧಿಜೀವಿಗಳು ಇತ್ಯಾದಿ. ಜಾಥಾದಲ್ಲಿ ಬದಲಿಸಲು ಜೊತೆ ಬಟ್ಟೆ ಇಲ್ಲದ ಅತಿ ಬಡವರೂ ಹಲವರಿದ್ದರು. ಎಲ್ಲರ ಕಾಲುಗಳಲ್ಲಿ ಬೊಕ್ಕೆ ಎದ್ದಿತ್ತು. ಕೆಲವರದರಲ್ಲಿ ರಸಿಗೆ ತುಂಬಿದರೆ, ಇನ್ನೂ ಕೆಲವರದರಲ್ಲಿ ರಕ್ತ ಸುರಿಯುತ್ತಿತ್ತು. ಶೇಕಡಾ 10 ರಷ್ಟು ಜನ ಚಪ್ಪಲು ಸಹ ಇಲ್ಲದೆ ನಡೆಯುತ್ತಿದ್ದರು. ರಣಬಿಸಿಲು, ಟಾರು ರಸ್ತೆಗಳು ನಿರ್ದಯವಾಗಿ ಜಾಥಾದವರನ್ನು ದಂಡಿಸುತ್ತಿದ್ದವು. ಆದರೂ ಎಲ್ಲರಲ್ಲೂ ಧೈರ್ಯ ಮತ್ತು ದೃಢನಿಶ್ಚಯವಿತ್ತು. ಗುಂಡೂರಾಯರ ಸರ್ಕಾರವನ್ನು ಉರುಳಿಸುವ ಛಲವಿತ್ತು.

ತುಮಕೂರು ಜಿಲ್ಲೆಯ ಕುಳ್ಳಂಬೆಳ್ಳ ಎಂಬಲ್ಲಿ ಹಲವು ಮಹಿಳೆಯರು ಜಾಥಾ ಮೆರವಣಿಗೆ ಸೇರಿದರು. ನಾನು ಹೂವಿನ ಹಾರಗಳನ್ನು ಅವರಿಗೆ ಕೊಡಲು ಹೋದಾಗ ಅವರಲ್ಲಿ ಒಬ್ಬಳೆಂದಳು "ಹೋರಾಟಗಾರರು ಹಾಕಿಕೊಂಡ ಹೂವಿನ ಹಾರಗಳನ್ನು ಪಡೆಯುವ ನಾವು ಧನ್ಯರು. ಆದರೆ ನೀವು ದೇಶವನ್ನು ಗೆದ್ದು ಎಂದು ನಮಗೆ ಕೊಡುತ್ತೀರಿ?". ಇನ್ನು ಅದಕ್ಕೆ ಹೆಚ್ಚು ಸಮಯವಿಲ್ಲ ಎಂದು ನಾನು ಹೇಳಿದೆ. ಜಾಥಾದ ನಮಗೆ ಶುಭಾಶಯ ಕೋರಲು, ಆಹಾರ ಕೊಡಲು, ಬೀಳ್ಕೊಡಲು ಬಂದ ಸಾವಿರಾರು ಜನರ ಮನಸ್ಸಿನಲ್ಲಿ ಇದೇ ಪ್ರಶ್ನೆ ಸುಳಿಯುತ್ತಿತ್ತು. ಜನರ ಮನೋಸ್ಥಿತಿ ಗ್ರಹಿಸಬಲ್ಲ ಯಾರೂ ಇದನ್ನು ಗಮನಿಸಬಹುದಿತ್ತು. ಇನ್ನು ಹಲವು ಮಹಿಳೆಯರು ನಮಗೆ ಚಿಕ್ಕಮಕ್ಕಳ ಆರೈಕೆಯ ಜವಾಬ್ದಾರಿ ಇದೆ. ಇಲ್ಲದಿದ್ದರೆ ನಾವೂ ಜಾಥಾ ಸೇರುತ್ತಿದ್ದೆವು ಎಂದು ಹೇಳಿದರು. ತಮ್ಮ ಹಕ್ಕುಗಳನ್ನು ರಕ್ಷಿಸಲು ಹೋರಾಟಕ್ಕೆ ಜನರು ಸಿದ್ಧವಾಗಿದ್ದಾರೆಂದು ನನಗೆ ಖಚಿತವಾಯಿತು.

—ವಿ.ಜೆ.ಕೆ. ನಾಯರ್

ಮಹಾರಾಷ್ಟ್ರದ ರೈತರ ಮಹಾಯಾತ್ರೆ

(2ನೇ ಪುಟದಿಂದ)

ತರಾದರು. ಬಹಳ ಕಡೆ ಲಾಠೀ ಪ್ರಹಾರ ನಡೆಯಿತು. ಕೊಲ್ಹಾಪುರದಲ್ಲಿ ಗೋಲಿಬಾರು ಕೂಡಾ ನಡೆಯಿತು. ನಾಗಪುರದಿಂದ ಹೊರಟ ಎಲ್ಲಾ ಬಸ್ಸುಗಳು 15 ಕಿಲೋಮೀಟರುಗಳಷ್ಟೂ ಹೋಗಲಾಗದೆ ವಾಪಾಸಾದವು. ಜಲಗಾಂವ್, ತಾಣೇಗಳಲ್ಲಿ ಯಾವ ಬಸ್ಸೂ ಹೊರಡಲಿಲ್ಲ. ಮುಂಬೈಗೆ ಆದಿನ ಹೊರಊರುಗಳಿಂದ ಯಾವ ಬಸ್ಸೂ ಬರಲಿಲ್ಲ.

ರೈತರ ದೀರ್ಘ ಯಾತ್ರೆ ಅಥವಾ "ದಿಂಡೀ"

ರೈತರ ಆಂದೋಳನದ ಅಂಗವಾಗಿ ಎಡ ಮತ್ತು ಪ್ರಜಾಪ್ರಭುತ್ವವಾದೀ ಪಕ್ಷಗಳು ಘೋಷಿಸಿದ ಮಹತ್ವಪೂರ್ಣ ಕಾರ್ಯಕ್ರಮವೆಂದರೆ ನಾಸಿಕ್ ಜಿಲ್ಲೆಯ ಜಲಗಾಂವ್‌ನಿಂದ ನಾಗಪುರದವರೆಗೆ ಸುಮಾರು 450ಕಿ.ಮಿ. ದೂರದ ದೀರ್ಘಯಾತ್ರೆ. ಇದನ್ನು 'ದಿಂಡೀ' ಎಂದು ಹೆಸರಿಸಲಾಗಿತ್ತು. 'ದಿಂಡೀ' ಎಂಬುದು ಮಹಾರಾಷ್ಟ್ರದಲ್ಲಿ ಒಂದು ಪುರಾತನ ಸಾಂಸ್ಕೃತಿಕ ರೂಪ. 'ದಿಂಡೀ'ಯ ಮೂಲಾರ್ಥ ಯಾವುದೇ ಒಂದು ಪವಿತ್ರ ಕ್ಷೇತ್ರಕ್ಕೆ ಹೊರಟ ಯಾತ್ರಿಕರ ಮೆರವಣಿಗೆಯೆಂದು.

ಡಿಸೆಂಬರ್ 7ರಂದು ಈ ಜಾಥಾ ಜಲಗಾಂವ್‌ನಿಂದ ಅಮಿತೋತ್ಸಾಹದ ವಾತಾವರಣದಲ್ಲಿ ಆರಂಭವಾಯಿತು. ಡಿಸೆಂಬರ್ 6ರಂದೇ ರಾಜ್ಯದ ಮೂಲೆ ಮೂಲೆಗಳಿಂದ ಬಂದ ರೈತರು, ಕೃಷಿಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಹೆಂಗಸರು, ಯುವಕರು, ವಿದ್ಯಾರ್ಥಿಗಳಿಂದ ಜಲಗಾಂವ್ ತುಂಬಿಹೋಗಿತ್ತು. ಆ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ ಜಲಗಾಂವ್‌ನ ಚರಿತ್ರೆಯಲ್ಲೇ ಕಾಣದಷ್ಟು ಜನ ಭಾಗವಹಿಸಿದ್ದರು. ಈ ಸಭೆ ಸುಮಾರು ನಾಲ್ಕು ಗಂಟೆಗಳ ಕಾಲ ನಡೆಯಿತು. ಡಿಸೆಂಬರ್ 7ರಂದು ಜಲಗಾಂವ್‌ನಿಂದ ಹೊರಡುವ ಮೊದಲು ಪಟ್ಟಣದಲ್ಲಿ ನಡೆದ ಮೆರವಣಿಗೆಗೆ ಜನಸಾಮಾನ್ಯರಿಂದ ಅಮಿತೋತ್ಸಾಹದ ಪ್ರತಿಕ್ರಿಯೆ ದೊರೆಯಿತು. ಜಲಗಾಂವ್‌ನಿಂದ ಜಾಥಾವನ್ನು ಬೀಳ್ಕೊಡಲು ಹತ್ತುಸಾವಿರ ಜನ ಬಂದಿದ್ದರು.

ಜಾಥಾ ಹೊರಟ ರೈತರು ಸಾಂಪ್ರದಾಯಿಕ ಬಿಳಿ ಮುಂಡಾಸು ಧರಿಸಿ 'ಶೇತ್‌ಕರೀ-ಶೇತ್‌ಮಜೂರ್ ದಿಂಡೀ' (ರೈತ-ಕೃಷಿಕಾರ್ಮಿಕರ ಜಾಥಾ) ಎಂದು ಬರೆದ ಬ್ಯಾನರ್‌ಗಳನ್ನು ಹಿಡಿದುಕೊಂಡು ರೈತ-ಕಾರ್ಮಿಕರ ಐಕ್ಯತೆ ಹಾಗೂ ತಮ್ಮ ಬೇಡಿಕೆಗಳ ಘೋಷಣೆ ಹಾಕುತ್ತಾ ಸಾಗುತ್ತಿದ್ದರು. ಹೋದಲೆಲ್ಲಾ ಆರತಿ, ಪುಷ್ಪವೃಷ್ಟಿಯ ಮೂಲಕ ಜನಸಾಮಾನ್ಯರು ರೈತಯಾತ್ರಿಕರನ್ನು ಸ್ವಾಗತಿಸುತ್ತಿದ್ದರು. ಸ್ಥಳೀಯ ರೈತರು ಇವರ ಊಟ-ವಸತಿವ್ಯವಸ್ಥೆ ಮಾಡುತ್ತಿದ್ದರು. ಅಲ್ಲಲ್ಲಿ ನಡೆದ ಸಾರ್ವಜನಿಕ ಸಭೆಗಳಲ್ಲಿ ಭಾರೀ ಜನ ಸೇರುತ್ತಿದ್ದರು. ಕಾಂಗ್ರೆಸ್ (ಐ)ನ ಭದ್ರಕೋಟೆಯೆನಿಸಿದ ವಿದರ್ಭ ಕ್ಷೇತ್ರದಲ್ಲೂ ಜಾಥಾಕ್ಕೆ ಎಣಿಕೆಗೆ ಮೀರಿದ ಉತ್ತಮ ಪ್ರತಿಕ್ರಿಯೆ ದೊರೆಯಿತು. ಜಾಥಾಕ್ಕೆ ಎಲ್ಲಾ ಕಡೆ ದೊರೆತ ಸ್ವಾಗತವನ್ನು ಕಂಡು ಹೆದರಿದ ಸರ್ಕಾರ ನಾಗಪುರದಲ್ಲಿ ನಡೆಯುತ್ತಿದ್ದ ವಿಧಾನಸಭೆಯ ಅಧಿವೇಶನದ ಅವಧಿಯನ್ನು ಎರಡು ದಿನಗಳಷ್ಟು ಕಮ್ಮಿಮಾಡಿ ನಾಯಕರನ್ನೆಲ್ಲಾ ಬಂಧಿಸಿ ಜಾಥಾವನ್ನು ವಿಫಲಗೊಳಿಸಬೇಕೆಂದು ಪ್ರಯತ್ನಿಸಿತು. ಪೋಲೀಸ್ ಬಂದೋಬಸ್ತನ್ನು ವಿಪರೀತಗೊಳಿಸಿತು. ಆದರೂ ಮಹಾರಾಷ್ಟ್ರದ ಒಂದು ತುದಿಯಿಂದ ಇನ್ನೊಂದು ತುದಿಗೆ ಹೊರಟ 5000 ರೈತರ ಈ ಜಾಥಾ ವಿಧಾನಸಭಾ ಅಧಿವೇಶನದ ಕೊನೆಯ ದಿನದಂದು ನಾಗಪುರ ತಲುಪುವುದರಲ್ಲಿ ಯಶಸ್ವಿಯಾಯಿತು.

ಈ ಜಾಥಾದ ಆರಂಭದಿಂದ ಅಂತ್ಯದವರೆಗೆ ಸಿ.ಪಿ.ಐ.(ಎಂ.) ಪರವಾಗಿ 150ಕ್ಕೂ ಹೆಚ್ಚು ಕಾಮ್ರೇಡುಗಳು ಭಾಗವಹಿಸಿದರು. ಇವರಲ್ಲದೆ ಅಲ್ಲಲ್ಲಿ ಯಾತ್ರೆಯ ವಿವಿಧ ಹಂತಗಳಲ್ಲಿ ನೂರಾರು ಮಂದಿ ಪಕ್ಷದ ಪರವಾಗಿ ಭಾಗವಹಿಸಿದರು. ಈ ಕಾಮ್ರೇಡ್‌ಗಳಲ್ಲಿ 75 ಮಂದಿ ಮುಂಬೈಯಿಂದ ಬಂದ ಕೈಗಾರಿಕಾ ಕಾರ್ಮಿಕರು, 50 ಮಂದಿ ತಾಣೆ ಹಾಗೂ ನಾಸಿಕ್‌ನಿಂದ ಬಂದ ಆದಿವಾಸಿಗಳು. ಇವರು ತಮ್ಮ ಸಾಂಪ್ರದಾಯಿಕ ಉಡುಗೆಯಾದ ಕೆಂಪು ಶಾಲನ್ನು ಧರಿಸಿದ್ದರು. ಉಳಿದ ಕಾಮ್ರೇಡುಗಳು ಮರಾಠವಾಡಾ, ಸೋಲಾಪುರ, ಇಚಲ್‌ಕರಂಜಿ, ಕೊಲ್ಹಾಪುರ ಇತ್ಯಾದಿ ಕಡೆಗಳಿಂದ ಬಂದವರು.

ಜಾಥಾದ ಸಾಧನೆಗಳು

ರೈತರ ಈ 'ದಿಂಡೀ' ಮಹತ್ವಪೂರ್ಣ ಯಶಸ್ಸುಗಳಿಸಿತೆಂದು ಎಲ್ಲಾ ರಾಜಕೀಯ ವಿಶ್ಲೇಷಕರು ಒಪ್ಪಿಕೊಳ್ಳುತ್ತಾರೆ. ಈ ಜಾಥಾದ ಮುಖ್ಯ ಎರಡು ಸಾಧನೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮೊದಲನೆಯದಾಗಿ, ಈ ಜಾಥಾ ಜನರಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಒಂದು ಸಾಮೂಹಿಕ ಎಚ್ಚರಿಕೆ ಮೂಡಿಸಿತು; ವಿಶೇಷವಾಗಿ ರೈತರು ಹಾಗೂ ಕೃಷಿಕಾರ್ಮಿಕರಲ್ಲಿ. ಜನರು ತಮ್ಮ ಸಮಸ್ಯೆಗಳ ಬಗ್ಗೆ ಹೆಚ್ಚು ಪ್ರಜ್ಞಾವಂತರಾಗುತ್ತಿದ್ದಾರೆ.

ಈ ದೀರ್ಘ ಯಾತ್ರೆಯಾದ್ಯಂತ ಭಾಷಣಕಾರರು ರೈತ-ಕಾರ್ಮಿಕರ ಐಕ್ಯತೆಯ ವಿಚಾರವನ್ನು ಪಸರಿಸಿದರು ಹಾಗೂ ರೈತ-ಕಾರ್ಮಿಕರ ನಡುವೆ ಒಡಕುಂಟುಮಾಡಲು ಪ್ರಯತ್ನಿಸುತ್ತಿರುವವರ ಬಗ್ಗೆ ಜಾಗೃತರಾಗಿರುವಂತೆ ಎಚ್ಚರಿಸಿದರು. ಈ ನಿಲುವಿಗೆ ಎಲ್ಲಾ ಕಡೆ ಸ್ವಾಗತ ದೊರೆಯಿತು. ಜಾಥಾದ ಎರಡನೆಯ ಮುಖ್ಯ ಸಾಧನೆಯೆಂದರೆ ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗದ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದ್ದು. ಕೇವಲ ಒಂದು ವರ್ಷದ ಹಿಂದೆ ಈ ವಿಚಾರವನ್ನು ಪತ್ರಿಕೆಗಳು ಹಾಗೂ ರಾಜಕೀಯ ವಿಶ್ಲೇಷಕರು ಗೇಲಿಮಾಡುತ್ತಿದ್ದರು. ಆಗಸ್ಟ್ 31ರ ಸಮಾವೇಶ ನಂತರದ ಸಂಯುಕ್ತ ಕಾರ್ಯಕ್ರಮಗಳು ಈಗ ಈ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿವೆ.

ರೈತರ ಚಳುವಳಿ, ಕಾಂಗ್ರೆಸ್ (ಐ) ಮತ್ತು ಶರದ್ ಜೋಶಿ

ರೈತರ ಚಳುವಳಿ ಮಹಾರಾಷ್ಟ್ರದ ಕಾಂಗ್ರೆಸ್ (ಐ)ನಲ್ಲಿ ತೀವ್ರ ಭಿನ್ನಾಭಿಪ್ರಾಯ ಮೂಡಿಸಿದೆ. ಕಾಂಗ್ರೆಸ್ (ಐ) ಈ ವಿಚಾರದಲ್ಲಿ ಪರಸ್ಪರ ಒಬ್ಬರನ್ನೊಬ್ಬರು 'ರೈತವಿರೋಧೀ' ಎಂದು ಆಪಾದಿಸುವ ಎರಡು ಪರಸ್ಪರ ವಿರೋಧೀ ಗುಂಪುಗಳಲ್ಲಿ ಹಂಚಿಹೋಗಿರುವಂತೆ ಕಾಣುತ್ತದೆ. ಒಂದೆಡೆ ಮುಖ್ಯಮಂತ್ರಿ ಅಂತುಲೇ, ಕಾರ್ಮಿಕ ಮಂತ್ರಿ ಟಿಡ್ಕೆ ಹಾಗೂ ಕೇಂದ್ರ ಮಂತ್ರಿ ವಸಂತ್‌ಸಾಠೆ ಈ ಚಳುವಳಿಯನ್ನು ತೀವ್ರವಾಗಿ ವಿರೋಧಿಸಿದರೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಐ)ನ ಕಾರ್ಯದರ್ಶಿ ಹಾಗೂ ಮಾಜೀ ಮುಖ್ಯಮಂತ್ರಿ ವಸಂತ್ ದಾದಾ ಪಾಟೀಲ್ ರೈತರ ಬೇಡಿಕೆಗಳನ್ನು ಬೆಂಬಲಿಸಿದ್ದಾರೆ. ಹಲವು ಹಿರಿಯ ಕಾಂಗ್ರೆಸ್ (ಐ) ನಾಯಕರು ಪಾಟೀಲರ ನಿಲುವನ್ನು ಸಮರ್ಥಿಸಿದ್ದಾರೆ. ಹಿಂದೆ ಹೇಳಿದಂತೆ ಶೇತಕರೀ ಸಂಘಟನ್‌ನ ಒಬ್ಬ ನಾಯಕರಾದ ಮಾಧವರಾವ್ ಬೋರಸ್ತೆ ಕಾಂಗ್ರೆಸ್ (ಐ)ನವರು. ಬಹುಶಃ ಕಾಂಗ್ರೆಸ್ (ಐ)ನೊಳಗಿನ ಗುಂಪುಗಾರಿಕೆ ಈ ಪರಸ್ಪರ ವಿರೋಧಾಭಿಪ್ರಾಯದ ನಿಜವಾದ ಕಾರಣವಾಗಿರಬೇಕು.

ರೈತರ ಚಳುವಳಿ ಆರಂಭಿಸಿದ ಶರದ್‌ಜೋಶಿಯವರೂ ರೈತರ ಜಾಥಾವನ್ನು ಕಾಂಗ್ರೆಸ್ (ಐ)ನ ಸರ್ಕಾರೀ ನಾಯಕರಂತೆ ವಿರೋಧಿಸಿ ಗೇಲಿಮಾಡುತ್ತಿದ್ದರು. ಬಹುಶಃ ಈ ರೀತಿ ಶರದ್‌ಜೋಶಿ ಮತ್ತು ಕಾಂಗ್ರೆಸ್ (ಐ) ಸರ್ಕಾರದ ನಾಯಕರು ಒಂದೇ ಅಭಿಪ್ರಾಯ ಹೊಂದಿರುವುದು ಆಕಸ್ಮಿಕವೇನಲ್ಲ. ಶರದ್‌ಜೋಶಿಯ ಶೇತಕರೀ ಸಂಘಟನೆ ಕೃಷಿಕಾರ್ಮಿಕರ ಕನಿಷ್ಟ ವೇತನದ ಬೇಡಿಕೆಯನ್ನು ಮುಂದಿಡಲಿಲ್ಲ ಎಂಬುದನ್ನು ಹಿಂದೆ ಹೇಳಿದೆ. ಶ್ರೀಮಂತ ರೈತರ ಸಂಘಟನೆಯಾದ ಅದು ಹಾಗೆ ಮಾಡುವುದು ಸಾಧ್ಯವಿರಲಿಲ್ಲ. ನವೆಂಬರ್ 27ರಂದು ಸರ್ಕಾರ ಕೆಲವು ಸಣ್ಣಪುಟ್ಟ ರಿಯಾಯಿತಿಗಳನ್ನು ಪ್ರಕಟಿಸಿದ ಕೂಡಲೇ ನಾಸಿಕ್‌ನಲ್ಲಿ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ಶರದ್‌ಜೋಶಿಯವರ ಮುಂದಿನ ಕ್ರಮ ಏನು ಎಂಬುದು ಕುತೂಹಲಕಾರಿ. ಆದರೆ ಈ ಮಧ್ಯೆ ಎಡ ಮತ್ತು ಪ್ರಜಾಪ್ರಭುತ್ವವಾದೀ ಪಕ್ಷಗಳ ಸತತ ಕ್ರಮಗಳಿಂದಾಗಿ ರೈತಚಳುವಳಿಯ ಆರಂಭಶಕ್ತಿ ಈಗ ಅವರೊಬ್ಬರ ಕೈಯಲ್ಲೇ ಉಳಿದಿಲ್ಲ. ಅಲ್ಲದೆ ಅವರು ಇನ್ನೂ ಚಳುವಳಿ ಎಲ್ಲಾ ರಾಜಕೀಯ ಪಕ್ಷಗಳಿಂದ ದೂರವಿರಬೇಕೆಂಬ ಮಾತನ್ನು ಪುನರುಚ್ಚರಿಸುತ್ತಿದ್ದಾರೆ. ಕಾಂಗ್ರೆಸ್ (ಐ)ನಾಯಕತ್ವವನ್ನು ಧಿಕ್ಕರಿಸಿ ಆ ಪಕ್ಷದ ಕೆಲವು ಕಾರ್ಯಕರ್ತರು ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗಕ್ಕೆ ಸೇರಿರದ ಭಾರತೀಯ ಜನತಾಪಕ್ಷದ ಎಂ.ಎಲ್.ಎ.ಗಳೂ ಕಾರ್ಯಕರ್ತರೂ ರೈತರ ಜಾಥಾದಲ್ಲಿ ಸೇರಿರುವಾಗ ರಾಜಕೀಯ ಪಕ್ಷಗಳು ದೂರವಿರಬೇಕೆಂಬ ಮಂತ್ರವನ್ನು ಮತ್ತೆಮತ್ತೆ ಜಪಿಸುವುದು ತೀರಾ ಅರ್ಥಹೀನವಾಗುತ್ತದೆ, ಅಸಂಬದ್ಧವಾಗುತ್ತದೆ.

●

ಕರ್ನಾಟಕ ರಾಜ್ಯದಲ್ಲಿ ರೈತರ ಬೇಡಿಕೆ ಅಂದು ಮತ್ತು ಇಂದು

ನಮ್ಮ ದೇಶದಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ರೈತರ ಸಂಘಟನೆ ಹಾಗೂ ಹೋರಾಟಗಳು ಪ್ರಾರಂಭವಾದಾಗ ವಿಸ್ತೃತವಾದ ಪ್ರಾಧಾನ್ಯ ಪ್ರಶ್ನೆಗಳೆಂದರೆ 1) ಉಳುವವನಿಗೇ ಭೂಮಿ ಸಿಗಬೇಕು. 2) ಹೊಲದಲ್ಲಿ ದುಡಿಯುವ ರೈತನಿಗೆ ಗೇಣೀದಾರನೆಂಬ ಹಕ್ಕು ಇರಬೇಕು. 3) ಗೇಣಿದಾರನಿಗೆ ಬೆಳೆಯಲ್ಲಿ ಸಮಪಾಲು ಸಿಗಬೇಕು ಎಂಬುವುಗಳಾಗಿದ್ದವು. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಮಂಗಳೂರು, ಕೋಲಾರ ಜಿಲ್ಲೆಗಳಲ್ಲಿ 1938 ರಿಂದಲೇ ಈ ಬೇಡಿಕೆಗಳ ಸಲುವಾಗಿ ರೈತಸಂಘ ಕಟ್ಟಿ ಹಲವಾರು ಹೋರಾಟಗಳನ್ನು ನಡೆಸಲಾಗಿತ್ತು. ಪೇಟೆ-ಪಟ್ಟಣಗಳಲ್ಲಿ ವಾಸಮಾಡುತ್ತಿದ್ದ ಭೂಮಾಲಕರು, ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರೂ ಮಣ್ಣು, ಬೀಜ, ಬೆಳೆಯ ಅನುಭವವಿಲ್ಲದ ಭೂಮಾಲಕರೂ ಆ ಕಾಲದಲ್ಲಿ ಬಹುಸಂಖ್ಯೆಯಲ್ಲಿದ್ದರು. ರೈತ ಗುಲಾಮನಂತೆ ಹೊಲದಲ್ಲಿ ದುಡಿದು, ಬೆಳೆಯನ್ನೆಲ್ಲಾ ಮಾಲಕನಿಗೆ ಒಪ್ಪಿಸಿ ಅವನ ಕೃಪಾಕಟಾಕ್ಷದಲ್ಲಿ ಬದುಕುವುದೇ ದುಡಿಯುವ ರೈತನ ಬಾಳು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸ್ವಲ್ಪ ಎಚ್ಚೆತ್ತ ರೈತ ಸಂಘಟಿತನಾಗಿ ಬೆಳೆಯ ಪಾಲಿಗಾಗಿ ಹೋರಾಡಿ ಮುಂಬಯಿ ಸರಕಾರ ರೈತನಿಗೆ ನಾಲ್ಕರಲ್ಲೊಂದು ಪಾಲು ಸಿಗುವಂತೆ ಮಾಡಿಕೊಂಡ. ಆಗಿನ ಮದ್ರಾಸ್ ಮತ್ತು ಹಳೇ ಮೈಸೂರುಗಳಲ್ಲೂ ರೈತನಿಗೆ ಸ್ವಲ್ಪ ಪಾಲು ಸಿಗಲು ಸಾಧ್ಯವಾಯಿತು. 1940-50ರ ಮಧ್ಯೆ ನಡೆಸಿದ ಹೋರಾಟದ ಫಲವಾಗಿ ರೈತನಿಗೆ ಬೆಳೆಯಲ್ಲಿ ಅರ್ಧಪಾಲು ಪಡೆಯಲು ಸಾಧ್ಯವಾಯಿತು.

ಈ ರೀತಿ ರೈತರ ಹೋರಾಟ ನಡೆದಾಗ, ಅವನಿಗೆ ಅಲ್ಪ-ಸ್ವಲ್ಪ ಪ್ರತಿಫಲ ಸಿಗಲು ಪ್ರಾರಂಭವಾದಾಗ ಭೂಮಾಲಕರು ಹಲವಾರು ವರ್ಷಗಳಿಂದ ದುಡಿಯುತ್ತಿದ್ದ ರೈತರನ್ನು ಓಡಿಸಲು ಪ್ರಾರಂಭ ಮಾಡಿದ್ದರಿಂದ, "ಸಂರಕ್ಷಿತ ರೈತ"ರನ್ನಾಗಿ ಪರಿಗಣಿಸಬೇಕೆಂದು ಘೋಷಣೆಯನ್ನು ಮುಂದೆ ಮಾಡಿ ರೈತಸಂಘ ಹೋರಾಟ ಮಾಡಿದ ಪ್ರತಿಫಲವಾಗಿ ಭೂಸುಧಾರಣಾ ಕಾಯಿದೆಗಳಲ್ಲಿ ತಿದ್ದುಪಡಿ ತಂದು "ಸಂರಕ್ಷಿತ ರೈತ" ನನ್ನು ಹೊಲದಿಂದ ಓಡಿಸಬಾರದೆಂಬ ಘೋಷಣೆ ಹೊರಡಿಸಲು ಸಾಧ್ಯವಾಯಿತು.

ದೊಡ್ಡ ಭೂಮಾಲಕವರ್ಗದ ಕಾಂಗ್ರೆಸ್ ಸರಕಾರ ರೈತ ಚಳುವಳಿಗೆ ಮಣಿದು ಸಂರಕ್ಷಿತ ರೈತನಿಗೆ ಭೂಮಾಲಕರ ಭೂಮಿಯಲ್ಲಿ ದುಡಿಯುವ ಹಕ್ಕು ಕೊಡಿಸಾಗಲೀ, ಅದೇ ಕಾಯಿದೆಯಲ್ಲಿ ರೈತ ಸ್ವಯಂಸ್ಫೂರ್ತಿಯಿಂದ ತನ್ನ ಹಕ್ಕನ್ನು ಭೂಮಾಲಕರಿಗೆ ಬಿಟ್ಟುಕೊಡಬಹುದೆಂಬ ಅಂಶವನ್ನು ಸೇರಿಸಿದ್ದರಿಂದ; ಭೂಮಾಲಕವರ್ಗ ಹಲವಾರು ಕುಟಿಲನೀತಿಗಳನ್ನು ಮುಂದೆ ಮಾಡಿ ತಾತನ ಕಾಲದಿಂದಲೂ ಅದೇ ಹೊಲದಲ್ಲಿ ದುಡಿಯುತ್ತಾ ಬರುತ್ತಿದ್ದ ರೈತರಿಂದ ರಾಜೀನಾಮೆ ಪತ್ರಗಳನ್ನು ಸ್ವೀಕರಿಸಿ ಅವರನ್ನೆಲ್ಲ ಗತಿಗೇಡು ಮಾಡಿದಾಗ ಸಂಘಟಿತ ರೈತ ವರ್ಗ ಅದರ ವಿರುದ್ಧ ಸತತ ಹೋರಾಟ ನಡೆಸಬೇಕಾಯಿತು. ಅದರ ಫಲವಾಗಿ ಹಲವಾರು ರೈತರು ಗೂಂಡಾಗಿರಿಗೆ ತುತ್ತಾದುದಲ್ಲದೆ, ಜೀವ ಕಳೆದುಕೊಳ್ಳುವ ಗಂಭೀರ ಪರಿಸ್ಥಿತಿಯೂ ಉಂಟಾಗಿತ್ತು.

ತನ್ನ ಹೋರಾಟದಿಂದ ನಾಲ್ಕರಲ್ಲಿ ಒಂದು ಪಾಲಿನಿಂದ, ಅರ್ಧಪಾಲು ಬೆಳೆಯಲ್ಲಿ ಪಾಲು ಪಡೆದು, ಸಂರಕ್ಷಿತ ರೈತನೆಂಬ ಹಕ್ಕನ್ನು ಪಡೆದ ರೈತರು ನಾಲ್ಕರಲ್ಲಿ ಮೂರು ಪಾಲು ಬೆಳೆ ಸಿಗಬೇಕೆಂದೂ, ಭೂಮಿಯ ಮಾಲಕತ್ವ ಸಿಗಬೇಕೆಂದೂ ಹೋರಾಟ ನಡೆಸಿದರು. ಭೂಮಾಲಕರನ್ನೊಳಗೊಂಡ ಕಾಂಗ್ರೆಸ್ ಸರಕಾರ ಸಂಘಟಿತ ರೈತ ಚಳುವಳಿಗೆ ಮಣಿದು ರೈತರ ಬೇಡಿಕೆಯನ್ನು ಒಪ್ಪಿಕೊಳ್ಳುವಂಥ ತಿದ್ದುಪಡಿಗಳನ್ನು ಮಾಡುವಂತಾಯಿತು.

ರೈತರ ಸತತವಾದ ಹೋರಾಟದ ಫಲವಾಗಿಯೇ ಭೂಸುಧಾರಣೆಯಲ್ಲಿ ತಿದ್ದುಪಡಿಯಾಗಿ ಕೆಲವರಿಗಾದರೂ ಭೂಮಿಯ ಹಕ್ಕು ಸಿಗುವಂತಾಗಿದೆ.

(ಕಡೆಯ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ ರೈತರ ಬೇಡಿಕೆ-ಅಂದು ಮತ್ತು ಇಂದು

(11ನೇ ಪುಟದಿಂದ)

ಹಲವಾರು ಕಡೆ ಹೋರಾಟದ ಮೂಲಕವೇ ರೈತರು ಭೂಮಾಲಕರ ಭೂಮಿಯ ಕಬಜೇದಾರರಾಗಿದ್ದಾರೆ.

ಭೂಮಸೂದೆ ಭೂಮಾಲಕವರ್ಗದ ಹಿತಸಾಧಿಸುವ ಕಾಂಗ್ರೆಸ್ ಸರ್ಕಾರದಿಂದ ತಯಾರಿಸಲ್ಪಟ್ಟಿರುವುದರಿಂದ ಅದರಲ್ಲಿ ಹಲವಾರು ಲೋಪದೋಷಗಳಿದ್ದು, ಅದರ ಲಾಭವನ್ನು ಭೂಮಾಲಕವರ್ಗ ಪಡೆಯಲು ಪ್ರಯತ್ನ ಮಾಡುತ್ತಿರುವುದರಿಂದ ಭೂಪಂಚಾಯುತಿಗಳಲ್ಲಿ ರೈತನಿಗೆ ಸರಿಯಾದ ನ್ಯಾಯ ಸಿಗುತ್ತಿಲ್ಲ. ಇದರ ವಿರುದ್ಧ ಹೋರಾಟಗಳು ನಡೆಯುತ್ತಲೇ ಇವೆ.

ಕಳೆದ ನಾಲ್ವತ್ತೈದು ವರ್ಷಗಳ ಹೋರಾಟದ ಫಲವಾಗಿ ಸ್ವಂತ ಒಕ್ಕಲತನಮಾಡದ ಭೂಮಾಲಕರ ಸಂಖ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಕನಿಷ್ಟ-ಗರಿಷ್ಟ ಹಿಡುವಳಿ ನಿಯಮಗಳಿಂದಾಗಿ ನೂರಾರು ಚಿಕ್ಕ-ಮಧ್ಯಮ ಹಿಡುವಳಿದಾರರು ಹುಟ್ಟಿಕೊಂಡಿದ್ದಾರೆ. ನೀರಾವರಿ ಯೋಜನೆಗಳಿಂದಾಗಿ ಇಂಥ ಹಿಡುವಳಿದಾರರಿಗೆ ಹೊಸ ಸಮಸ್ಯೆಗಳು ಹುಟ್ಟಿಕೊಂಡಿವೆ; ಹುಟ್ಟಿಕೊಳ್ಳುತ್ತಿವೆ.

ನಾಲ್ವತ್ತೈದು ವರ್ಷಗಳ ಹಿಂದಿನಂತೆ ಈಗ ರೈತನಿಗೆ ಬೆಳೆಯ ಪಾಲಿನ ಪ್ರಶ್ನೆಯಾಗಲೀ, ಸಂರಕ್ಷಿತ ರೈತನ ಪ್ರಶ್ನೆಯಾಗಲೀ ಉಳಿದಿಲ್ಲ. ದುಡಿಯುವವನೇ ಭೂಮಿಯ ಒಡೆಯನಾಗಬೇಕೆಂಬ ಪ್ರಶ್ನೆ ಪೂರ್ತಿಗೊಳ್ಳದೆ ಉಳಿದಿದ್ದರೂಕೂಡ, ಭೂಮಾಲಕರ ಜೊತೆಯಲ್ಲೇ, ಮಧ್ಯಮ, ಚಿಕ್ಕಹಿಡುವಳಿದಾರರೆಲ್ಲ ಕಳೆದ 870 ವರ್ಷಗಳಿಂದ ಹಲವಾರು ಹೊಸ ಸಮಸ್ಯೆಗಳನ್ನೆದುರಿಸಬೇಕಾಗಿದೆ.

ಸರ್ಕಾರದ ಬಂಡವಾಳಶಾಹಿ ನೀತಿಯಿಂದಾಗಿ ರೈತ ಬೆಳೆದ ಬೆಳೆಗಳಿಗೆ ಯೋಗ್ಯಬೆಲೆ ದೊರಕದಂತಾಗಿದೆ. ನೀರಾವರಿ ಪ್ರದೇಶಗಳಲ್ಲಿ ಭೂಮಿಯ ಸಮಪಾತಳಿಗೊಳಿಸುವುದು, ಒಡ್ಡುಹಾಕುವುದು, ಸರಿಯಾಗಿ ನೀರು ಒದಗಿಸುವುದು, ಅಗ್ಗದರದಿಂದ ಗೊಬ್ಬರ, ಒಕ್ಕಲತನದ ಸಾಮಗ್ರಿಗಳನ್ನೊದಗಿಸುವುದು, ತಾವು ಬೆಳೆದ ಬೆಳೆಗಳ ಮಾರಾಟ, ಉಗ್ರಾಣ ಮೊದಲಾದ ಸಮಸ್ಯೆಗಳು ಈಗ ರೈತರನ್ನೆದುರಿಸುತ್ತಿವೆ.

ಹೆಚ್ಚಿನ ಅಭಿವೃದ್ಧಿಕರ, ನೀರುತೆರಿಗೆ, ಒಕ್ಕಲತನ ಹುಟ್ಟುವಳಿಗಳ ಮೇಲೆ ಹೆಚ್ಚಿನಕರ ಕೊಡಬೇಕಾಗಿ ಬಂದಿದೆ. ಅದೇ ಸಮಯದಲ್ಲಿ ತಾನು ಬೆಳೆದ ಬೆಳೆಯನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕಾಗಿದೆ.

ಕಾರಣ ರೈತಸಂಘದ ಈಗಿನ ಸಮಸ್ಯೆಗಳಿಗೂ ಹಿಂದಿನ ಸಮಸ್ಯೆಗಳಿಗೂ ಬಹಳ ವ್ಯತ್ಯಾಸವಿದೆ. ಹಿಂದೆ ದುಡಿಯುವ ರೈತನೊಬ್ಬನೇ ಹೋರಾಡಬೇಕಾಗುತ್ತಿತ್ತು. ಆದರೆ ಈಗಿನ ಸಮಸ್ಯೆಗಳು ಎಲ್ಲ ವರ್ಗದ ರೈತರನ್ನೂ ಒಳವಡಿಸಿಕೊಂಡಿರುವುದರಿಂದ, ಈಗಿನ ಹೋರಾಟ ವಿಶಾಲ ತಳಹದಿಯಲ್ಲಿ ನಡೆಸಲು ಸಾಧ್ಯ. ಆದ್ದರಿಂದಲೇ ಎಲ್ಲ ರೈತವರ್ಗಗಳನ್ನೊಳಗೊಂಡ ರೈತರ ವಿಶಾಲ ಹೋರಾಟ, ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ನಡೆದಿವೆ. ಕರ್ನಾಟಕದಲ್ಲಿ ಈ ಹೋರಾಟವನ್ನು ವಿಶಾಲತಳಹದಿಯಲ್ಲಿ ಮುಂದುವರಿಸುವುದು ಅತ್ಯಗತ್ಯ.

ಹಿಂದಿನ ಕಾಲದಲ್ಲಿ ಗ್ರಾಮಾಂತರ ಪ್ರದೇಶದಲ್ಲಿದ್ದ ಸಾಮಂತಶಾಹಿ ಪದ್ಧತಿಯಿಂದಾಗಿ ದೊಡ್ಡ ಭೂಮಾಲಕವರ್ಗದಿಂದ ಸುಲಿಯಲ್ಪಟ್ಟು ಅರೆಹೊಟ್ಟೆ ತುಂಬಿಸಿಕೊಂಡು ಅರೆ ನಗ್ನಾವಸ್ತೆಯಲ್ಲಿ ಗುಲಾಮರಂತೆ ಜೀವಿಸುತ್ತಿದ್ದ. ರೈತ ಆ ಕಾಲದಲ್ಲಿ ನೇರವಾಗಿ, ಪೂರ್ಣವಾಗಿ ಸುಲಿಯಲ್ಪಡುತ್ತಿದ್ದ.

1965-70ರಿಂದ ರೈತನ ಸುಲಿಗೆ ಹೊಸ ರೂಪತಾಳಿದೆ. ಕೆಲವಂಶ ರೈತರು ನೇರವಾಗಿ ಭೂಮಾಲಕರಿಂದ ಸುಲಿಯಲ್ಪಡುವ ಪದ್ಧತಿ ಮುಂದುವರಿಯುತ್ತಿದೆ. ನಿಜ, ಆದರೆ ರೈತರ ಹೋರಾಟದಿಂದಾಗಿ ಬಂಡವಾಳಶಾಹಿ ಭೂಮಾಲಕರ ಪರ ಕಾಂಗ್ರೆಸ್ ಸರ್ಕಾರ ಭೂಮಸೂದೆಯಲ್ಲಿ ಮಾಡಿದ ಕೆಲವು ತಿದ್ದುಪಡಿಗಳಿಂದಾಗಿ ಬಹಳಷ್ಟು ರೈತರು ಚಿಕ್ಕ ಮಧ್ಯಮವರ್ಗದ ಹಿಡುವಳಿದಾರರಾಗಿದ್ದಾರೆ. ಇಷ್ಟು ವರ್ಷ ಭೂಮಾಲಕರ ಹೊಲದಲ್ಲಿ ಬೆಳೆದ ಬೆಳೆಯ ಪಾಲಿಗಾಗಿ, ಭೂಮಿ ಹಕ್ಕಿಗಾಗಿ ಹೋರಾಡಿದ ರೈತ, ಈಗ ತನ್ನ ಹೋರಾಟದ ಫಲವಾಗಿ ಪಡೆದ ಭೂಮಿಯ ಅಭಿವೃದ್ಧಿಗಾಗಿ, ಬೆಳೆದ ಬೆಳೆಗೆ ಯೋಗ್ಯಬೆಲೆಗಾಗಿ, ಸರ್ಕಾರ ಮತ್ತು ವ್ಯಾಪಾರಸ್ಥರ ಸುಲಿಗೆಯಿಂದ ಮುಕ್ತಿಗಾಗಿ ಹೋರಾಡುತ್ತಿದ್ದಾನೆ. ಹಿಂದೆ ಸಾಮಂತಶಾಹಿಯ ನೇರವಾದ ಸುಲಿಗೆ ನಡೆಯುತ್ತಿತ್ತು. ಈಗ ಬಂಡವಾಳಶಾಹಿಗಳಿಂದ ಅಪ್ರತ್ಯಕ್ಷ ಸುಲಿಗೆ ನಡೆಯುತ್ತಿದೆ.

ತಾನು ಗಳಿಸಿದ ಭೂಮಿಯನ್ನು ಸಮಪಾತಳಿಮಾಡಬೇಕು, ಒಡ್ಡು ಹಾಕಬೇಕು, ಬಾವಿ ಅಗೆಸಬೇಕು, ನೀರುಬಿಡಲು ಪಂಪುಸೆಟ್ಟುಕೊಳ್ಳಬೇಕು, ಅದನ್ನು ನಡೆಸಲು ಡೀಸೆಲ್-ವಿದ್ಯುಚ್ಛಕ್ತಿಬೇಕು, ಗೊಬ್ಬರಬೇಕು, ಇದಕ್ಕೆಲ್ಲಾ ಬ್ಯಾಂಕ್‌ಸಾಲಬೇಕು. ಕೊನೆಗೆ ತನ್ನ ಬೆಳೆಗೆ ನ್ಯಾಯಬೆಲೆ ಬೇಕು. ರೈತನು ಕೊಳ್ಳುವ ವಸ್ತುಗಳು ದುಬಾರಿಯಾಗಿದ್ದು, ಅವ ಬೆಳೆದು ಮಾರುವ ವಸ್ತುಗಳಿಗೆ ಯೋಗ್ಯಬೆಲೆ ಸಿಗದೆ, ಮಾರಾಟಕ್ಕಾಗಿ ವ್ಯಾಪಾರಿಗಳ, ಒಕ್ಕಲತನ ಹುಟ್ಟುವಳಿ ಕಮಿಟಿಗಳ ಸುಲಿಗೆಗೆ ತುತ್ತಾಗಬೇಕಾಗಿದೆ. ಇಷ್ಟೇ ಅಲ್ಲನೀರಾವರಿ ಪ್ರದೇಶಗಳಲ್ಲಿ, ನೀರಿನ ತೆರಿಗೆ, ಅಭಿವೃದ್ಧಿಕರ, ಒಕ್ಕಲತನ ಹುಟ್ಟುವಳಿಕರಗಳಿಂದ ಸುಲಿಯಲ್ಪಡಬೇಕಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರ್ಕಾರ ಅಧಿಕಾರದಲ್ಲಿ ಬರುವತನಕ ರೈತನ ಸುಲಿಗೆ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಇರುತ್ತದೆ. ಈಗಿನ ಸುಲಿಗೆ ಎಲ್ಲ ವರ್ಗದ ರೈತರನ್ನೂ ಆವರಿಸಿರುವುದರಿಂದ, ಈಗ ರೈತರ ಹೋರಾಟ ವಿಶಾಲತಳಹದಿಯಲ್ಲಿ ನಡೆಯಬೇಕಾಗಿದೆ. ಆಂಧ್ರ, ಮಹಾರಾಷ್ಟ್ರ ಪಂಜಾಬಗಳಲ್ಲಿ ಅಂಥ ಹೋರಾಟ ನಡೆಯುತ್ತಿದೆ. ಕರ್ನಾಟಕದಲ್ಲೂ ಹೋರಾಟ ಪ್ರಾರಂಭವಾಗಿದೆ. ಅದಕ್ಕೆ ವಿಶಾಲತಳಹದಿಯ ಸ್ವರೂಪಕೊಡುವ ಪ್ರಯತ್ನ ನಡೆದಿದೆ. ಕಾರಣ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲಾ ಒಂದಾಗಿ, ಬಹುಸಂಖ್ಯಾತ ರೈತರನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ವಿಶಾಲ ಹೋರಾಟ ನಡೆಸುವುದು ಅತ್ಯಗತ್ಯ. ಆ ದಿಸೆಯಲ್ಲಿ ಮುಂದುವರಿಯೋಣ.

ಎನ್. ಕೆ. ಉಪಾಧ್ಯಾಯ

ಚೀನಾದ ಹುನಾನ್ ಪ್ರಾಂತದ ರೈತ ಚಳುವಳಿ

(4ನೇ ಪುಟದಿಂದ)

ದುರಸ್ತಿಮಾಡಲ್ಪಟ್ಟವು. 'ಜನತೆಯನ್ನು ಹುರಿದುಂಬಿಸಬೇಕು; ಅವರು ಜಾಗೃತರಾಗಬೇಕು' ಎಂದು ಯಾವಾಗಲೂ ಹೇಳುತ್ತಿದ್ದ ಚಿಯಾಂಗ್-ಕೈ-ಶೇಕ್ ಮತ್ತು ಅವರ ಕಡೆಯವರು ನಿಜವಾಗಿಯೂ ಜನತೆ ಎಚ್ಚೆತ್ತಾಗ ಮರಣಾಂತಿಕ ಭಯದಿಂದ ನಡುಗಿದರು. ರೈತರ ಬಗ್ಗೆ ಬಹಳಷ್ಟು ಮೊಸಳೆಕಣ್ಣೀರು ಸುರಿಸುವ ಆಳುವ ವರ್ಗಗಳು ರೈತಚಳುವಳಿ ತಲೆಯೆತ್ತಿದಾಗ ಹೀಗೆ ಕಂಗಾಲಾಗಿ ಅದನ್ನು ಹೊಸಕಿಹಾಕಲು ಪ್ರಯತ್ನಿಸುತ್ತಾರೆಂಬುದಕ್ಕೆ ಇದೊಂದು ನಿದರ್ಶನ.

ರೈತರ ಚಳುವಳಿಯನ್ನೂ ಅವರು ಭೂಮಾಲಕ ಶ್ರೀಮಂತರ ಅಧಿಕಾರವನ್ನು ಕೊನೆಗಾಣಿಸಲು ಕೈಗೊಂಡ ಕ್ರಮಗಳನ್ನೂ ಅತಿರೇಕದ ಕ್ರಮಗಳೆಂದೂ, ರೈತರ ಹೋರಾಟವನ್ನು ಪುಂಡಪೋಕರಿಗಳ ಹೋರಾಟವೆಂದೂ ಟೀಕಿಸಿದವರಿಗೆ ಮಾವೋ ಈ ಉತ್ತರ ನೀಡಿದ್ದಾರೆ. "ರೈತರಿಗೆ ಯಾರು ಕೆಟ್ಟವರು, ಯಾರು ಒಳ್ಳೆಯವರು ಎಂಬುದು ಚೆನ್ನಾಗಿ ತಿಳಿದಿದೆ; ಯಾರನ್ನು ಕ್ಷಮಿಸಬೇಕು, ಯಾರನ್ನು ಶಿಕ್ಷಿಸಬೇಕು ಮತ್ತು ಎಷ್ಟು ಶಿಕ್ಷಿಸಬೇಕು ಎನ್ನುವ ವಿಷಯದಲ್ಲಿ ಅವರು ಯಾವತ್ತೂ ತಪ್ಪುವುದಿಲ್ಲ. ಅವರ ಪ್ರತಿಕ್ರಿಯೆ ಅವರಿಗಾದ ಅನ್ಯಾಯಗಳಿಗಿಂತ ಮೀರಿಲ್ಲ. ಎರಡನೆಯದಾಗಿ ಕ್ರಾಂತಿ ಎಂದರೆ ಭೋಜನಕೂಟವಲ್ಲ; ಪ್ರಬಂಧ ಬರೆಯುವ ಕೆಲಸವೂ ಅಲ್ಲ. ಕ್ರಾಂತಿ ಎಂದರೆ ಚಿತ್ರರಚನೆ ಅಲ್ಲ; ಕಸೂತಿ ಕೆಲಸ ಅಲ್ಲ. ಅದು ನಾಜೂಕಾಗಿರಲು ಸಾಧ್ಯವೇ ಇಲ್ಲ. ಸಾವಧಾನವಾಗಿ, ಸಭ್ಯವಾಗಿ, ಬೆಚ್ಚಗಾಗಿ ದಯೆ, ಕರುಣೆ ಮಿಶ್ರಿತ ಉದಾರತೆಗಳಿಂದ ಕ್ರಾಂತಿ ಸಾಧ್ಯವಿಲ್ಲ. ಕ್ರಾಂತಿ ಎಂದರೆ ಬಂಡಾಯ; ಒಂದುವರ್ಗ ಇನ್ನೊಂದುವರ್ಗವನ್ನು ಬಲಾತ್ಕಾರದಿಂದ ಕಿತ್ತೊಗೆಯುವುದು. ಅನ್ಯಾಯವನ್ನು ಅಳಿಸಿ ನ್ಯಾಯವನ್ನು ಉಳಿಸಲು ಬಲಪ್ರಯೋಗ ಅತ್ಯಗತ್ಯ. ಇಲ್ಲದಿದ್ದಲ್ಲಿ ನ್ಯಾಯ ಅಳಿದು ಅನ್ಯಾಯವೇ ಉಳಿದೀತು. ರೈತರ ಚಳುವಳಿ ಅತಿಯಾಯಿತು, ಮಿತಿಮೀರಿತು ಎನ್ನುವ ಉದ್ಗಾರವೆತ್ತುವವರು ಹೇಳುತ್ತಿರುವುದೇ ಅಪಸ್ವರ. ಅದನ್ನು ನಾವು ನಿರ್ದಾಕ್ಷಿಣ್ಯವಾಗಿ ವಿರೋಧಿಸಬೇಕು" ಎಂದಿದ್ದಾರೆ.

●

ಮಂತ್ರಿಗೆ ಬೇಕು ಕಾರು
ರೈತನಿಗೆ ಇಲ್ಲ ಸಾರು
ಮಂತ್ರಿ ಮನೆಗೆ ಬಂಗಾರ
ರೈತನ ಮಕ್ಕಳಿಗೆ ಅಂಗಾರ

ಮಂತ್ರಿ ಆದ ಭ್ರಷ್ಟ
ರೈತನಿಗೆ ಬಂತು ಕಷ್ಟ
ಮಂತ್ರಿ ಏರಿದ ಪಟ್ಟ
ರೈತ ಹತ್ತಿದ ಚಟ್ಟ

ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT